

## ಸರ್ವಮೂಲ ಸಂದೇಶ

### ನಾನಾ ಜನರ ಶುಶ್ರೂಷೆ ಎಂಬುದು ತೆರಿಗೆಯಿದ್ದಂತೆ

**ನಾನಾಜನಸ್ಯ ಶುಶ್ರೂಷಾ ಕರ್ಮಾಖ್ಯಾ ಕರವನ್ಮಿತೇಃ ।**
**ಯೋಗಾರ್ಥಿನಾ ತು ಸಾ ಕಾರ್ಯಾ ಯೋಗಸ್ಥೇನ ಹರೌ ಸ್ಥಿತಿಃ ॥**

ಪ್ರಜೆಗಳು ರಾಜನಿಗೆ ತೆರಿಗೆಯನ್ನು ಒಪ್ಪಿಸುವಂತೆ ಸಾಧಕನು ಭಗವಂತನ ಅನುಗ್ರಹಕ್ಕಾಗಿ ಉತ್ತಮ-ಮಧ್ಯಮ-ಅಧಮರಾದ ನಾನಾ ಬಗೆಯ ಜನರ ಶುಶ್ರೂಷಾ ರೂಪವಾದ ಕರ್ಮವನ್ನು ಮಾಡಬೇಕು. ಸಿದ್ಧ (ಅಪರೋಕ್ಷಜ್ಞಾನಿ) ನು ಸದಾ ಭಗವಂತನಲ್ಲಿ ಮನಸ್ಸಿಡಬೇಕು.

**-ತ್ರೈಲೋಕ್ಯಾಚಾರ್ಯ ಶ್ರೀಮದಾನಂದತೀರ್ಥ ಭಗವತ್ಪಾದರು**

ಸಂಪುಟ-೭ ಸಂಚಿಕೆ-೧ ಸರ್ವಜಿತ್ ಸಂ.॥ ಮಾರ್ಗಶೀರ್ಷ-ಪುಷ್ಯ ಜನವರಿ ೨೦೦೮

ಸಂಸ್ಥಾಪಕರು:
ಶ್ರೀ ಶ್ರೀ ವಿದ್ಯಾಧೀಶ ತೀರ್ಥ ಶ್ರೀಪಾದರು

ಶ್ರೀವಿದ್ಯಾಮಾನ್ಯ ಪ್ರಕಾಶನ
ಶ್ರೀಮದ್ ಹೃಷೀಕೇಶ ತೀರ್ಥ ಸ್ವಾಮಿಯರ್ ಸ್ಮಾರಕ ಟ್ರಸ್ಟ್ (ರಿ.)
ಶ್ರೀ ಪಲಿಮಾರು ಹೃಷೀಕೇಶ ಮಠ, ಉಡುಪಿ.

## ವಿಷಯಾನುಕ್ರಮಣಿಕೆ

| | |
|---|---|
| ಉದ್ಧವಗೀತೆ-ಶ್ರೀ ವಿದ್ಯಾಧೀಶತೀರ್ಥ ಶ್ರೀಪಾದರು | 1 |
| ಮುಖಪುಟ ಲೇಖನ | 4 |
| ರಜತಪೀಠ ಮಹಾತ್ಮ್ಯೆ | 6 |
| ಉಪನಿಷತ್ ಚಿಂತನ | 9 |
| ಧರ್ಮ-ಧಾರ್ಮಿಕರ ಅಂತರಂಗದ ವೇದನೆ | 11 |
| ಯುವಚಿಂತನ | 13 |
| ಶ್ರೀಮಧ್ವಚರಿತ್ರೆ- ಅನಂತಕೃಷ್ಣ ಆಚಾರ್ಯ | 17 |
| ದಾಸ ಸಾಹಿತ್ಯಸಾರ - ವಿ॥ ಹಯವದನ ಪುರಾಣಿಕ | 20 |
| ವಿದ್ವತ್ ಪ್ರಪಂಚ- ಶ್ರೀ ವಿದ್ಯಾಮಾನ್ಯ ತೀರ್ಥರು | 23 |
| ಪುರಾಣ ಪರಿಚಯ | 25 |
| ಧಾರ್ಮಿಕ ಚರ್ಚೆ | 27 |
| ಉಪನಿಷತ್ ಸಂದೇಶ | 29 |
| ಆಧ್ಯಾತ್ಮ ಪ್ರವೇಶ | 32 |
| ಜ್ಯೋತಿಷ ಮಿಮಾಂಸಾ | 34 |
| ಪುಸ್ತಕ ಪರಿಚಯ | 37 |
| ಉತ್ತರಗರ್ಭಿತ ಪ್ರಶ್ನೆ | 39 |
| ಯತಿಗಳ ವಿದೇಶಗಮನ ಹೇಗೆ ತಾನೇ ಅಭಿನಂದನಾರ್ಹ? | 42 |

**ಪ್ರಕಾಶಕರು**
ಶ್ರೀ ಶಿಬರೂರು ವೇದವ್ಯಾಸ ತಂತ್ರಿ, ಉಡುಪಿ

**ಪ್ರಧಾನ ಸಂಪಾದಕರು**
ವಿಸಗ್ರಿ ರಾಘವೇಂದ್ರ ಉಪಾಧ್ಯಾಯ, ಉಡುಪಿ

**ಸಂಪಾದನೆ ಹಾಗೂ ನಿರ್ವಹಣೆ:** ಶ್ರೀ ಅನಂತಕೃಷ್ಣ ಆಚಾರ್ಯ, ಉಡುಪಿ

**ಸಲಹಾ ಮಂಡಳಿ:**
ವಿ॥ಬಲರಾಮ ಭಟ್ಟ, ಉಡುಪಿ
ಶ್ರೀ ರಘುಪತಿ ತಂತ್ರಿ, ಬೆಂಗಳೂರು
ಶ್ರೀ ಗಿರೀಶ ಉಪಾಧ್ಯಾಯ, ಉಡುಪಿ

**ಅಕ್ಷರ ವಿನ್ಯಾಸ ಮತ್ತು ಜೋಡಣೆ:** ಶ್ರೀಮತಿ ಸ್ವಾತಿ ಭಾಗವತ್

**ಬಿಡಿಸಂಚಿಕೆ** : ರೂ. 8.00
**ವಾರ್ಷಿಕಚಂದಾ** : ರೂ. 90.00
**15 ವರ್ಷಕ್ಕೆ** : ರೂ. 1,250.00
**ಸದಸ್ಯರು** : ರೂ. 2,250.00
**ಪೋಷಕರು : ರೂ.** 3,000.00

ಭಾಗ–20



# ಉದ್ಧವಗೀತೆ

## ಯಾರ ಮಾತನ್ನು ನಂಬಬೇಕು ?

–ಶ್ರೀ ಶ್ರೀ ವಿದ್ಯಾಧೀಶ ತೀರ್ಥ ಶ್ರೀಪಾದರು
ಶ್ರೀ ಪಲಿಮಾರು ಮಠ, ಉಡುಪಿ

**ಸುಭಗಃ** – ಅಂದರೆ ಒಳ್ಳೆಯ ಭಗವುಳ್ಳವ ಎಂದರ್ಥ. ಭಗ ಎಂದರೆ ಐಶ್ವರ್ಯ. ಉಪದೇಶ ಮಾಡಬೇಕಾದರೆ ಐಶ್ವರ್ಯ ಯಾಕೆ ಬೇಕು ಎಂದು ಮೂಗು ಮುರಿಯಬೇಡಿ. ಯದು ಮಹಾರಾಜರು ಅವಧೂತ ಶಿಖಾಮಣಿಯನ್ನು ಉಪದೇಶಕ್ಕಾಗಿ ಪ್ರಾರ್ಥಿಸಿದಾಗ 'ಸುಭಗಃ' ಎಂದು ಬಣ್ಣಿಸಿದ್ದುಂಟು. ಭಗ ಎಂದರೆ ಆರು ಗುಣಗಳು. ಇವುಗಳನ್ನು ಅನುಸಂಧಾನ ಮಾಡಿಕೊಂಡೆ "ಸುಭಗ" ಎಂದು ಅವಧೂತರನ್ನು ಸ್ತುತಿಸಿದ್ದು. ಆ ಆರು ಗುಣಗಳು ಯಾವುವೆಂದರೆ

**ಐಶ್ವರ್ಯಸ್ಯ ಸಮಗ್ರಸ್ಯ ವೀರ್ಯಸ್ಯ ಯಶಸಃ ಶ್ರಿಯಃ ।**
**ಜ್ಞಾನವೈರಾಗ್ಯಯೋಶ್ಚೈವ ಷಣ್ಣಾಂ ಭಗ ಇತೀರಣಾ ।**

1. ಸಮಗ್ರ ಐಶ್ವರ್ಯ. 2. ವೀರ್ಯ 3. ಯಶಸ್ಸು 4. ಶ್ರೀ 5. ಜ್ಞಾನ 6. ವೈರಾಗ್ಯ– ಹೀಗೆ ಆರು ಗುಣಗಳನ್ನು ಭಗ ಎಂದು ಈ ಪ್ರಮಾಣ ವಿಶ್ಲೇಷಿಸಿದೆ.

ಒಂದು ವಾಕ್ಯ ಪ್ರಮಾಣವಾಗಬೇಕಾದರೆ ಹೇಳುವವರ, ಕೇಳುವವರ ಯೋಗ್ಯತೆಯು ಅತಿ ಪ್ರಮುಖವಾದ ಅಂಶ. ಶ್ರೀಮನ್ನ್ಯಾಯಸುಧಾಗ್ರಂಥದಲ್ಲಿ ಶ್ರೀಟೀಕಾರಾಯರು ಸುಂದರವಾಗಿ ಪಂಡಿತ–ಪಾಮರರನ್ನು ಮುಟ್ಟುವ ರೀತಿಯಲ್ಲಿ ಸಮರ್ಥಿಸಿದ್ದಾರೆ. ಹೇಳುವವ ವಕ್ತೃ, ಅವನು ಅನುಕೂಲನಾಗಿರಬೇಕು. ಅವಾಗಲೇ ಅವನು ನುಡಿದ ನುಡಿ ಪ್ರಮಾಣವಾಗುತ್ತದೆ. ಇದನ್ನೇ ವಕ್ತೃ ಆನುಕೂಲ್ಯ ಎಂದು ಕರೆಯುತ್ತಾರೆ. ಕೇಳುವವನು ಅನುಕೂಲನಾಗಿರಬೇಕು. ಆಗಲೇ ವಾಕ್ಯಪ್ರಮಾಣವಾಗುತ್ತದೆ. ಇದನ್ನೇ ಶ್ರೋತೃ ಆನುಕೂಲ್ಯ ಎಂದು ಕರೆಯುತ್ತಾರೆ.

ನಂಬಿದವರ ಸಲಹುವವರಲ್ಲಿ ಶ್ರೀಕೃಷ್ಣನೇ ಅಗ್ರಗಣ್ಯ



**ವಿವಕ್ಷಿತ ಅರ್ಥ ತತ್ವಜ್ಞಾನ:**– ಹೇಳಬೇಕಾದ ಪ್ರಮೇಯದ ಬಗ್ಗೆ ಸರಿಯಾದ ಅರಿವಿರಬೇಕು. ಅದರ ಬಗ್ಗೆ ಕಿಂಚಿತ್ತೂ ಗೊಂದಲವಿರಬಾರದು. ತನಗೆ ಸಂದೇಹವಿದ್ದರೆ ಹೇಳುವುದೆಲ್ಲಾ ಗೊಜಲು ಗೊಜಲಾಗಿಬಿಡುತ್ತದೆ. ಕೇಳುವವನಿಗೆ ತಲೆಯೆ ಹಾಳಾಗಿಬಿಡುತ್ತದೆ. ಹೇಳಬೇಕಾದ ತತ್ವದ ಜ್ಞಾನ ಹೇಳುವವನಿಗೆ ಇದ್ದಾಗ ಕೇಳುವವನಿಗೆ ಆ ವಾಕ್ಯ ಸರಿಯಾದ ಅರಿವನ್ನು ಉಂಟುಮಾಡುತ್ತದೆ. ಇವತ್ತಿನ ಉಪದೇಶಗಳು. ವಿಶ್ವಾಸ ಅನರ್ಹವಾಗಲು ಅರಿವಿನ ಕೊರತೆಯೇ ಕಾರಣ. ಅದಕ್ಕೆ ಯದುರಾಜನು ಅವಧೂತನಲ್ಲಿ "ಜ್ಞಾನ" ಎಂಬ ಭಗವನ್ನು ಗುರುತಿಸಿದ. ಅವಧೂತ ಸರಿಯಾದ ತತ್ವಜ್ಞಾನಿಯಾದ್ದರಿಂದಲೇ ಆತ ವಿವಕ್ಷಿತ ಅರ್ಥದ ತತ್ವಜ್ಞಾನವುಳ್ಳವ ಎಂದಾಯಿತು.

**ಅವಿಪ್ರಲಿಪ್ಸೆ:**– ಮೋಸ ಮಾಡಬೇಕು ಎನ್ನುವ ಕೆಟ್ಟ ಮನೋಭಾವ ಇರಬಾರದು ಎಂದರ್ಥ. ವಿಷ್ಣುವಿನ ಹತ್ತು ಅವತಾರಗಳಲ್ಲಿ ಒಂದಾದ ಬುದ್ಧನು ಮಾಡಿದ ಉಪದೇಶ ಸ್ವೀಕಾರ ಅರ್ಹವಾಗಲಿಲ್ಲ. ಭಗವಂತನೇ ಮಾಡಿದ ಉಪದೇಶ ವಿಶ್ವಾಸ ಅರ್ಹ ಅಲ್ಲ ಅಂದರೆ ಉಳಿದವರ ಪಾಡೇನು? ಎಂದು ಕೆಣಕಬೇಡಿ. ಅಂದು ಬುದ್ಧನ ಉಪದೇಶವನ್ನು ಕೇಳಿದವರು ಕೆಟ್ಟ ಜನರು, ಕೆಟ್ಟ ಯೋಗ್ಯತೆಯವರು, ಕತ್ತಲನ್ನೇ ಇಚ್ಛೆಪಡುವವರು, ಹಾಗಾಗಿ ಅಯೋಗ್ಯರಾದ ಶ್ರೋತೃಗಳು. ಶ್ರೋತೃ ಅನರ್ಹನಾದಾಗ ಉಪದೇಶ ಋಜು ಆಗಲಾರದು. ವಾಕ್ಯ ಪ್ರಮಾಣವಾಗಲು ಶ್ರೋತೃ ಆನುಕೂಲ್ಯವೂ ಅತ್ಯಗತ್ಯ. ಅಂದರೆ ಕೇಳುವವನು ಉಪದೇಶ ಮಾಡುವವನ ಅಭಿಮಾನಕ್ಕೆ ಪಾತ್ರನಾಗಬೇಕು ಎಂದರ್ಥ. ಶ್ರೋತೃ ಉಪದೇಶಕನ ಪ್ರೀತಿಯನ್ನು ಸಂಪಾದಿಸದಿದ್ದರೆ ಹೇಳುವವನಿಗೆ ಮೋಸ ಮಾಡಬೇಕೆಂಬ ಮನೋಭಾವ ಬರುವುದು ಸಹಜ. ಇದನ್ನೇ ವಿಪ್ರಲಿಪ್ಸೆ ಎನ್ನುತ್ತಾರೆ. ಕೇಳುವವನು ಯೋಗ್ಯನಾಗಿದ್ದಾಗ ಹೇಳುವವನಿಗೆ ವಿಪ್ರಲಂಭ(ಮೋಸ) ಮಾಡಬೇಕೆಂಬ ಬಯಕೆ ಇರಲಾರದು. ಆಗ ನಡೆಯುವ ಉಪದೇಶ ಪರಮ ಪ್ರಮಾಣವಾಗಿರುತ್ತದೆ. ಅವಧೂತನಲ್ಲಿ ಯದು ಈ ಅವಿಪ್ರಲಿಪ್ಸೆ ಎಂಬ ಗುಣವನ್ನು ಕಂಡ. ಮೋಸ ಮಾಡಬೇಕೆಂಬ ಆಸೆ ಬರುವುದು ಏನಾದರೂ ಅಪೇಕ್ಷೆ ಇದ್ದಾಗ. ವಿರಕ್ತನಿಗೆ ಯಾವ ಅಪೇಕ್ಷೆಯೂ ಇಲ್ಲ. ಅವಧೂತ ವಿರಕ್ತನಾದ್ದರಿಂದಲೇ, ಯಾವುದೇ ದುರಾಸೆ ಅವನನ್ನು ಕಾಡದೇ ಇದ್ದದ್ದರಿಂದಲೇ ಆತನಲ್ಲಿ ಅವಿಪ್ರಲಿಪ್ಸೆ ಇದೆ ಎಂದಾಯಿತು. ಇದನ್ನು ತಿಳಿಸಲೋಸುಗ ವೈರಾಗ್ಯ ಎಂಬಂತಹ ಭಗವನ್ನು ಅವಧೂತನಲ್ಲಿ ಯದು ಕಂಡು ಕೊಂಡ. ಅದ್ದರಿಂದ ಅವಧೂತನ ವಾಕ್ಯ ಪ್ರಮಾಣವಾಯಿತು.

ಇದು ವೇದ–ಮಹಾಭಾರತ ಮುಂತಾದ ಇತಿಹಾಸ–ಪುರಾಣಗಳ ಸಾರ.

**ಕರಣ ಪಾಟವ:–** ಕರಣ ಅಂದರೆ ಇಂದ್ರಿಯಗಳು. ಪಾಟವ ಅಂದರೆ ಸಾಮರ್ಥ್ಯ. ಮಾಡಿದ ಉಪದೇಶ ಪ್ರಮಾಣವಾಗಬೇಕಾದರೆ ಹೇಳುವ ಇಂದ್ರಿಯ ಸಮರ್ಥವಾಗಿರಬೇಕು. ಅಂದರೆ ಇಂದ್ರಿಯಗಳಲ್ಲಿ ದೋಷವಿರಬಾರದು. ಇಂದ್ರಿಯಗಳು ದುರ್ಬಲವಾದಾಗ ವರ್ಣಗಳಲ್ಲಿ ಸೌಷ್ಟವವಿಲ್ಲದೆ, ಅಕ್ಷರಗಳಲ್ಲಿ ಸ್ಪಷ್ಟತೆ ಇಲ್ಲದೆ, ಅಕ್ಷರಗಳೇ ಅಸ್ತವ್ಯಸ್ತವಾಗಿ ಅಜ್ಞಾನವನ್ನೋ, ವಿಪರೀತ ಜ್ಞಾನವನ್ನೋ ಉಂಟುಮಾಡುವ ಅಪಾಯ ಕಾದಿರುತ್ತದೆ. ಒಬ್ಬನಿಗೆ “ರ” ಹೇಳಲು ಬರುವುದಿಲ್ಲ ಅದರ ಜಾಗಕ್ಕೆ “ವ” ಹೇಳುತ್ತಾನೆ ಎಂದಿಟ್ಟುಕೊಳ್ಳಿ. ಊಟದ ಮಧ್ಯದಲ್ಲಿ “ಸಾರು ಬೇಕೇ” ಎಂದು ಹೇಳಬೇಕಾದಲ್ಲಿ “ರ” ಹೇಳಲು ಅಸಮರ್ಥನಾಗಿ “ವ” ಎಂದು ಹೇಳಿದರೆ ಅದೆಂತಹ ದುರಂತ. ಅದಕ್ಕೆ ಹೇಳುವುದು ಕರಣ ಪಾಟವ ಬೇಕು. ಅದಕ್ಕೆ ಯದು ಅವಧೂತನಲ್ಲಿ “ಶ್ರಿಯಃ” ಎಂದು ಹೇಳುತ್ತಾ ಕರಣಪಾಟವ ಇದೆ ಎಂದು ಮನದಟ್ಟುಮಾಡಿಕೊಟ್ಟನು.

## ಸ್ಪಷ್ಟೀಕರಣ

ಇತ್ತೀಚೆಗೆ ‘ತರಂಗ’ ವಾರಪತ್ರಿಕೆ ಹಾಗೂ ‘ಸುಗುಣಮಾಲಾ’ ಮಾಸಪತ್ರಿಕೆಯಲ್ಲಿ ಬನ್ನಂಜೆ ಗೋವಿಂದಾಚಾರ್ಯರ ಉಡುಪಿ ಅಂದು–ಇಂದು ಎಂಬ ಲೇಖನ ಪ್ರಕಟವಾಗಿದ್ದು ಅದರಲ್ಲಿ ಅನಂತೇಶ್ವರ ದೇವಾಲಯದಲ್ಲಿ ಶಂಕರ–ನಾರಾಯಣರನ್ನು ಜೊತೆಯಾಗಿ ಆರಾಧಿಸಲಾಗುತ್ತಿತ್ತು ಎಂದು ತಿಳಿಸಲಾಗಿದೆ. ನಿಮ್ಮ ಪತ್ರಿಕೆಯಲ್ಲಿ ನಾರಾಯಣನೇ ಅನಂತಪದ್ಮನಾಭರೂಪದಿಂದ ನೆಲೆಸಿದ್ದಾನೆ ಎಂದು ತಿಳಿಸಿದ್ದೀರಿ. ಈಗ ಅದಕ್ಕೆ ವಿರೋಧ ಬಂತಲ್ಲವೆ? ಎಂದು ಅನೇಕರು ಸರ್ವಮೂಲ ಮಾಸಪತ್ರಿಕೆಯ ಕಛೇರಿಗೆ ದೂರವಾಣಿಯ ಮೂಲಕ ಪ್ರಶ್ನಿಸಿದ್ದಾರೆ. ಅದಕ್ಕೆ ಉತ್ತರ ಹೀಗಿದೆ.

ವಸ್ತುತಃ ವಿದ್ಯಾರತ್ನಾಕರ ಬನ್ನಂಜೆ ಗೋವಿಂದಾಚಾರ್ಯರ ಲೇಖನಕ್ಕೂ ಸರ್ವಮೂಲಪತ್ರಿಕೆಯಲ್ಲಿ ಪ್ರಕಟವಾದ ವಿಷಯಕ್ಕೂ ಯಾವ ವಿರೋಧವೂ ಇಲ್ಲ. ಪೂರಕವೇ ಆಗಿದೆ. ಈ ದೇವಾಲಯದ ಅರ್ಚಕರಾಗಿದ್ದ ಕುಂಜತ್ತಾಯ ಮಾಧವ ಭಟ್ಟರಿಗೆ ಕನಸಿನಲ್ಲಿ ಅನಂತಪದ್ಮನಾಭದೇವರು ದರುಶನವಾಗುವವರೆಗೆ ಇಲ್ಲಿರುವ ದೇವರ ಬಗ್ಗೆ ಸಂಶಯವೇ ಇತ್ತು. ಆದ್ದರಿಂದ ಶಂಕರ–ನಾರಾಯಣ ಎಂದು ಆರಾಧಿಸಲಾಗುತ್ತಿತ್ತು. 12ನೇ ಶತಮಾನದ ಕುಂಜತ್ತಾಯ ಮಾಧವಭಟ್ಟರಿಗೆ ಕನಸಿನಲ್ಲಿ ಅನಂತಪದ್ಮನಾಭನಾಗಿ ಕಂಡ ಬಳಿಕ ಆ ಲಿಂಗದಲ್ಲಿ ಅನಂತಪದ್ಮನಾಭನೇ ನೆಲೆಸಿದ್ದಾನೆಂದು ಖಚಿತಪಡಿಸಿಕೊಂಡು ಹಾಗೆಯೇ ಆರಾಧಿಸತೊಡಗಿದರು. ಈ ಎಲ್ಲ ವಿಷಯಗಳು ಬನ್ನಂಜೆಯವರ ಲೇಖನದಲ್ಲಿ ಸ್ಪಷ್ಟವಾಗಿಯೇ ಇದೆ. ಅವರ ‘ಮಧ್ವವಿಜಯ’ ಸಂಸ್ಕೃತ ವ್ಯಾಖ್ಯಾನದಲ್ಲಿಯೂ ಅನಂತಪದ್ಮನಾಭನೆಂದು ಸ್ಪಷ್ಟವಾಗಿಯೇ ಉಲ್ಲೇಖಿಸಿದ್ದಾರೆ. ಆದ್ದರಿಂದ ಸಾಧಕರು ಗೊಂದಲಕ್ಕೊಳಗಾಗುವ ಅವಶ್ಯಕತೆ ಇಲ್ಲ.

**–ಸಂಪಾದಕ**

**ಆತನನ್ನು ನಂಬಿ ಕೆಟ್ಟವರಿಲ್ಲ.**



ಮುಖಪುಟ ಲೇಖನ

# ಆಚಾರ್ಯಾಃ ಶ್ರೀಮದಾಚಾರ್ಯಾಃ ಸಂತು ಮೇ ಜನ್ಮ ಜನ್ಮನಿ

–ಅನಂತಕೃಷ್ಣಾಚಾರ್ಯ

ಮಾಘಶುದ್ಧ ನವಮಿ (ಮಕರಮಾಸದ ನವಮಿ) ಯಂದು ತ್ರೈಲೋಕ್ಯಾಚಾರ್ಯರಾದ ಶ್ರೀಮಧ್ವರು ಮನುಷ್ಯ ದೃಷ್ಟಿಗೆ ಅಗೋಚರವಾಗಿ ಉತ್ತರಬದರಿಗೆ ತೆರಳಿದರೆಂದು ಪ್ರತೀತಿ. ಅದರಿಂದಲೆ ಅಂದು ಮಧ್ವನವಮಿ ಆಚರಣೆ. ಅದರ ನೆನಪಿಗಾಗಿಯೆ ಈ ಬಾರಿಯ ಸರ್ವಮೂಲ ಪತ್ರಿಕೆಯ ಮುಖಪುಟದಲ್ಲಿ ಆಚಾರ್ಯಮಧ್ವರ ಪ್ರತೀಕದ ಛಾಯಾಚಿತ್ರ ಕಂಗೊಳಿಸುತ್ತಿದೆ.

ಶ್ರೀಕೃಷ್ಣಮಠದ ಗರ್ಭಗುಡಿಯ ಉತ್ತರದಿಕ್ಕಿನ ಪ್ರವೇಶದ್ವಾರದ ಬಲಭಾಗದಲ್ಲಿರುವ ಚಿಕ್ಕಗುಡಿಯಲ್ಲಿ ಕಂಗೊಳಿಸುತ್ತಿರುವ ವಿಶಿಷ್ಟವಾದ ಈ ಆಚಾರ್ಯಮಧ್ವರ ಮೂರ್ತಿಯನ್ನೂ ಶ್ರೀವಾದಿರಾಜಗುರುಸಾರ್ವಭೌಮರು ಪ್ರತಿಷ್ಠಾಪಿಸಿದರೆಂದು ‘ಶ್ರೀವಾದಿರಾಜಗುರುವರಚರಿತಾಮೃತ’ ದಿಂದ ತಿಳಿದು ಬರುತ್ತದೆ.

ಇದು ಜ್ಞಾನಮುದ್ರೆಯಿಂದ ಕೂಡಿದ ಬಲಗೈ, ಅಭಯಮುದ್ರೆಯಿಂದ ಕೂಡಿದ ಎಡಗೈ, ಮಂದಹಾಸಯುಕ್ತವಾದ ಸುಂದರವಾದ ಮುಖ, ಯತಿಗಳಿಗೆ ಪ್ರಧಾನವಾದ ಕೌಪೀನ, ದಂಡ, ಕಮಂಡಲುಗಳಿಂದ ಸಹಿತವಾದ ಮೂರ್ತಿ, ಕಲ್ಯಾಣಿದೇವಿ ವಿರಚಿತವೆಂದು ಪ್ರಸಿದ್ಧವಾದ ಪೂರ್ಣಬೋಧಸ್ತೋತ್ರದ ನುಡಿಗಳನ್ನು ನೆನಪಿಸುತ್ತದೆ.

**ಭುಜಗಭೋಗಾಭಮುದ್ಯಮ್ಯ ಹೃದ್ಯಂ ನಿಜಭುಜಂ ದಕ್ಷಿಣಂ ಲಕ್ಷಣಾಢ್ಯಮ್ ।**
**ಲಲಿತಮುದ್ರಿಕ್ತವಿಜ್ಞಾನಮುದ್ರಂ ಭಜಭಜಾನಂತಮಿತ್ಯಾಲಪಂತಮ್ ।**
**ಪ್ರಣತವಾನ್ ಪ್ರಾಣಿನಾಂ ಪ್ರಾಣಭೂತಮ್ ।**
**ಪ್ರಣತಿಭಿಃ ಪ್ರೀಣಯೇ ಪೂರ್ಣಬೋಧಮ್ ॥**

ಹಾವಿನ ಶರೀರದಂತೆ ಮೃದುವಾಗಿ, ಸುಂದರವಾಗಿರುವ, ಲಕ್ಷಣಭರಿತವಾದ ತನ್ನ ಬಲಗೈಯನ್ನು ಎತ್ತಿ ಸುಂದರವಾದ ವಿಜ್ಞಾನಮುದ್ರೆಯಿಂದ ಹರಿಯನ್ನು ಭಜಸಿರಿ ಭಜಿಸಿರಿ ಎಂದು ಹೇಳುತ್ತಿರುವ ಪೂರ್ಣಬೋಧ ಮುನಿಯನ್ನು, ಜೀವಲೋಕದ

**ಇದು ಬರಿಯ ಮಾತಲ್ಲ, ಅನುಭಾವಿಗಳ ಅನುಭವದ ಮಾತು.**

ಉಸಿರಾದ ಪ್ರಾಣದೇವನನ್ನು ಕಾಲಿಗೆರಗಿ ಸ್ತುತಿವಚನಗಳಿಂದ ಒಲಿಸುತ್ತೇನೆ.

**ಭವದವೋಷ್ಣೇನ ತಾತಪ್ಯಮಾನಾನ್ ಭುವಿಪರಂ ನಾಥಮಪ್ರೇಕ್ಷಮಾಣಾನ್ ।**
**ಭುವನಮಾನ್ಯೇನ ಚಾನ್ಯೇನ ದೋಷ್ಣಾ ಭವತು ಭೀರ್ಮೇತಿ ನಃ ಸಾಂತ್ವಯಂತಮ್ ॥**
**ಪ್ರಣತವಾನ್ ಪ್ರಾಣಿನಾಂ ಪ್ರಾಣಭೂತಮ್ ।**
**ಪ್ರಣತಿಭಿಃ ಪ್ರೀಣಯೇ ಪೂರ್ಣಬೋಧಮ್ ।**

ಸಂಸಾರದ ಬೇಗೆಯಿಂದ ಬೇಯಲ್ಪಡುತ್ತಿರುವ, ಭುವಿಯಲ್ಲಿ ಮತ್ತೊಬ್ಬ ರಕ್ಷಕರಿಲ್ಲದೆ ತನ್ನನ್ನೇ ಶರಣು ಹೊಂದಿರುವ ನಮ್ಮನ್ನು ಲೋಕಮಾನ್ಯವಾದ ಮತ್ತೊಂದು ಕೈಯಿಂದ (ಎಡಗೈ) ಅಭಯಮುದ್ರೆಯ ಮೂಲಕ 'ಹೆದರಬೇಡಿ' ಎಂದು ಸಂತೈಸುತ್ತಿರುವ ಪೂರ್ಣಬೋಧ ಮುನಿಯನ್ನು, ಜೀವಲೋಕದ ಉಸಿರಾದ ಪ್ರಾಣದೇವನನ್ನು ಕಾಲಿಗೆರಗಿ ಸ್ತುತಿವಚನಗಳಿಂದ ಒಲಿಸುತ್ತೇನೆ.

## ಆಚಾರ್ಯಾಃ ಶ್ರೀಮದಾಚಾರ್ಯಾಃ ಸಂತು ಮೇ ಜನ್ಮಜನ್ಮನಿ

ಆಚಾರ್ಯರೆಂದು ಕರೆಸಿಕೊಂಡ ಅನೇಕರನ್ನು ಇತಿಹಾಸ ಕಂಡಿರಬಹುದು. ಆದರೆ ನಿಜವಾದ ಅರ್ಥದಲ್ಲಿ ಆಚಾರ್ಯರಾದವರು ಶ್ರೀಮಧ್ವರು ಮಾತ್ರ..

ಸಾಮಾನ್ಯವಾಗಿ ಪ್ರಸ್ಥಾನತ್ರಯ (ಗೀತಾಪ್ರಸ್ಥಾನ, ಉಪನಿಷ್ಪ್ರಸ್ಥಾನ, ಸೂತ್ರ ಪ್ರಸ್ಥಾನ) ಗಳಿಗೆ ಭಾಷ್ಯವನ್ನು ರಚಿಸದವರಿಗೆ 'ಆಚಾರ್ಯ' ಎಂಬ ಬಿರುದು. ಶಂಕರ, ರಾಮಾನುಜರಿಗೂ ಇದೇ ಕಾರಣದಿಂದ ಆಚಾರ್ಯ ಎಂದು ಕರೆಯುವುದುಂಟು. ಆದರೆ ಶ್ರೀಮಧ್ವರು ಗೀತೆಗೆ ಒಂದಲ್ಲ, ಎರಡು ಭಾಷ್ಯವನ್ನು ರಚಿಸಿದ್ದಾರೆ. ಸೂತ್ರಪ್ರಸ್ಥಾನಕ್ಕಂತೂ ನಾಲ್ಕು ಬಗೆಯ ಭಾಷ್ಯಗಳನ್ನು ರಚಿಸಿ ಆಚಾರ್ಯರಿಗೂ ಆಚಾರ್ಯರಾಗಿ ಮೆರೆಯುತ್ತಿದ್ದಾರೆ.

**ಆಚಿನೋತಿ ಹಿ ಶಾಸ್ತ್ರಾರ್ಥಂ ಆಚಾರೇ ಸ್ಥಾಪಯತ್ಯುತ ।**
**ಸ್ವಯಮಾಚರತೇ ಯಸ್ಮಾತ್ ಆಚಾರ್ಯಃಕ್ತೋ ಮನೀಷಿಭಿಃ ॥**

ಶಾಸ್ತ್ರಾರ್ಥಗಳನ್ನು ವಿವರಿಸಿ ಉಳಿದವರನ್ನು ಸದಾಚಾರದಲ್ಲಿ ನಿರತರಾಗುವಂತೆ ಮಾಡುತ್ತ ತಾನು ಶಾಸ್ತ್ರಕ್ಕನುಗುಣವಾಗಿ ನಡೆಸಕೊಳ್ಳುವವರನ್ನು ಜ್ಞಾನಿಗಳು ಆಚಾರ್ಯರೆಂದು

(38ನೇ ಪುಟದಲ್ಲಿ...)

ಆದ್ದರಿಂದ ಶ್ರೀ ಕೃಷ್ಣನನ್ನು ಸರ್ವೋತ್ತಮನೆಂದು ತಿಳಿದು ಆರಾಧಿಸಬೇಕು





ಸ್ಕಾಂದ ಪುರಾಣಾಂತರ್ಗತ

# ರಜತಪೀಠ ಮಹಾತ್ಮ್ಯೆ

~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~

*(ಹಿಂದಿನ ಸಂಚಿಕೆಯಿಂದ ಮುಂದುವರಿದುದು..........)*

**ಸೂತಃ**

**ಸಾಧುಪೃಷ್ಟಂ ದ್ವಿಜಶ್ರೇಷ್ಠ ಕಂಸಘ್ನಸ್ಯ ಗದಾಭೃತಃ ॥೨೫॥**
**ಕಥಾ ಶುಭಾ ಚ ಪೃಷ್ಟಾ ಚ ಜಾಹ್ನವೀವ ಪುನಾತಿ ಹಿ ॥**

ಎಲೈ, ಬ್ರಾಹ್ಮಣೋತ್ತಮನಾದ ಶೌನಕಮುನಿಯೇ, ಒಳ್ಳೆಯ ಪ್ರಶ್ನೆಯನ್ನು ಮಾಡಿದಿರಿ. ಕಂಸಸಂಹಾರಕನಾದ, ಗದಾಧಾರಿಯಾದ ಶ್ರೀಕೃಷ್ಣನ ಚರಿತೆಯು ಮಂಗಳಕರವಾದದ್ದು. ಕೇಳಬೇಕೆಂದು ನುಡಿದ ಪ್ರಶ್ನೆಯು ಗಂಗಾನದಿಯಂತೆ ಸರ್ವರನ್ನೂ ಪರಿಶುದ್ಧಗೊಳಿಸಿತು.

**ಪ್ರವಿಷ್ಟಃ ಕರ್ಣರಂಧ್ರೇಣ ಹೃದ್ಗುಹಾಂ ಸಕಲೇಶ್ವರಃ ॥೨೬॥**
**ತಮೋ ಹರಂತಿ ಹೃನ್ನಿಷ್ಠಂ ಸಹಸ್ರಾರ್ಕೋದಯದ್ಯುತಿಃ ।**
**ತತ್ಕಥಾಂ ತವ ವಕ್ಷ್ಯಾಮಿ ರಸಜ್ಞಾನಾಂ ಶುಭಾವಹಾಮ್ ॥೨೭॥**

ಯಾವ ಕಥೆಯನ್ನು ಕೇಳುವುದರಿಂದ ಸಕಲೇಶ್ವರನಾದ ಶ್ರೀಹರಿಯು ಕರ್ಣರಂಧ್ರದ ಮೂಲಕ ಹೃದಯಗುಹೆಯನ್ನು ಪ್ರವೇಶಿಸಿ ಸೂರ್ಯೋದಯವು ಕತ್ತಲೆಯನ್ನು ನಾಶಗೊಳಿಸುವಂತೆ ಸಾವಿರಾರು ಸೂರ್ಯೋದಯವನ್ನು ಮೀರಿಸುವ ತನ್ನ ಪ್ರಭೆಯಿಂದ ಅಜ್ಞಾನವೆಂಬ ಕತ್ತಲೆಯನ್ನು ನಾಶಗೊಳಿಸುತ್ತಾನೋ ಅಂತಹ ಶ್ರೀಕೃಷ್ಣನ ಭಕ್ತಿರಸವನ್ನು ಅರಿತವರಿಗೆ ಶುಭವನ್ನೀಯುವ ಕಥೆಯನ್ನು ನಿನಗೆ ಹೇಳುತ್ತೇನೆ.

**ಕದಾಚಿದ್ದೇವಕೀದೇವಿ ದ್ವಾರಕಾಯಾಂ ಸುತಂ ಹರಿಮ್ ।**
**ಉವಾಚ ಬಾಲಲೀಲಾನಾಂ ದರ್ಶನೋತ್ಸುಕಮಾನಸಾ ॥೨೮॥**

ಹಿಂದೊಮ್ಮೆ ದೇವಕೀದೇವಿಯು ತನ್ನ ಮಗನಾದ ಶ್ರೀಕೃಷ್ಣನ ಬಾಲಲೀಲೆಗಳನ್ನು

ಕೃಷ್ಣನ ಕಥೆಯನ್ನು ಕೇಳುತ್ತಿರಬೇಕು
~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~

ನೋಡಲಿಚ್ಛೆಯುಳ್ಳವಳಾಗಿ ತನ್ನ ಮಗನಾದ ಕೃಷ್ಣನನ್ನು ಕುರಿತು ಹೀಗೆಂದಳು.

**ಯಶೋದಾ ಬಾಲಲೀಲಾಸ್ತೇ ವಿಲೋಕ್ಯ ಪರಮಾಂ ಮುದಂ ।**
**ಜಗಾಮ ಕಿಲ ತತ್ರೈಕಾಂ ಲೀಲಾಂ ಮೇ ಕೃಷ್ಣ ದರ್ಶಯ ॥೨೯॥**

ಹೇ ಕೃಷ್ಣನೇ, ಯಶೋದಾದೇವಿಯು ನಿನ್ನ ಬಾಲಲೀಲೆಗಳನ್ನು ವೀಕ್ಷಿಸಿ ಪರಮ ಸಂತೋಷವನ್ನೈದಿದಳಷ್ಟೆ. ಅವುಗಳಲ್ಲಿ ಯಾವುದಾದರೂ ಒಂದು ಲೀಲೆಯನ್ನಾದರೂ ನನಗೆ ತೋರಿಸು.

**ಏವಂ ಮಾತ್ರಾ ಚೋದಿತೋ ದ್ವಾರಕಾಯಾಂ**
**ಕೃಷ್ಣೋ ಭೂತ್ವಾ ಬಾಲಕಃ ಕರ್ಹಿಚಿತ್ ತಾಂ ।**
**ಪ್ರಾಪಾಮಂದಂ ದಧಿ ಸಂಲೋಡಯಂತೀಂ**
**ಲೀಲಾಭಾವೈ ರಂಜಯನ್ಮಾತೃಚಿತ್ತಮ್ ॥೩೦॥**

ಹೀಗೆ ತಾಯಿಯಿಂದ ಪ್ರೇರಿಸಲ್ಪಟ್ಟ ಕೃಷ್ಣನು ಒಂದು ದಿನ ಆಕೆಯ ಅಭೀಷ್ಟದಂತೆ ಬಾಲಕನಾಗಿ ಬಳಿ ಬಂದನು. ಮೊಸರನ್ನು ಕಡೆಯುತಲಿರುವ ಆ ಜನನಿಯ ಮನವನ್ನು ತನ್ನ ಆಟಗಳಿಂದ ಸಂತೋಷಪಡಿಸಿದನು.

**ತದಂಕಮಾರುಹ್ಯ ಪಪೌ ಸೃತಂ ಸ ಸ್ತನ್ಯಂ ತದಾಸ್ಯಂ ಪ್ರಸಮೀಕ್ಷಮಾಣಃ ।**
**ತದಾ ತದೀಕ್ಷಾವಿವಶಾಂತರಾ ಸಾ ಸುಖಾಂಬುರಾಶೌ ವಿಜಹಾರ ದೇವಕೀ ॥೩೧॥**

ಆಕೆಯ ತೊಡೆಯ ಮೇಲೆ ಮಲಗಿಕೊಂಡು ಆ ದೇವಿಯ ಮುಖವನ್ನೀಕ್ಷಿಸುತ್ತಾ ಸ್ತನ್ಯಪಾನವನ್ನು ಮಾಡುತ್ತಲಿರಲು, ಶ್ರೀಹರಿಯ ಕಟಾಕ್ಷವೀಕ್ಷಣದಿಂದ ಮೋಹಗೊಂಡ ಆ ದೇವಕೀದೇವಿಯು ಆನಂದಸಾಗರನಾದ ಆ ಶ್ರೀಹರಿಯಲ್ಲಿ ಲಗ್ನ ಮನಸ್ಸುಳ್ಳವಳಾಗಿ ಪರಮಾನಂದಭರಿತಳಾದಳು.

**ದಧ್ಯಮತ್ರಂ ವಿಭಜ್ಯಾಥ ನವನೀತಂ ಪ್ರಭಕ್ಷಯನ್ ।**
**ನವನೀತವಿಲಿಪ್ತಾಂಗೋ ಮಂಥಾನಂ ದಾಮ ಚಾಹರತ್ ॥೩೨॥**

ಮೊಸರಿನ ಗಡಿಗೆಯನ್ನು ಒಡೆದು ಅದರಲ್ಲಿದ್ದ ಬೆಣ್ಣೆಯನ್ನು ಮೆದ್ದು, ಮೈಗೆ

ಅವನಿಗೆ ಅರ್ಪಿಸಿದ ಪವಿತ್ರಾನ್ನವನ್ನು ಸ್ವೀಕರಿಸಬೇಕು.



ಪೂಸಿಕೊಂಡು ಮೊಸರು ಕಡೆಯುವ ಕಡೆಗೋಲನ್ನೂ ಹಾಗೂ ಅದರ ಹಗ್ಗವನ್ನೂ ಅಪಹರಿಸಿದನು.

**ಕಾಲಮಲ್ಪಂ ವಿಹೃತ್ಯೈವಮಾಕೃತಿಂ ತಾಮಥಾಪ್ಯಧಾತ್ ।**
**ದೇವಕೀ ಚಾತಿಸಂತುಷ್ಟಾ ವಿಸ್ಮಿತಾ ಚಾಭವನ್ಮುಹುಃ ॥೩೩॥**

ಸ್ವಲ್ಪಕಾಲ ಹೀಗೆ ಬಾಲಕ್ರೀಡೆಗಳನ್ನು ತೋರಿಸಿ ಬಳಿಕ ಆ ರೂಪವನ್ನು ಅಂತರ್ಧಾನಗೊಳಿಸಿದನು. ಆ ದೇವಕೀದೇವಿಯು ಅತ್ಯಂತ ಸಂತುಷ್ಟಳಾಗಿ ಮತ್ತೆ ಮತ್ತೆ ನೆನೆದು ಆಶ್ಚರ್ಯಚಕಿತಳಾದಳು.

**ತದೈವ ಭೈಷ್ಮೀ ಚ ಸಮೀಕ್ಷ್ಯ ಮಾಧವಂ**
**ಸದಾಽಪ್ಯನಂತಾಕೃತಿದೃಷ್ಟಿಮತ್ಯಪಿ ।**
**ಪುನಃಪುನರ್ನೂತನಮೇತದಾಕೃತಿಂ**
**ನಿರ್ಮಾಪಯಾಮಾಸ ಮುದಾ ತದಾಕೃತಿಮ್ ॥೩೪॥**

ಅದೇ ಸಂದರ್ಭದಲ್ಲಿ ರುಕ್ಮಿಣೀದೇವಿಯು ತಾನು ಸದಾ ಶ್ರೀಕೃಷ್ಣನ ಅನಂತರೂಪಗಳನ್ನು ನೋಡುತಲಿರುವವಳಾದರೂ ಮತ್ತೆ ಮತ್ತೆ ಹೊಸತನದಿಂದ ತುಂಬಿರುವ ಈ ರೂಪವನ್ನು ಕಂಡು ಆನಂದದಿಂದ ಅದರಂತೆಯೇ ಇರುವ ವಿಗ್ರಹವನ್ನು ಕೆತ್ತಿಸಿದಳು.

**ಕೃಷ್ಣಾಜ್ಞಯಾ ನಿರ್ಮಿತಂ ತತ್ ಸ್ವರೂಪಂ ವಿಶ್ವಕರ್ಮಣಾ ।**
**ತದ್ರೂಪೇ ಭಗವಾನ್ವಿಷ್ಣುಃ ಸ್ವಯಂವ್ಯಕ್ತೋ ಬಭೂವ ಹ ॥೩೫॥**

ಶ್ರೀಕೃಷ್ಣನ ಆಜ್ಞೆಯಿಂದ ದೇವಶಿಲ್ಪಿಯಾದ ವಿಶ್ವಕರ್ಮನಿಂದ ನಿರ್ಮಿಸಲ್ಪಟ್ಟ ಆ ಪ್ರತಿಮೆಯಲ್ಲಿ ಭಗವಂತನಾದ ಸರ್ವವ್ಯಾಪಕನಾದ ಶ್ರೀಕೃಷ್ಣನು ತಾನೇ ಪ್ರಕಟಗೊಂಡನು. ಇದು ಆನಂದದ ವಿಷಯ.

**(ಮುಂದುವರಿಯುವುದು)**

ಶ್ರೀ ಕೃಷ್ಣನ ಮೂರ್ತಿಯನ್ನು ಸಂದರ್ಶಿಸಬೇಕು.

ಉಪನಿಷತ್ ಚಿಂತನ                                    ಭಾಗ-15

# ತೈತ್ತಿರೀಯೋಪನಿಷತ್

ಬರಹ: ಪಿ. ವೆಂಕಟರಮಣ ಆಚಾರ್ಯ, ಉಡುಪಿ                ಪ್ರವಚನ:ಬನ್ನಂಜೆ ಗೋವಿಂದಾಚಾರ್ಯ

**ಸತ್ಯಂ ವದಿಷ್ಯಾಮಿ** – ಸತ್ಯ ಎಂದರೆ ನಿರ್ದುಷ್ಟವಾದ ಆನಂದ. ನಮ್ಮ ಆನಂದ ದುಷ್ಟವಾದುದು. ನಮ್ಮ ಆನಂದಕ್ಕೆ ಮಿತಿ ಇದೆ. ನಮಗೆ ಆಗುವ ಆನಂದಕ್ಕಿಂತ ಹೆಚ್ಚಿನ ಆನಂದ ಬೇರೊಂದು ಇದೆ.

ಸತ್ ಎಂದರೆ ಯಾವಾಗಲೂ ಇರುವಂಥಾದ್ದು. ಅಂದರೆ ನಿತ್ಯ. ಹೀಗೆ ನಿತ್ಯ, ನಿರತಿಶಯ, ನಿರ್ದುಃಖವಾದ ಜ್ಞಾನ, ಆನಂದ ಯಾವುದರಲ್ಲಿ ಇದೆಯೋ ಅದು ಸತ್ಯ. ನಾವು ಅಸತ್ಯರು. ಜಗತ್ತು ದುಃಖವುಳ್ಳದ್ದು. ಭಗವಂತನ ಮುಖ್ಯ ಪ್ರತೀಕನಾದ ಪ್ರಾಣದೇವನೇ ನೀನು ಅವನ ನಂತರ ಸತ್ಯ.

ಯಾರು ಸದ್ಗುಣಭರಿತನೋ ಅವನು ಸತ್ಯ. ನಾವು ದುರ್ಗುಣಗಳಿಂದ ಕೂಡಿದವರು. ನಿನ್ನನ್ನು ಸದ್ಗುಣಭರಿತನೆಂದು ಶಿಷ್ಯರಿಗೆ ಉಪದೇಶಿಸುತ್ತೇನೆ.

ವೇದ ಯಾರನ್ನು ಕೊಂಡಾಡುತ್ತದೆಯೋ ಅದು ಸತ್ಯ. ವೇದವು ಮೊದಲು ಭಗವಂತನನ್ನು ಕೊಂಡಾಡುತ್ತದೆ. ನಂತರ ಪ್ರಾಣದೇವನನ್ನು. ಹೀಗೆಂದು ಶಿಷ್ಯರಿಗೆ ಉಪದೇಶಿಸುತ್ತೇನೆ.

ಸತ್ ಎಂದರೆ ಪೃಥ್ವಿ, ಆಪ್, ತೇಜಸ್ಸು, (ನೆಲ, ನೀರು ಬೆಂಕಿ) ಇವು ಮೂರು ಕಣ್ಣಿಗೆ ಕಾಣುವಂಥಹವು. 'ತ್ಯ' ಎಂದರೆ ವಾಯು ಹಾಗೂ ಆಕಾಶ ಇವೆರಡು ಕಣ್ಣಿಗೆ ಕಾಣದವುಗಳು. ಇವುಗಳಲ್ಲಿ ಪಂಚರೂಪಗಳಿಂದ ತುಂಬಿಕೊಂಡಿರುವ ಭಗವಂತ ಹಾಗೂ ನಿನ್ನನ್ನು ಸತ್ಯವೆಂದು ಉಪದೇಶಿಸುತ್ತೇನೆ.

'ಸತ್' ಎಂದರೆ ಮುಕ್ತರು, 'ತ್'ಎಂದರೆ ಅಮುಕ್ತರು. 'ಯಃ' ಎಂದರೆ ನಿಯಾಮಕ, ಅಂದರೆ ಯಾರು ಮುಕ್ತಾಮುಕ್ತರಿಗೆ ನಿಯಾಮಕನೋ ಅವನು ಸತ್ಯ. ಇದು ಕೇವಲ ಭಗವಂತ ಮಾತ್ರ. ಆದ್ದರಿಂದ ಅವನೇ ಸತ್ಯ.

ಸತ್ಯ ಎಂಬುದು ಸೃಷ್ಟ್ಯಾದ್ಯಷ್ಟಕ ಶಬ್ದ. ಸತ್–ಸೃಷ್ಟಿ, ತಿ–ಲಯ, ಯ–ನಿಯಮನ.

ಪ್ರತಿದಿನ ಆತನನ್ನು ಪೂಜಿಸಬೇಕು



ಯಾರು ಸೃಷ್ಟಿ ಸ್ಥಿತಿಲಯಗಳಿಗೆ ಕಾರಣನೋ ಅವನು ಸತ್ಯ. ಮೊದಲು ಭಗವಂತ ನಂತರ ಪ್ರಾಣದೇವ.

ಭಗವಂತ ಜಗತ್ತಿಗೆ ಸಂಬಂಧಿಸಿದ 8 ಕ್ರಿಯೆಗಳನ್ನು ಮಾಡುತ್ತಿದ್ದಾನೆ. ಸೃಷ್ಟಿ, ಸ್ಥಿತಿ, ಸಂಹಾರ, ನಿಯಮನ. ಇವು ನಾಲ್ಕು ಜಡಕ್ಕೆ ಸಂಬಂಧಪಟ್ಟದ್ದಾದರೆ ಜ್ಞಾನ, ಅಜ್ಞಾನ, ಬಂಧ ಹಾಗೂ ಮೋಕ್ಷ ಇವು ನಾಲ್ಕು ಚೇತನ ವರ್ಗಕ್ಕೋಸ್ಕರ ಇರುವಂಥಹವುಗಳು. ಈ 8 ಕ್ರಿಯೆಗಳನ್ನು ಕೇವಲ ಭಗವಂತ ಮಾತ್ರ ಮಾಡುತ್ತಿದ್ದಾನೆ. ಭಗವಂತ ಯಾರು? ಅವನನ್ನು ಹೇಗೆ ತಿಳಿಯುವುದು? ಅವನ ಗುಣ ಏನು ಎಂದು ಕೇಳಿದರೆ, ಅದಕ್ಕೆ ವೇದವ್ಯಾಸರು, ಯಾರು ಈ 8 ಕ್ರಿಯೆಗಳನ್ನು ಜಗತ್ತಿಗೆ ಮಾಡುತ್ತಾ ಇದ್ದಾನೋ ಅವನು ಭಗವಂತ ಎಂದು ಹೇಳಿದ್ದಾರೆ. ಆದ್ದರಿಂದ ಅವನು ಸತ್ಯ. ಉಳಿದುದ್ದೆಲ್ಲ ಅಸತ್ಯ. ಸತ್ಯ ಎಂದರೆ ಸತ್ +ಯ. ಸತ್ ಎಂದರೆ ಉತ್ಪತ್ತಿ, ಸ್ಥಿತಿ, ಅಸ್ತಿತ್ವ. ಯ ಎಂದರೆ ತಂದುಕೊಡುವವ. ಯಾರು ಅಸ್ತಿತ್ವವನ್ನು ಕೊಡುತ್ತಾನೋ ಅವನು ಸತ್ಯ. ಅಂದರೆ ಸೃಷ್ಟಿಗೆ ಕಾರಣನಾದ ಸತ್ಯ.

ಸತ್ಯ–ಇರುವಿಕೆ, ಹುಟ್ಟುವಿಕೆಯು ಆಗಬಹುದು, ಸಃ ಗೃಹೇ ಅಸ್ತಿ ಎಂದರೆ ಅವನು ಮನೆಯಲ್ಲಿ ಇದ್ದಾನೆ, ಅಂದರೆ ಬದುಕಿದ್ದಾನೆ ಎಂದು ಅರ್ಥ. ಆದ್ದರಿಂದ ಸ್ಥಿತಿಯನ್ನು ಕೊಡುವವ ಸತ್ಯ.

ಸತ್ ಎಂದರೆ ನಾಶ ಎಂಬುವದಾಗಿಯೂ ಅರ್ಥ ಇದೆ. ಸಂಹಾರ ಕರ್ತೃ ಆದ್ದರಿಂದ ಅವನು ಸತ್ಯ.

ಸತ್ ಎಂದರೆ ನಿಯಮನ. ಯಾವುದು ಎಲ್ಲೆಲ್ಲಿ ಇದೆಯೋ ಅವುಗಳೆಲ್ಲವನ್ನು ನಿಯಮಿಸುವವನು ಸತ್ಯ.

ಈ ಸಂಸಾರ ಬಂಧನದಿಂದ ನಮ್ಮನ್ನು ಪಾರುಗೊಳಿಸಿ ಮೋಕ್ಷಕೊಡುವವನು ಅವನೇ. ಆದ್ದರಿಂದ ಅವನು ಸತ್ಯ.

ಈ ಸಂಸಾರದಿಂದ ನಮ್ಮನ್ನು ಬಿಡಿಸಿ ನಮ್ಮ ಯೋಗ್ಯತೆಗೆ ಅನುಸಾರವಾಗಿ ಮೋಕ್ಷವಾಗಲಿ ಅಥವಾ ತಮಸ್ಸಾಗಲಿ ಅಥವಾ ನಿತ್ಯ ಸಂಸಾರಿಯಾಗಲಿ ಮಾಡುವವನು ಅವನು ಆದ್ದರಿಂದ ಅವನು ಸತ್ಯ.

**(ಮುಂದುವರಿಯುವುದು)**

ಕೃಷ್ಣನ ಪಾದದ ತುಳಸಿಯನ್ನು ಆಘ್ರಾಣಿಸಬೇಕು.

# ಧರ್ಮ–ಧಾರ್ಮಿಕರ ಅಂತರಂಗದ ವೇದನೆ

–ಅನಂತಕೃಷ್ಣಾಚಾರ್ಯ

ಮಹಾಭಾರತದಲ್ಲಿ ಶ್ರೀಕೃಷ್ಣ ಅರ್ಜುನನಿಗೆ ತಿಳಿಸುವ ಮಾತು ಹೀಗಿದೆ.

**ಅಹಿಂಸಾ ಸರ್ವಭೂತಾನಾಂ ಏತತ್ ಕೃತ್ಯತಮಂ ಮತಮ್ ।**
**ಏತತ್ ಪದಮನುದ್ವಿಗ್ನಂ ವರಿಷ್ಠಂ ಧರ್ಮಲಕ್ಷಣಮ್ ॥** (ಆಶ್ವಮೇಧಿಕ ಪರ್ವ 50–2)

ಸಮಸ್ತ ಪ್ರಾಣಿಗಳಿಗೆ ಹಿಂಸೆಯನ್ನು ಮಾಡದಿರುವುದೇ ಸರ್ವೋತ್ತಮವಾದ ಕಾರ್ಯವೆಂಬುದು ಜ್ಞಾನಿಗಳ ಅಭಿಪ್ರಾಯ. ಇದೇ ಯಾವ ಉದ್ವಿಗ್ನತೆಯೂ ಇಲ್ಲದ, ಸರ್ವಶ್ರೇಷ್ಠವಾದ, ಧರ್ಮವೆಂದು ತಿಳಿಯಲ್ಪಡುವ ಮೋಕ್ಷಸಾಧನ.

ಶ್ರೀಕೃಷ್ಣನು ಅಹಿಂಸೆಯ ಮಹತ್ತ್ವವನ್ನೂ ಜಗತ್ತಿಗೆ ಒತ್ತಿ ಹೇಳಿದ ಮಾತಿದು. ಜಗತ್ತಿನಲ್ಲಿ ಯಾವ ಜಂತುವಿಗೂ ಉದ್ದೇಶಪೂರ್ವಕವಾಗಿ ವಾಚಿಕ–ಕಾಯಿಕ–ಮಾನಸಿಕವಾಗಿ ಹಿಂಸೆಯನ್ನುಂಟು ಮಾಡಬಾರದೆಂದು ಶ್ರೀಕೃಷ್ಣನ ಅಭಿಪ್ರಾಯ.

ಆದರೆ 2008ರ ಜನವರಿ 18ರಂದು ಶ್ರೀಕೃಷ್ಣನ ಈ ಮಾತಿಗೆ ವಿರುದ್ಧವಾದ ಘಟನೆ ಉಡುಪಿಯಲ್ಲಿ ನಡೆದು ಹೋಯಿತು. ಅಂದು ಪುತ್ತಿಗೆ ಮಠದ ಶ್ರೀಸುಗುಣೇಂದ್ರತೀರ್ಥರು ಅಷ್ಟಮಠಾಧೀಶರೂ ಒಳಗೊಂಡಂತೆ ಅನೇಕ ಮಾಧ್ವಪೀಠಾಧಿಪತಿಗಳ, ಲಕ್ಷಾಂತರ ಧಾರ್ಮಿಕರ ಮನಸ್ಸಿಗೆ ವೇದನೆಯನ್ನುಂಟುಮಾಡುವ ಕಾರ್ಯವನ್ನು ಯಾವ ಸಂಕೋಚವೂ ಇಲ್ಲದೆ ನೆರವೇರಿಸಿಯೇ ಬಿಟ್ಟರು.

ಇದು ಪುತ್ತಿಗೆ ಶ್ರೀಗಳನ್ನು ಆಕ್ಷೇಪಿಸುವ ಲೇಖನವಲ್ಲ. ದ್ವೇಷದಿಂದ ಬರೆದದ್ದೂ ಅಲ್ಲ. ನೊಂದ ಮನಸ್ಸೊಂದು ತನ್ನಂತೆಯೇ ನೊಂದಿರುವ ಸಾವಿರಾರು ಮನಸ್ಸುಗಳೊಂದಿಗೆ ತನ್ನ ವೇದನೆಯನ್ನು ಹಂಚಿಕೊಂಡು ಹಗುರಾಗಲು ಯತ್ನಿಸುವ ಲೇಖನ.

ಜಗತ್ತಿನಲ್ಲಿ ಪ್ರತಿಯೊಬ್ಬ ವ್ಯಕ್ತಿಗೂ ಏನಾದರೊಂದು ಸಾಧಿಸಬೇಕೆಂಬ ಛಲವಿರುತ್ತದೆ. ಕೆಲವರಿಗೆ ಸಾಧಿಸಲು ಸಾಧ್ಯವಾಗಬಹುದು. ಕೆಲವರಿಗೆ

ಹಾಗೆಂದು ಉಳಿದ ದೇವತೆಗಳಲ್ಲಿ ತಿರಸ್ಕಾರ ಬೇಡ.



ಸಾಧ್ಯವಾಗದೆಯೂ ಇರಬಹುದು. ಸಾಧ್ಯವಾಗದಿರಲು ಅಸಾಮರ್ಥ್ಯ, ಅಪರಿಪಕ್ವತೆ, ಅಸಹಕಾರ ಹೀಗೆ...ಅನೇಕ ಕಾರಣಗಳು. ಒಂದೊಮ್ಮೆ ಈ ಯಾವ ಕಾರಣಗಳು ಇಲ್ಲದಿದ್ದರೂ, ತಾನು ಕಾರ್ಯವನ್ನು ಸಾಧಿಸಲು ಸಮರ್ಥನಾಗಿದ್ದರೂ ಸಜ್ಜನನಾಗಿದ್ದರೆ ಮೊದಲು ಗಮನಿಸುವುದು 'ಈ ಕಾರ್ಯದಿಂದ ಯಾರಿಗಾದರೂ ಹಾನಿ ಇದೆಯೇ?' ಎಂದು. ಒಬ್ಬ ಸಜ್ಜನನಿಗೆ ಹಾನಿ ಉಂಟಾಗುತ್ತದೆಂದು ಮನವರಿಕೆಯಾದರೂ ಕೂಡಲೆ ಆ ಕಾರ್ಯದಿಂದ ಹಿಂದೆ ಸರಿಯುವುದುಂಟು.

ಆದರೆ ಪುತ್ತಿಗೆ ಶ್ರೀಗಳಿಗೆ ಇದ್ಯಾವುದೂ ಲೆಕ್ಕಕ್ಕೇ ಬರಲಿಲ್ಲವೆಂಬುದು ದುಃಖದ ಸಂಗತಿ. ರಾಜ್ಯಾದ್ಯಂತ ಲಕ್ಷಲಕ್ಷ ಮಂದಿ ಬೇಡವೆಂದು ಬೇಡಿಕೊಂಡರೂ, ವಿದ್ವಾಂಸರ ಗಡಣವೇ ಸೇರಿ ಶ್ರೀಕೃಷ್ಣಪೂಜೆ, ಸರ್ವಜ್ಞಪೀಠಾರೋಹಣದಿಂದ ದೂರಾಗಬೇಕೆಂದು ವಿನಂತಿಸಿಕೊಂಡರೂ, ಸಮಸ್ತಮಾಧ್ವಪೀಠಾಧಿಪತಿಗಳು ಬೇಡವೆಂದು ಆಗ್ರಹಿಸಿದರೂ ಯಾವುದನ್ನೂ ಲೆಕ್ಕಿಸದೆ ಅಧಾರ್ಮಿಕವಾಗಿ ಸಾಧಿಸಿಯೇ ಬಿಟ್ಟರು.

ಇದು ರಾಜಕೀಯದ ಜಿದ್ದಾಜಿದ್ದಿಯಾಗಿದ್ದರೆ ಶ್ರೀಪುತ್ತಿಗೆ ಶ್ರೀಗಳು ವಿಜಯಶಾಲಿಗಳಾದರು, ಹಠ ಸಾಧಿಸಿದ ಶೂರರಾದರೆಂದು ನಾನಾ ಬಗೆಯಿಂದ ಹೊಗಳಬಹುದಿತ್ತು. ಆದರೆ ಶ್ರೀಕೃಷ್ಣಪೂಜೆ–ಸರ್ವಜ್ಞಪೀಠಾರೋಹಣವೆಂಬುದು ಧಾರ್ಮಿಕವಾದ ವಿಷಯ. ಯಾವತ್ತೂ ಧರ್ಮಕ್ಷೇತ್ರದಲ್ಲಿ ಧಾರ್ಮಿಕರ ಭಾವನೆಗಳಿಗೆ ವೇದನೆಯಾಗದಂತೆ ಕಾರ್ಯನಿರ್ವಹಿಸುವುದೇ ಗೆಲುವೆಂದು ಪರಿಗಣಿಸಲ್ಪಡುತ್ತದೆ. ಇದಕ್ಕೆ ಮಹಾಭಾರತವೇ ಸಾಕ್ಷಿ. ಪಾಂಡವರು ಲಕ್ಷಲಕ್ಷ ಕೌರವಸೈನ್ಯಕ್ಕೆ ನೋವನ್ನುಂಟುಮಾಡಿದರೂ ಧಾರ್ಮಿಕರಿಗೆ ವೇದನೆಯನ್ನು ಉಂಟುಮಾಡದೆ ಸಂತೋಷವನ್ನು ತಂದು ಕೊಟ್ಟದ್ದರಿಂದಲೆ ನಿಜವಾಗಿ ಜಯಶೀಲರಾದರು. ಕೌರವರು ಎರಡೆರಡು ಬಾರಿ ಜೂಜಿನಲ್ಲಿ ಪಾಂಡವರನ್ನು ಗೆದ್ದರೂ ಧಾರ್ಮಿಕರ ಮನಸ್ಸು ಒಪ್ಪದ್ದರಿಂದ ಅಧರ್ಮವೆಂದೇ ಪರಿಗಣಿತವಾಗಿ ಮೋಸದಿಂದ ಗೆದ್ದರೆಂದು ಜಗತ್ತು ತೀರ್ಮಾನಿಸುವಂತಾಯಿತು.

ಈ ದೃಷ್ಟಿಯಲ್ಲಿ ಗಮನಿಸಿದಾಗ ಪುತ್ತಿಗೆ ಶ್ರೀಗಳು ಮಾಧ್ವಪೀಠಾಧಿಪತಿಗಳ, ವಿದ್ವಾಂಸರ, ಲಕ್ಷಾಂತರ ಧಾರ್ಮಿಕರ ಮನಸ್ಸಿಗೆ ವೇದನೆಯನ್ನುಂಟುಮಾಡಿ ಧಾರ್ಮಿಕವಾಗಿ ಸೋತಿದ್ದಾರೆ. ಅನೇಕ ಧರ್ಮಶಾಸ್ತ್ರಗಳ ನಿರ್ಣಯಗಳನ್ನು ಬದಿಗಿಟ್ಟು ಚಿಂತಿಸಿದರೂ ಇನ್ನೊಬ್ಬ ಮಠಾಧಿಪತಿಗಾಗಲಿ, ಧಾರ್ಮಿಕರಿಗಾಗಲಿ ತನ್ನಿಂದ ಯಾವುದೇ

(15ನೇ ಪುಟದಲ್ಲಿ...)

ಎಲ್ಲಾ ದೇವತೆಗಳ ಬಗ್ಗೆ ಚೆನ್ನಾಗಿ ಅರಿತು ಗೌರವಿಸಬೇಕು.

**ಯುವ ಚಿಂತನ** **(ಭಾಗ –30)**

# ಅಪೂರ್ವ ಪ್ರಶ್ನೋತ್ತರ ಮಾಲಿಕಾ

**(ಮಹಾಭಾರತದ ಅನುಶಾಸನ ಪರ್ವದ ಉಮಾಮಹೇಶ್ವರ ಸಂವಾದದ ಸಾರ)**

~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~

*(ಹಿಂದಿನ ಸಂಚಿಕೆಯಿಂದ ಮುಂದುವರಿದುದು..........)*

ಗುರುಗಳ ಸ್ಥಾನ ಬಹಳ ಎತ್ತರದ್ದು. ಆದ್ದರಿಂದಲೆ ಗುರುಗಳನ್ನು ಎಂದಿಗೂ ಅವಮಾನಿಸುವುದಾಗಲಿ, ಗುರುಗಳೊಂದಿಗೆ ಶುಷ್ಕ ಚರ್ಚೆ, ಮೋಸ, ಗೇಲಿ ಮುಂತಾದುವುಗಳನ್ನು ನಡೆಸುವುದಾಗಲಿ ಎಂದಿಗೂ ಸಲ್ಲ. ಜೀವನದಲ್ಲಿ ಒಬ್ಬ ವ್ಯಕ್ತಿಯ ವ್ಯಕ್ತಿತ್ವವನ್ನು ರೂಪಿಸಿದವರೆಲ್ಲರೂ ಗುರುಗಳೆಂದೇ ಪರಿಗಣಿಸಲ್ಪಡುತ್ತಾರೆ. ಅಧ್ಯಾಪಕರು, ತಂದೆ–ತಾಯಿ, ಅಣ್ಣ ಮುಂತಾದವರೆಲ್ಲರೂ ಗುರುಸ್ಥಾನದಲ್ಲಿದ್ದು ಪೂಜ್ಯರೇ ಆಗುತ್ತಾರೆಂದು ಮಹಾಭಾರತ ಅಭಿಪ್ರಾಯಪಡುತ್ತದೆ.

ಅಜ್ಞಾನದಿಂದ ಹೊರ ತಂದು ಜ್ಞಾನದ ಕಡೆಗೆ, ಭಗವಂತನ ಬಳಿಗೆ, ಅಧ್ಯಾತ್ಮ ಪ್ರಪಂಚದೆಡೆಗೆ, ಅಮೃತದೆಡೆಗೆ ಕೊಂಡೊಯ್ಯುವವರೇ ನಿಜವಾದ ಗುರುಗಳು. ಹೀಗಲ್ಲದೆ ಮತ್ತೆ ಮತ್ತೆ ಸಂಸಾರದಲ್ಲಿ ಸಿಲುಕಿಸುವ, ನಾಸ್ತಿಕತೆಯ ಕರೆಗೆ ಕೊಂಡೊಯ್ಯುವ, ಲೌಕಿಕ ಪ್ರಪಂಚದಲ್ಲಿಯೇ ಮುಳುಗಿಸುವ ವ್ಯಕ್ತಿಗಳು ಗುರುಸ್ಥಾನದಲ್ಲಿದ್ದರೂ ಗುರುಗಳಲ್ಲವೆಂದು ಭಾಗವತದ ಅಭಿಪ್ರಾಯ. ಈ ದೃಷ್ಟಿಯಲ್ಲಿ ಇಂದಿನ ಶಾಲೆಯ ಅಧ್ಯಾಪಕರು, ತಂದೆ–ತಾಯಂದಿರು, ಧನದಾಹಿಗಳು ಗುರುಗಳೆಂದು ತಿಳಿಯಲು ಯೋಗ್ಯರೇ? ಇದರ ಬಗ್ಗೆ ಸ್ವಲ್ಪ ವಿಮರ್ಶಿಸುವುದು ಅತ್ಯಗತ್ಯ.

ಸಾಮಾನ್ಯವಾಗಿ ಇಂದಿನ ಸಾಮಾಜಿಕ ಪರಿಸ್ಥಿತಿಯನ್ನು ಕಂಡಾಗ ಹಿರಣ್ಯಕಶಿಪು–ಪ್ರಹ್ಲಾದರ ಕಥೆಯು ನೆನಪಾಗುತ್ತದೆ. ಅಂದಿನ ಪರಿಸ್ಥಿತಿಯು ಇಂದಿನ ಪರಿಸ್ಥಿತಿಗಿಂತ ಭಿನ್ನವಾಗಿರಲಿಲ್ಲ. ಇಂದು ಶಾಲೆಗಳಲ್ಲಿ ದೇವರ ವಿಷಯವನ್ನು ಹೊರತುಪಡಿಸಿ ಉಳಿದ ಸಮಾಜ, ವಿಜ್ಞಾನ ಮುಂತಾದ ವಿಷಯಗಳನ್ನು ಬೋಧಿಸಲು ಸರಕಾರ ಆದೇಶ ಹೊರಡಿಸಿದೆ. ಹಿರಣ್ಯಕಶಿಪುವಿನ ಕಾಲದಲ್ಲಿಯೂ ಹೀಗೆಯೇ ತಾನೆ.

ಅಂದು ಶಂಡಾ–ಮರ್ಕರು ಹಿರಣ್ಯಕಶಿಪುವಿನ ಆದೇಶದಂತೆ ದೇವರ ವಿಷಯವನ್ನು ಹೊರತುಪಡಿಸಿ ಉಳಿದೆಲ್ಲ ವಿಷಯವನ್ನು ಬೋಧಿಸಿದರು. ಪ್ರಹ್ಲಾದ ತನ್ನ

**ಜಗದ್ಗುರು ಮಧ್ವಚಾರ್ಯರಂತಹ ಮಹಾಜ್ಞಾನಿಗಳನ್ನೇ ಗುರುಗಳನ್ನಾಗಿ ಸ್ವೀಕರಿಸಿರಿ**



ಸಹಪಾಠಿಗಳಿಗೆ ದೇವರ ಬಗ್ಗೆ ಅರಿವು ಮೂಡಿಸುತ್ತಿರುವುದನ್ನು ಕಂಡು ಅವನನ್ನು ಅಪರಾಧಿ ಸ್ಥಾನದಲ್ಲಿ ನಿಲ್ಲಿಸಿದರು. ಇಂದು ಹೀಗೆಯೇ, ಶಾಲಾ–ಕಾಲೇಜುಗಳಲ್ಲಿ ದೇವರ ಬಗ್ಗೆ ಯಾರಾದರೂ ವಿದ್ಯಾರ್ಥಿಗಳು ಬೋಧಿಸಿದರೆ ಅವರು ಅಪರಾಧಿಗಳಾಗುತ್ತಾರೆ. ಕೋಮುವಾದಿಗಳಾಗುತ್ತಾರೆ. ಎಲ್ಲರಿಂದ ನಗೆಪಾಟಲಾಗುತ್ತಾರೆ.

ಪ್ರಹ್ಲಾದನ ತಂದೆಯಾದ ಹಿರಣ್ಯಕಶಿಪುವೇ ಮಗನನ್ನು ದೇವರಿಂದ ಬೇರ್ಪಡಿಸಲು ಪ್ರಯತ್ನಿಸಿದವ. ಅದಕ್ಕಾಗಿ ನೂರಾರು ಪ್ರಯತ್ನವನ್ನು ನಡೆಸಿದವ. ಇಂದಿನ ತಂದೆ–ತಾಯಂದಿರೂ ಇದಕ್ಕಿಂತ ಭಿನ್ನರಲ್ಲ. ತಮ್ಮ ಮಕ್ಕಳು ಸಹಜವಾಗಿಯೇ ದೇವರ ಬಗ್ಗೆ, ಅಧ್ಯಾತ್ಮದ ಬಗ್ಗೆ ಒಲವು ತೋರಿದರೂ ತಮ್ಮ ಆಧುನಿಕತೆಗೆ ಎಲ್ಲಿ ಭಂಗ ಬರುತ್ತದೆಯೋ ಎಂಬ ಭಯದಿಂದ ಆದಷ್ಟು ದೇವರು–ಧರ್ಮದಿಂದ ದೂರ ಮಾಡಲು ಪ್ರಯತ್ನಿಸುತ್ತಾರೆ. ಹಲವರು ಸಫಲರೂ ಆಗುತ್ತಾರೆ.

ಆದ್ದರಿಂದ ಇಂದಿನ ಆಧುನಿಕ ಗುರುಗಳು, ತಂದೆ ತಾಯಂದಿರನ್ನು ಗೌರವಿಸಬೇಕೆ? ಎಂಬ ಪ್ರಶ್ನೆಗೆ ಪ್ರಹ್ಲಾದನ ಕಥೆಯೆ ಮಾರ್ಗದರ್ಶಕವಾಗಿದೆ.

ಪ್ರಹ್ಲಾದ ಗುರುಗಳ ಮಾತನ್ನು ಖಂಡಿಸಿದ. **'ಗುರೂಕ್ತಮಪಿ ನ ಗ್ರಾಹ್ಯಂ'** ಎಂದು ಸಹಪಾಠಿಗಳಿಗೆ ಬೋಧಿಸಿದ. ಆದರೆ ಗುರುಗಳನ್ನು ವಿರೋಧಿಸಲಿಲ್ಲ. ಹಾಗೆಂದು ಅವರಿಗೆ ಬೇಜಾರಾಗಬಹುದೆಂದು ಗೌರವಿಸಲೂ ಮುಂದಾಗಲಿಲ್ಲ. ತಟಸ್ಥನಾದ. ಇಂದೂ ಹೀಗೆಯೆ ಮಾಡಬೇಕಿದೆ. ನಿಜವಾದ ಗುರುಗಳ ಕರ್ತವ್ಯವನ್ನು ನಿರ್ವಹಿಸದೆ ಕೇವಲ ಹಣಕ್ಕಾಗಿ ಪಾಠವನ್ನು ಮಾಡುವ ಲೌಕಿಕ ಗುರುಗಳ ಭಗವಂತನಿಂದ ದೂರಾದ ಮಾತುಗಳನ್ನು ಪಾಲಿಸಬೇಕಾದ ಅಗತ್ಯವಿಲ್ಲ. ಹಾಗೆಂದು ಅವರನ್ನು ವಿರೋಧಿಸುವುದೂ ತರವಲ್ಲ. ಪ್ರಹ್ಲಾದನಂತೆ ತಟಸ್ಥ ಧೋರಣೆ ಬಹಳ ಒಳಿತು.

ಇಂದಿನ ತಂದೆ–ತಾಯಂದಿರು ಒಂದೊಮ್ಮೆ ಹಿರಣ್ಯಕಶಿಪುವಿನಂತಿದ್ದರೂ ಮಕ್ಕಳು ಮಾತ್ರ ಪ್ರಹ್ಲಾದನಂತೆಯೆ ವರ್ತಿಸಬೇಕು. ಎಂದಿಗೂ ತಂದೆ–ತಾಯಂದಿರನ್ನು ಅವಮಾನಿಸಬಾರದು. ಹಾಗೆಂದು ಅವರ ಎಲ್ಲ ಮಾತುಗಳನ್ನೂ ಆದೇಶವೆಂದು ಪರಿಪಾಲಿಸುವ ಅಗತ್ಯವೂ ಇಲ್ಲ. ದೇವರು–ಧರ್ಮಕ್ಕೆ ಅವಿರುದ್ಧವಾದ ಮಾತುಗಳನ್ನು ಮಾತ್ರ ಪಾಲಿಸುವುದು ಜಾಣತನ. ದೇವರು–ಧರ್ಮಕ್ಕೆ ವಿರುದ್ಧವಾಗಿ ಹಿರಿಯರು ಎಷ್ಟೇ ಒತ್ತಾಯಪಡಿಸಿದರೂ, ದುಃಖಿತರಾದರೂ ಬೇಜಾರು ಮಾಡಿಕೊಂಡರೂ ಕಂಗೆಡಬೇಕಿಲ್ಲ. ಏಕೆಂದರೆ ಅಂತಹ ಸಂದರ್ಭದಲ್ಲಿ ಅವರ ಅಭಿಪ್ರಾಯಕ್ಕೆ ವಿರುದ್ಧವಾಗಿ

**ಭಗವದ್ಭಕ್ತರಾದ ಸಜ್ಜನರ ಸಂಸರ್ಗವನ್ನು ಎಂದಿಗೂ ಬಿಡಬೇಡಿ.**
~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~~

ನಡೆದುಕೊಳ್ಳುವುದರಿಂದಲೆ ಅವರಿಗೂ ಏಳಿಗೆ ಉಂಟಾಗುತ್ತದೆ. ಭಗವಂತನ ಅನುಗ್ರಹವಾಗುತ್ತದೆ. ಇದು ಪ್ರಹ್ಲಾದ ಚರಿತ್ರೆಯ ರಹಸ್ಯ.

ಇಂದು ಗುರುಗಳೆಂದು ಪ್ರಸಿದ್ಧರಾಗಿ ಕಾವಿಬಟ್ಟೆ ತೊಟ್ಟವರೆಲ್ಲ ಗುರುಗಳಲ್ಲ. ಜ್ಞಾನ–ಭಕ್ತಿ–ವೈರಾಗ್ಯಭರಿತರಾದ, ಸದಾಚಾರ ಸಂಪನ್ನರಾದ, ಸದ್ಗುಣಶೀಲರಾದ, ವಿಶೇಷವಾಗಿ ಹರಿ–ವಾಯುಗಳ ಉಪಾಸಕರಾದ ಗುರುಗಳಷ್ಟೇ ನಿಜವಾಗಿ ಗೌರವಾರ್ಹರಾಗುತ್ತಾರೆ. ಇಂಥವರ ಅನುಗ್ರಹ ಮನುಷ್ಯಜನ್ಮವನ್ನೇ ಉದ್ಧರಿಸಬಹುದು.

ಮೇಲಿನ ಗುಣಗಳಲ್ಲಿ ಯಾವುದಾದರೂ ಒಂದಿದ್ದರೂ ಗೌರವಾರ್ಹರಾಗುತ್ತಾರೆ. ಯಾವುದೂ ಇಲ್ಲದಿದ್ದರೆ ಖಂಡಿತವಾಗಿಯೂ ಗೌರವಾರ್ಹರಲ್ಲ. ಆದರೆ ಮಾಧ್ವ ಪರಂಪರೆಯಲ್ಲಿ ಬಂದಿದ್ದರೆ ತಟಸ್ಥ ಧೋರಣೆ ಒಳಿತು. ಇತ್ತ ಗುರುಪೀಠಕ್ಕೆ ಯೋಗ್ಯವಾದ ಧರ್ಮಾಚರಣೆಯೂ ಇಲ್ಲ. ಅತ್ತ ಗುರುಪೀಠಕ್ಕೆ ಅಯೋಗ್ಯವಾದ ನಿಷಿದ್ಧಕರ್ಮಾಚರಣೆಗಳಿವೆ ಎಂದಾದರಂತೂ ಅಂತಹ ವ್ಯಕ್ತಿ ತಿರಸ್ಕಾರಕ್ಕೆ ಯೋಗ್ಯನಾಗುವುದರಲ್ಲಿ ಸಂದೇಹವಿಲ್ಲ. ಇಂಥವರನ್ನು ತಿರಸ್ಕರಿಸುವುದರಿಂದಲೆ ಪುಣ್ಯಪ್ರಾಪ್ತಿಯಾಗುತ್ತದೆ. ಒಂದೊಮ್ಮೆ ಪುರಸ್ಕರಿಸಿದರೆ ಅಧರ್ಮವನ್ನೇ ಪುರಸ್ಕರಿಸಿದಂತಾಗಿ ಪಾಪಿಗಳಾಗುವುದರಲ್ಲಿ ಸಂದೇಹವೇ ಇಲ್ಲ. ★

---

(12ನೇ ಪುಟದಿಂದ...)

ನೋವಾಗಬಾರದೆಂಬ ಸಾಮಾನ್ಯವಾದ ಮಾನವೀಯತೆಯೂ ಅವರಲ್ಲಿ ಇಲ್ಲದಿರುವುದು ಸ್ಪಷ್ಟವಾಗಿ ಗೋಚರವಾಗಿದೆ.

ಈ ವಿಷಯದಲ್ಲಿ ಅದಮಾರು ಮಠದ ವಿಬುಧೇಶತೀರ್ಥರ ಅದರ್ಶ ಎಂದಿಗೂ ಮನನೀಯ. ಅವರೂ ವಿದೇಶ ಪ್ರವಾಸವನ್ನು ಮಾಡಿದವರೆ. ಮಹಾಛಲವಾದಿಯೇ. ಸಮರ್ಥರೂ ಕೂಡ. ಶಾಸ್ತ್ರಜ್ಞರೂ ಹೌದು. ಹೀಗಿದ್ದರೂ ವಿದೇಶ ಪ್ರವಾಸದ ಬಳಿಕ ಶ್ರೀಕೃಷ್ಣಪೂಜೆಯಿಂದ ದೂರ ಉಳಿದರು. ಬೇರಾವ ಕಾರಣದಿಂದಲೂ ಅಲ್ಲ. ಉಳಿದ ಅಷ್ಟಮಠಾಧೀಶರಿಗೆ ನೋವನ್ನುಂಟುಮಾಡಿ ಶ್ರೀಕೃಷ್ಣಪೂಜೆಯನ್ನು ಮಾಡಲಾರೆ ಎಂಬ ಉದಾತ್ತ ಧ್ಯೇಯದಿಂದ. ಆದ್ದರಿಂದಲೆ ಅವರು ಎಲ್ಲರ ಮನಸ್ಸಿನಲ್ಲಿ ಎತ್ತರ ಸ್ಥಾನವನ್ನು ಗಳಿಸಿದರು. ಇವತ್ತು ಧಾರ್ಮಿಕರು ಅವರನ್ನು ಹೊಗಳುವಂತಾಯಿತು.

ಆದರೆ ಪುತ್ತಿಗೆ ಶ್ರೀಗಳು ಈ ಯಾವ ಆದರ್ಶವನ್ನು ತೋರಿಸದೆ ಧರ್ಮವನ್ನು

ನ್ಯಾಯಮಾರ್ಗದಿಂದ ಹಣ ಗಳಿಸಿರಿ, ನೀಚಮಾರ್ಗ ಬೇಡ.



ಧಿಕ್ಕರಿಸಿದ ಛಲವಾದಿಯಾಗಿ ಹೊರಹೊಮ್ಮಿದ್ದಾರೆ. ತನ್ನಂತೆಯೇ ಇತರ ಮಾಧ್ವಪೀಠಗಳು. ಅವರ ಮಾತು ತನಗೆ ಗೌರವಾರ್ಹವೆಂಬ ಸೌಜನ್ಯವೂ ಪುತ್ತಿಗೆ ಶ್ರೀಗಳಲ್ಲಿ ಕಾಣದಿದ್ದುದು ದುಃಖದ ಸಂಗತಿ.

ಇಂದು ಜಗತ್ತನ್ನು ಮೆಚ್ಚಿಸುವುದು ಬಲು ಸುಲಭ. ಪತ್ರಿಕೆ, ದೂರದರ್ಶನ ಮುಂತಾದ ಮಾಧ್ಯಮಗಳಿಂದ ದಿನ ಬೆಳಗಾಗುವುದರೊಳಗೆ ನಾಯಕನಾಗಿ ಹೊರಹೊಮ್ಮಬಹುದು. ಆದರೆ ಅದು ತಾತ್ಕಾಲಿಕ. ಏಕೆಂದರೆ ಈ ಯಾವ ಮಾಧ್ಯಮಗಳಿಗೆ ಯಾರನ್ನೂ ನಾಯಕ–ಖಳ ನಾಯಕರನ್ನಾಗಿ ಮಾಡುವುದು ಉದ್ದೇಶವಲ್ಲ. ತಮ್ಮ ಪತ್ರಿಕೆಯ ಮಾರಾಟವನ್ನು ಹೆಚ್ಚಿಸಿಕೊಳ್ಳುವುದು, ಹಣ ಮಾಡುವುದಷ್ಟೇ ಮೂಲ ಉದ್ದೇಶ. ಅದಕ್ಕಾಗಿ ಇಂದು ನಾಯಕರಾದವರು ನಾಳೆ ಖಳನಾಯಕರೂ ಆಗಬಹುದು.

ಆದರೆ ಧರ್ಮವನ್ನು ಒಲಿಸುವುದು ಬಲುಕಷ್ಟ. ಅದಕ್ಕೆ ಸದಾಚಾರ, ಸದ್ವಿಚಾರ, ಸದ್ಗುಣಗಳು ಬೇಕು. ಅದಿಲ್ಲದಿದ್ದರೆ ಜೀವನದುದ್ದಕ್ಕೂ ಆಂತರಿಕ–ಬಾಹ್ಯ ಪರಾಜಯಗಳು ಕಟ್ಟಿಟ್ಟ ಬುತ್ತಿ.

ಕಡೆಗೆ ಶ್ರೀಕೃಷ್ಣನನ್ನು ಒಲಿಸುವುದಂತೂ ಬಲುಕಷ್ಟ. ಧರ್ಮಕ್ಕೆ ತಲೆಬಾಗಿ ನಿಂತವನಿಗಷ್ಟೆ ಜ್ಞಾನ–ಭಕ್ತಿ–ವೈರಾಗ್ಯಗಳು ಒಲಿಯುವವು. ಈ ಮೂರು ಮುಪ್ಪುರಿಗೊಂಡಾಗಲೇ ಶ್ರೀಕೃಷ್ಣನ ಪೂರ್ಣಾನುಗ್ರಹ. ಕಡೆಯ ಪಕ್ಷ ಕೃಷ್ಣನ ಆದೇಶವನ್ನು ಸ್ವಲ್ಪಮಟ್ಟಿಗಾದರೂ ಪಾಲಿಸುವುದರಿಂದ ಅಲ್ಪಾನುಗ್ರಹವಾದರೂ ಆಗಬಹುದು. ಶ್ರೀಕೃಷ್ಣನ ಮಾತನ್ನೇ ಧಿಕ್ಕರಿಸಿ ಪೂಜಿಸುವುದರಿಂದ ಯಾವ ಅನುಗ್ರಹವನ್ನು ನಿರೀಕ್ಷಿಸೋಣ? ಶ್ರೀಕೃಷ್ಣ ದೇವರು ಎಲ್ಲರಿಗೂ ಸನ್ಮಂಗಲವನ್ನುಂಟು ಮಾಡಲೆಂದು ಪ್ರಾರ್ಥನೆ. ★

**ಪಲಿಮಾರು ಮಠಾಧೀಶರಾದ ಶ್ರೀ ವಿದ್ಯಾಧೀಶತೀರ್ಥ ಶ್ರೀಪಾದರ**

**ಉಪಸ್ಥಿತಿಯಲ್ಲಿ**

**ಪಾವನಯಾತ್ರೆ ಹಾಗೂ ಸಪ್ತಕ್ಷೇತ್ರ ದರ್ಶನ**

**ಫೆಬ್ರವರಿ 21ರಿಂದ 27ರವರೆಗೆ**

**ಹೆಚ್ಚಿನ ಮಾಹಿತಿಗಾಗಿ ಕೇಶವಜೋಗಿತ್ತಾಯರು ಅಥವಾ ಅನಂತಕೃಷ್ಣಾಚಾರ್ಯ, ಶ್ರೀಪಲಿಮಾರು ಮಠ, ಉಡುಪಿ, ಫೋನ್ ನಂ. 2531904, ಮೊಬೈಲ್ ನಂ. 9844277689, 9845159106 ನ್ನು ಫೆಬ್ರವರಿ 10ರ ಒಳಗಾಗಿ ಸಂಪರ್ಕಿಸಬೇಕಾಗಿ ಕೋರಲಾಗಿದೆ.**

ಭಗವದ್ಭಕ್ತರನ್ನು ಎಂದಿಗೂ ನಿಂದಿಸದಿರಿ.

# ಮಧ್ವವಿಜಯದಲ್ಲೊಂದು ಶಂಕರವಿಜಯ

-ಅನಂತಕೃಷ್ಣಾಚಾರ್ಯ,ಉಡುಪಿ

ಆಚಾರ್ಯರು ಜಯಸಿಂಹನ ಪ್ರಾರ್ಥನೆಯಂತೆ ವಿಷ್ಣುಮಂಗಲದಲ್ಲಿ ನೆಲೆಸಿದ್ದಾಗ ಊರಮುಖಂಡರು ಆಚಾರ್ಯರ ಬಳಿ ಬಂದರು. ಹಿಂದೆ ಪದ್ಮತೀರ್ಥನು ಶಂಕರಪಂಡಿತರಿಂದ ಆಚಾರ್ಯರ ಗ್ರಂಥಗಳನ್ನು ಅಪಹರಿಸಿದಾಗ ಸಹಾಯಮಾಡಿ ಶಂಕರಪಂಡಿತರನ್ನು ಅವಮಾನಿಸಿದ್ದ ಈ ಮುಖಂಡರು ಈಗ ಜಯಸಿಂಹ ರಾಜನ ಪ್ರಭಾವದಿಂದ ಹೆದರಿದವರಾಗಿ ಆಚಾರ್ಯರ ಮೇಲಿದ್ದ ದ್ವೇಷವನ್ನು ತೊರೆದು ಶರಣಾಗಿದ್ದರು. ಆಚಾರ್ಯರ ಅಣತಿಯಂತೆ, ಜಯಸಿಂಹನ ಆದೇಶದಂತೆ ಆ ಗ್ರಾಮಾಧಿಪತಿಗಳು ಶಂಕರಪಂಡಿತರ ಬಳಿ ಸಾಗಿ ಕೈಮುಗಿದು 'ಪೂಜ್ಯರಾದ ತಾವು ಬಾಲಿಶರಾದ ನಮ್ಮಿಂದ ನಡೆದ ಗ್ರಂಥಾಪಹರಣದಂತಹ ಅಪರಾಧವನ್ನು ಮನ್ನಿಸಬೇಕು.



ತಾವು ತಾಳ್ಮೆಯೇ ಮೈವೆತ್ತಿ ಬಂದವರು' ಹೀಗೆ ಪ್ರಾರ್ಥಿಸುತ್ತಿರಲು, ಜಯಸಿಂಹರಾಜನೂ ಬೇಡಿಕೊಳ್ಳಲು ಶಂಕರಪಂಡಿತರು ಆಚಾರ್ಯರ ಅಪ್ಪಣೆಯಂತೆ ಕಳವಾಗಿದ್ದ ಗ್ರಂಥಸಮೂಹವನ್ನು ಮತ್ತೆ ಸ್ವೀಕರಿಸಿದರು.

ಆಚಾರ್ಯರ ಶಿಷ್ಯವಾತ್ಸಲ್ಯಕ್ಕೆ ಸಾಕ್ಷಿಯಾದ ಸಂದರ್ಭವಿದು. ಹಿಂದೆ ಪದ್ಮತೀರ್ಥಾದಿಗಳು ತಾವು ಅಪಹರಿಸಿದ್ದ ಆಚಾರ್ಯರ ಗ್ರಂಥವನ್ನು ಕಾವುಗ್ರಾಮದಲ್ಲೇ ಬಿಟ್ಟು ಓಡಿ ಹೋದಾಗ ಗ್ರಾಮಸ್ಥರು ಆ ಗ್ರಂಥಗಳನ್ನು ಆಚಾರ್ಯರಿಗೆ ಒಪ್ಪಿಸಿದರೂ ಶಂಕರಪಂಡಿತರಿಗಾದ ಅವಮಾನಕ್ಕೆ ತಕ್ಕ ಶಾಸ್ತಿಯಾಗದೆ ಸ್ವೀಕರಿಸುವುದಿಲ್ಲವೆಂದು ಆಚಾರ್ಯರು ಗ್ರಂಥಗಳನ್ನು ಮಧ್ಯಸ್ಥರ ಬಳಿ ಇಟ್ಟು ಸಹ್ಯಪರ್ವತದತ್ತ ತೆರಳಿದ್ದರು. ಈಗ ಗ್ರಾಮಾಧಿಪತಿಗಳು ಶಂಕರಪಂಡಿತರಿಗೆ ಬಾಗಿ ಕ್ಷಮೆಯಾಚಿಸುತ್ತಿರಲು ಆಚಾರ್ಯರು ಶಿಷ್ಯನ ವಿಜಯದಿಂದ ಸಂತುಷ್ಟರಾಗಿ ಸ್ವೀಕರಿಸಲು ಆದೇಶಿಸಿದರು. ಹೀಗೆ ಇದು ಮಧ್ವರ ಅನುಗ್ರಹದಿಂದಾದ ಶಂಕರವಿಜಯ. ಮಧ್ವವಿಜಯದಲ್ಲೊಂದು ಶಂಕರವಿಜಯ.

## ಮಧ್ವರ ಪಾದಧೂಳಿಯ ಗರಿಮೆ

ತನ್ನ ತಮ್ಮನ ಗೆಲುವಿನಿಂದ ಖುಷಿಗೊಂಡ ತ್ರಿವಿಕ್ರಮಪಂಡಿತರು ಊರಮುಖಂಡರಿಂದ, ನಾಗರಿಕರಿಂದ ಸುತ್ತುವರಿಯಲ್ಪಟ್ಟ, ಆಚಾರ್ಯರ ಬಳಿ ಬಾಗಿನಿಂತಿರುವ ಜಯಸಿಂಹ ದೊರೆಯನ್ನು ಕುರಿತು 'ಶುದ್ಧ ಮನಸ್ಸಿನ ದೊರೆಯೆ, ಆನಂದತೀರ್ಥಭಗವತ್ಪಾದರ ಪಾದಪದ್ಮದ ಧೂಳಿ ನಿನಗೆ ನಿರಂತರವಾಗಿ ಸುಖವನ್ನುಂಟುಮಾಡಲಿ, ಅಲ್ಪಭಾಗ್ಯರಿಗೆ ಎಟುಕದ ದೇವೇಂದ್ರನ ಪದವಿಯೂ ಸ್ವರ್ಗದಲ್ಲಿ ಇದನ್ನು ಸೇವಿಸದವನ ಅಡಿಯಾಳು'-ಹೀಗೆ ಹರಸಿದರು. ತನಗೆ ಅಪರಿಚಿತರಾಗಿದ್ದ ಆಚಾರ್ಯರ ಅತಿ ಗೂಢವಾದ ಗುಣಗಳ ಗರಿಮೆಯನ್ನು ಕವಿಕುಲ ತಿಲಕರಾದ ತ್ರಿವಿಕ್ರಮ ಪಂಡಿತರು ಹೇಗೆ ಗುರುತಿಸಿದರೆಂದು ಆಶ್ಚರ್ಯಪಡಬೇಕಲ್ಲ. ಕಾಡಿನಲ್ಲಿ ಜೇನಿಗಾಗಿ ಅರಸುತ್ತ ತಿರುಗುವ ದುಂಬಿಯು ಪರಿಚಯವಿಲ್ಲದ ಪುಷ್ಪದ ಮಕರಂದದ ಜಾಡನ್ನು ದರ್ಶನ ಮಾತ್ರದಿಂದಲೇ ಕಂಡು ಹಿಡಿಯುವುದಿಲ್ಲವೆ?

ಆಚಾರ್ಯರು ವಿಷ್ಣುಮಂಗಲದಲ್ಲಿ ಕೆಲವು ದಿನಗಳನ್ನು ಕಳೆದರು. ದುಷ್ಟ ಜನರಲ್ಲಿ ಮತ್ತಷ್ಟು ದ್ವೇಷವನ್ನು ಹೆಚ್ಚಿಸುತ್ತ, ಜನಸಾಮಾನ್ಯರಲ್ಲಿ ಅಚ್ಚರಿಯನ್ನು

ಮೂಡಿಸುತ್ತಾ, ಸಜ್ಜನರಲ್ಲಿ ಜ್ಞಾನ-ಭಕ್ತ್ಯಾದಿಗಳನ್ನು ಹೆಚ್ಚಿಸುತ್ತ,

## ಆಚಾರ್ಯರ ಅಚ್ಚುಕಟ್ಟಾದ ದಿನಚರಿ

ಆಚಾರ್ಯರ ದಿನಚರಿ ಹೀಗಿತ್ತು. ಪ್ರತಿದಿನ ಅರುಣೋದಯದ ಪ್ರಶಸ್ತ ಕಾಲದಲ್ಲಿ ಮುಂಜಾವಿನ ಸ್ನಾನಾದಿಗಳನ್ನು ಮುಗಿಸಿದ ಆಚಾರ್ಯರು ಶಾಟಿಯ ಪರದೆಯ ಮರೆಯಲ್ಲಿ ತಕ್ಕ ಆಸನದಲ್ಲಿ ಕುಳಿತು ಪರಬ್ರಹ್ಮನಾದ ನಾರಾಯಣನನ್ನು ಧ್ಯಾನಿಸಿದರು.

ಇತ್ತ ಆಚಾರ್ಯರ ಶಿಷ್ಯರಾದ ಹಿರಿಯ ಯತಿ ಸಮೂಹ ತಕ್ಕ ಹಲ್ಲುಕಡ್ಡಿಗಳಿಂದ ಹಲ್ಲು ತೊಳೆದು, ತಮ್ಮ ಅನುಷ್ಠಾನದ ಅಚ್ಚುಕಟ್ಟಿನಿಂದಲೂ, ಗುರುಗಳು ತಿಳಿಸಿದ ಆಚಾರ ವಿಶೇಷಗಳಲ್ಲಿ ನಿಷ್ಠೆಯನ್ನು ತೋರ್ಪಡಿಸುತ್ತಾ ಜತೆಗೆ ಮಿಂದರು.

ಆ ಶಿಷ್ಯ ಸಮೂಹ ಗುರುಪರಿಚರ್ಯೆಯನ್ನೇ ಹಿರಿಯ ತಪಸ್ಸೆಂದು ತಿಳಿದಿತ್ತು. ಅದರಿಂದಲೆ ಗುರುಗಳು ಮಲಗಿದ ನಂತರ ಮಲಗುತ್ತಿದ್ದವರು ಮುಂಚಿತವಾಗಿಯೇ ಎದ್ದು ಕಷ್ಟಕರವಾದ ಗುರುಗಳ ಸೇವೆಯನ್ನು ಬಹಳ ಗೌರವದಿಂದ, ಖುಷಿಯಿಂದ ಅರ್ಧರಾತ್ರಿಯವರೆಗೂ ಬಿಡುವಿಲ್ಲದೆ ಮಾಡುತ್ತಿದ್ದರು. ಇಲ್ಲವಾದರೆ ಇವರಿಗೆ ತಾವು ಬಯಸಿದ ಸದ್ಗತಿಯಾದರೂ ಹೇಗೆ ದಕ್ಕೀತು.

ಆಚಾರ್ಯರ ಮುಂಜಾವಿನ ಸೇವೆಗಾಗಿ ನಿಯುಕ್ತನಾದ ಶಿಷ್ಯನೊಬ್ಬ ರಾತ್ರಿ ಬಹಳ ಹೊತ್ತು ಪಾಠಕೇಳಿದ್ದನ್ನು ಮನನ ಮಾಡುತ್ತಿದ್ದವನಿಗೆ ಆಗಷ್ಟೆ ಮೈಮರೆಸುವ ನಿದ್ದೆ ಹತ್ತಿತ್ತು. ಆಚಾರ್ಯರು ಸ್ನಾನಕ್ಕೆ ತಾವೇ ಅಂಗವಸ್ತ್ರ, ಗಿಂಡಿ ಮುಂತಾದುವುಗಳನ್ನು ಕೊಂಡೊಯ್ಯುತ್ತಿರುವಾಗ ಕೂಡಲೆ ಎಚ್ಚರಗೊಂಡ ಆ ಶಿಷ್ಯ, 'ಅಯ್ಯೋ, ಗುರುಗಳ ಸೇವೆಯಿಂದ ವಂಚಿತನಾದೆನಲ್ಲಾ' ಎಂದು ಬಹಳ ಮರುಗಿದ.

ಆಚಾರ್ಯರು ಸರೋವರದಲ್ಲಿ ಸ್ನಾನಕ್ಕಿಳಿದರೂ ಇಂತಹ ಕೆಲಶಿಷ್ಯರು 'ಹೇಳಿದ ಕರ್ತವ್ಯವನ್ನು ಮೊದಲೆ ಎದ್ದು ಮಾಡಿಲ್ಲವೇಕೆ?' ಎಂದು ಗುರುಗಳ ಗದರಿಕೆಗೆ ಹೆದರಿ ಬಹಳ ಹೊತ್ತು ನೀರಿಗಿಳಿಯದೆ ದಾರಿಯಿಂದ ದೂರ ಸರಿದು ತಲೆ ಬಾಗಿ ನಿಂತರು.

ಇಲ್ಲಿ ಆಚಾರ್ಯರ ಸರಳವ್ಯಕ್ತಿತ್ವ, ಶಿಷ್ಯರ ಗುರುಭಕ್ತಿ, ಕರ್ತವ್ಯ ನಿಷ್ಠೆ, ತಪಸ್ಸು ಪ್ರತಿಯೊಂದು ಬಹಳ ಚೆನ್ನಾಗಿ ಪ್ರತಿಬಿಂಬಿತವಾಗುತ್ತದೆ. ಆಚಾರ್ಯರ ಗಂಭೀರವಾದ ವ್ಯಕ್ತಿತ್ವವೇ ಶಿಷ್ಯರ ಗೌರವಾದರಗಳಿಗೆ ಕಾರಣವಾಗಿತ್ತೆಂದು ತಿಳಿಯುತ್ತದೆ.

**(ಮುಂದುವರಿಯುವುದು)**

**ದೇಶ ಸೇವೆಯನ್ನು ದೇವರ ಸೇವೆಯೆಂಬ ಭಾವನೆಯಿಂದ ಮಾಡುತ್ತಿರಿ.**





# ಶ್ರೀಹರಿಭಕ್ತಿಸಾರ

-ವಿ॥ ಹಯವದನ ಪುರಾಣಿಕ, ತಿರುಪತಿ

**ತರಳತನದಲಿ ಕೆಲವು ದಿನ, ದುರು**
**ಭರದ ಗರ್ವದಿ ಕೆಲವು ದಿನ, ಮೈ**
**ಮರೆದು ನಿಮ್ಮಡಿಗೆರಗದಾದೆನು ವಿಷಯಕೇಳಿಯಲಿ ।**
**ನರಕ ಭಾಜನನಾಗಿ ಕಾಮಾ**
**ತುರದಿ ಪರಧನ ಪರಸತಿಗೆ ಮನ**
**ಹರಿದ ಪಾಪವ ಕಳೆದು ರಕ್ಷಿಸು ನಮ್ಮನನವರತ ॥೫೦॥**

ಬಾಲ್ಯದಲ್ಲಿ ಕೆಲವು ದಿನ, ದುರ್ಭರವಾದ ಗರ್ವದಲ್ಲಿ ಕೆಲವು ದಿನ-ಹೀಗೆ ಎಲ್ಲ ಕಾಲದಲ್ಲಿ ಮೈಮರೆತು ನಾನು ನಿಮ್ಮಡಿಗಳಿಗೆ ಎರಗದೆ ಹೋದೆ. ವಿಷಯದಾಟದಲ್ಲಿ ಮಗ್ನನಾಗಿ ನರಕಭಾಜನನಾಗಿ ಕಾಮಾತುರದಿಂದ ಪರಧನ ಪರಸತಿಗೆ ಮನ ಹರಿಸಿ ಪಾಪ ತಂದುಕೊಂಡೆ. ಆ ಪಾಪವನ್ನು ಕಳೆದು, ಶ್ರೀಹರಿ, ನೀನು ನಮ್ಮನ್ನು ಸದಾ ಕಾಪಾಡು.

## ತರಳತನದಲ್ಲಿ ಕೆಲವು ದಿನ ಮೈಮರೆತು

ಬಾಲ್ಯದ ಕೆಲವು ದಿನ ನಾನು ಆಟದಲ್ಲಿಯೇ ಮೈಮರೆತೆ. ಮೈಮರೆತುದರಿಂದಲೇ ಬಾಲ್ಯದ ಹದಿನಾಲ್ಕು ವರ್ಷಗಳು ಹದಿನಾಲ್ಕು ದಿನಗಳಂತೆ ಕಳೆದುಹೋದವು. **'ಜೀವಂಶ್ಚತುರ್ದಶಾದೂರ್ಧ್ವಂ'** ಎಂಬಂತೆ ಹದಿನಾಲ್ಕು ವರ್ಷ ವಯಸ್ಸಾದ ಬಳಿಕ ಒಂದು ದಿನ ಬದುಕಿದರೂ ಕಡಿಮೆ ಎಂದರೆ ಮುಂದಿನ ಹತ್ತು ಜನ್ಮಗಳಿಗೆ ಸಾಲುವಷ್ಟು ಕರ್ಮ ಮಾಡಿಬಿಡುತ್ತಾನೆ ಜೀವ. ಹದಿನಾಲ್ಕು ವಯಸ್ಸಿನೊಳಗೆ ಆಟವಾಡುವ ವಯಸ್ಸಿನಲ್ಲಿ ಮಾಡುವ ಕರ್ಮ ಬಂಧಕವಾಗುವುದಿಲ್ಲ, ನಿಜ. ಆದರೂ,

**ಕೌಮಾರ ಆಚರೇತ್ ಪ್ರಾಜ್ಞೋ ಧರ್ಮಾನ್ ಭಾಗವತಾನಿಹ ।**

ಎಂಬಂತೆ ಬಾಲ್ಯದಲ್ಲಿಯೂ ಭಾಗವತ ಧರ್ಮವಾಚರಿಸಬೇಕು. ಭಗವಂತನಲ್ಲಿ ಭಕ್ತಿ

**ವೇದ-ಇತಿಹಾಸ-ಪುರಾಣಗಳ ಅಭಿಪ್ರಾಯಕ್ಕೆ ವಿರುದ್ಧವಾದ ದುಷ್ಟವಾದಗಳನ್ನು ಖಂಡಿಸಿರಿ.**

ಮಾಡಬೇಕು. ಅದಕ್ಕೆ ಮಹತ್ತಾದ ಫಲವಿದೆ. ಆಟದಲ್ಲಿಯೂ ಭಗವದಾರಾಧನೆಯ ಆಟವಾಡುವುದು ಶಿಶುಪ್ರಹ್ಲಾದ ತೋರಿದ ಉತ್ತಮ ಆದರ್ಶ. ಭಕ್ತಿಗೆ ಕುಲಗೋತ್ರಭೇದವಿಲ್ಲ. ಲಿಂಗಭೇದ ವಯೋಭೇದವಿಲ್ಲ. ಎಲ್ಲ ವಯಸ್ಸಿನವರೂ ಭಕ್ತಿ ಮಾಡಬೇಕು.

## ದುರುಭರದ ಗರ್ವದಿ ಕೆಲವುದಿನ ಮೈಮರೆತು

ದುರ್ಭರವಾದ ಯೌವ್ವನ ಮದದಲ್ಲಿ, ಧನಮದದಲ್ಲಿ ನಾನು ಮೈಮರೆತೆ. ಬಾಲ್ಯದಲ್ಲಿ ಮಾತ್ರವಲ್ಲದೆ ಯೌವನದಲ್ಲಿಯೂ ನಾನು ನಿಮ್ಮ ಅಡಿಗಳಿಗೆ ಎರಗದೆ ಹೋದೆ ಎಂದು ಪಶ್ಚಾತ್ತಾಪಪಡುತ್ತಾರೆ. ಯೌವನದಲ್ಲಿ ಮಾನವನಿಗೆ ಭಗವಂತನಾರಾಧನೆ ಮಾಡಲು ಎಲ್ಲ ಬಗೆಯ ಅನುಕೂಲತೆಗಳಿವೆ. ಶರೀರ ಬಲವಿದೆ, ಇಂದ್ರಿಯಪಾಟವವಿದೆ. ಮನೋಬಲವಿದೆ. ಧನಬಲವಿದೆ. ವಿಷಯಭೋಗದಿಂದ ಮನಸಿಗೆ ಸಂತೃಪ್ತಿ ಇದೆ. ಎಲ್ಲ ಇದ್ದೂ ಅವೆಲ್ಲವನ್ನೂ ನೀಡಿದ ಭಗವಂತನನ್ನು ಮರೆಯುತ್ತಾನೆ ಮಾನವ.

**ತೇನ ತ್ಯಕ್ತೇನ ಭುಂಜೀಥಾಃ** 'ನಾನು ಉಣ್ಣುವುದೆಲ್ಲ ಭಗವಂತ ಕೊಟ್ಟಿದ್ದು' ಎನ್ನುವ ಪ್ರಜ್ಞೆ ಇರುವುದಿಲ್ಲ. ನಾನೇ ಸಂಪಾದಿಸಿದೆ. ನಾನೇ ಉಣ್ಣುವೆನೆನ್ನುವ ದುರ್ಭರವಾದ ಗರ್ವದಲ್ಲಿ ಮೈಮರೆತು ಭಗವಂತನ ಅಡಿಗಳಿಗೆ ಎರಗದೆ ಹೋಗುತ್ತಾನೆ. ಗರ್ವಬೇಕು. ನಾನು ಪರಮಾತ್ಮನ ಪುತ್ರ, ಪರಮಾತ್ಮ ನನಗೆ ಎಲ್ಲ ಸುಖಭೋಗ ನೀಡಿದ್ದಾನೆ. ಅದರಿಂದ ನಾನು ಶ್ರೀಮಂತನಾಗಿದ್ದೇನೆ ಎನ್ನುವ ಸಾತ್ವಿಕ ಗರ್ವಬೇಕು. ಭಗವಂತನನ್ನು ಮರೆಸುವ ದುರ್ಭರವಾದ ಗರ್ವವಿರ ಕೂಡದು.

## ವಿಷಯಕೇಳಿಯಲಿ ನರಕಭಾಜನನಾಗಿ

ವಿಷಯಕೇಳಿ, ವಿಷಯಕ್ರೀಡೆ, ಭಗವಂತನನ್ನು ಮರೆಸುವ ಸ್ವಭಾವದ್ದು, ಭಗವಂತನನ್ನು ಮರೆತರೆ ನರಕ, ನೆನೆದರೆ ಸ್ವರ್ಗ, ಅದರಿಂದ ನಾನು ವಿಷಯಾಸಕ್ತಿಯಲ್ಲಿ ಭಗವಂತನನ್ನು ಮರೆತು ನರಕಭಾಜನನಾದೆನೆನ್ನುತ್ತಾರೆ ದಾಸರು.

ನರಕವಾಳುವ ಯಮಧರ್ಮರಾಜನ ಅವತಾರರಾದ ಕನಕದಾಸರು ತಾವು ನರಕಭಾಜನರಾದೆವೆಂದು ಕೊರಗುತ್ತಾರೆ ! ತಮ್ಮ ಮೊದಲ ದಿನಗಳನ್ನು ಸ್ಮರಣೆ ಮಾಡಿಕೊಂಡು ಪಶ್ಚಾತ್ತಾಪಡುತ್ತಾರೆ.

ಮನೆಯ ಮುಂದೆ ಶ್ರೀ ತುಳಸಿಯ ವನ ಕಂಗೊಳಿಸುತ್ತಿರಲಿ



ವಸ್ತುತಃ ನರಕಭಾಜನರು ಈಗ ಪಶ್ಚಾತ್ತಾಪಪಡುವುದಿಲ್ಲ. ಈಗಲೇ ಪಶ್ಚಾತ್ತಾಪಪಡುವವರು ನರಕಭಾಜನರೆನಿಸುವುದಿಲ್ಲ.

## ಪರಧನ ಪರಸತಿಗೆ ಮನ ಹರಿದ ಪಾಪವ ಕಳೆದು

ಮನ ಹರಿದ ಪಾಪವೆಂದರೆ ಮನಹರಿಸಿ ಪರಧನ ಪರಸತಿಯರನ್ನು ಕೂಡಿದ ಪಾಪ, ಹೊರತು ಮನ ಹರಿಸಿದ ಮಾತ್ರಕ್ಕೆ, ಮಾನಸಿಕವಾಗಿ ಮಾಡಿದ ಪಾಪಕ್ಕೆ ಕಲಿಯುಗದಲ್ಲಿ ಅಷ್ಟೊಂದು ಅನರ್ಥವಿಲ್ಲ. ಬೇರೆ ಯುಗಗಳಲ್ಲಿ ಅದೂ ಮಹಾಅನರ್ಥಕಾರಿ. ಹೀಗೆಂದ ಮಾತ್ರಕ್ಕೆ ಮನಸ್ಸನ್ನು ಹರಿಯ ಬಿಡಬಹುದೆಂದು ತಿಳಿಯಬಾರದು. ಮನಸ್ಸು ಬೇರೆ ಕಡೆ ಹರಿದಾಗ ಭಗವಂತ ಮರೆಯಾಗುತ್ತಾನೆ. ಭಗವಂತನ ಮರೆವೇ ಮಹಾಅನರ್ಥಕಾರಿ.

ವಸ್ತುತಃ **'ಕೇಶವೇ ತ್ವನ್ಯಥಾ ಬುದ್ಧಿಃ ಸೈವ ಸ್ತ್ರೀ ಸಂಪ್ರಕೀರ್ತಿತಾ'** ಭಗವಂತನ ಬಗ್ಗೆ ತಪ್ಪು ಗ್ರಹಿಕೆಯೇ ಪರಸತಿಯ ಸಂಗ. ಇದು ಮಾನಸಿಕ ಪಾಪ. ಎಲ್ಲ ಯುಗಗಳಲ್ಲಿಯೂ ಇದು ನರಕಾದಿ ಅನರ್ಥ ಸಾಧನವಾಗುತ್ತದೆ. 'ಶ್ರೀಹರಿ ನನ್ನ ಸೇವೆಯನ್ನು ಅಪೇಕ್ಷಿಸುತ್ತಾನೆ. ಸ್ತೋತ್ರಕ್ಕೆ ಹಿಗ್ಗುತ್ತಾನೆ. ಸ್ತೋತ್ರ ಮಾಡದಿದ್ದರೆ ಕೋಪ ಮಾಡುತ್ತಾನೆ. ಸ್ತೋತ್ರ ಮಾಡುವವರು ಎಷ್ಟು ಪಾಪ ಮಾಡಿದರೂ ಅವನ್ನೆಲ್ಲ ಪರಿಹರಿಸುತ್ತಾನೆ. ಕೇವಲ ಸ್ವಾರ್ಥಿ ಆತ' ಎಂದು ಮುಂತಾಗಿ ತಿಳಿಯುವುದೇ ತಪ್ಪು ಗ್ರಹಿಕೆ. ಅವನು ಪೂರ್ಣಾನಂದ, ನಿತ್ಯ ತೃಪ್ತ. ಕೇವಲ ಕರುಣೆಯಿಂದಲೇ ನಮ್ಮ ಸೇವೆ ಸ್ವೀಕರಿಸಿ, ಸ್ತೋತ್ರವನ್ನಾಲಿಸಿ, ಪಾಪಗಳನ್ನು ಕಳೆಯುತ್ತಾನೆ. ಅದರಿಂದ ಅವನ ಬಗ್ಗೆ ತಪ್ಪು ತಿಳುವಳಿಕೆ ಪಾಪಕರ.

## ಪಾಪವ ಕಳೆದು ರಕ್ಷಿಸು ನಮ್ಮನನವರತ

ಪರಸತಿಗೆ ಮನಹರಿಸಿದಾಗ ಭಗವಂತ ಮನಸಿನಿಂದ ದೂರ ಸರಿಯುತ್ತಾನೆ. ಮರೆಯಾಗುತ್ತಾನೆ. ಅವನ ಮರೆವೇ ಮಹಾಪಾಪ. ಶ್ರೀಹರಿ, ನೀನು ಈ ಪಾಪವನ್ನು ಕಳೆದು ರಕ್ಷಿಸು, ಸದಾ ನಿನ್ನ ಸ್ಮರಣೆ ನೀಡು. ನರಕದಲ್ಲಿ ಬೀಳದಂತೆ ರಕ್ಷಿಸು.

ಪರಸತಿಗೆ ಮನಹರಿಸುವುದೆಂದರೆ ನಿನ್ನ ಬಗ್ಗೆ ತಪ್ಪು ಗ್ರಹಿಕೆ. ಅದು ಇನ್ನಷ್ಟು ದೊಡ್ಡ ಪಾಪ. ಅದನ್ನು ಕಳೆದು ನಮ್ಮನ್ನು ಕಾಪಾಡು, ನಿನ್ನ ಬಗ್ಗೆ ಸರಿಯಾದ ತಿಳುವಳಿಕೆ ನೀಡು, ಎಂದು ದಾಸರು ಬೇಡುತ್ತಾರೆ.

(ಮುಂದುವರಿಯುವುದು)

ಎಂದಿಗೂ ನಾಸ್ತಿಕರಾಗಬೇಡಿ; ನಾಸ್ತಿಕವಾದಕ್ಕೆ ತಲೆಬಾಗಬೇಡಿ.



# ಶ್ರೀಮನ್ನ್ಯಾಯಸುಧಾ

–ಶ್ರೀ ವಿದ್ಯಾಮಾನ್ಯತೀರ್ಥ ಶ್ರೀಪಾದರು

**ಅನುವ್ಯಾಖ್ಯಾರಥಾರೂಢಃ ಬ್ರಹ್ಮಸೂತ್ರಸುಸಾರಥಿಃ ।**
**ವೇದಾಶ್ವಸ್ತರ್ಕಗಾಂಡೀವೀ ಧ್ವಜಮಧ್ವಃ ಸುಧಾರ್ಜುನಃ ॥**

ನ್ಯಾಯಸುಧಾಗ್ರಂಥವು ಅರ್ಜುನನಂತೆ ಶೋಭಿಸುತ್ತದೆ. ಅರ್ಜುನನು ಅಭೇದ್ಯರಥಾರೂಢನಾಗಿದ್ದಂತೆ ನ್ಯಾಯಸುಧಾ ಟೀಕಾ ತನಗೆ ಮೂಲವಾದ ಅಭೇದ್ಯವಾದ ಅನುವ್ಯಾಖ್ಯಾನವನ್ನು ಆಶ್ರಯಿಸಿರುತ್ತದೆ. ಸರ್ವಜ್ಞನಾದ ಶ್ರೀಕೃಷ್ಣನು ಅರ್ಜುನನಿಗೆ ಸಾರಥಿಯಾಗಿ ಮಾರ್ಗದರ್ಶಿಯಾಗಿದ್ದಂತೆ ನ್ಯಾಯಸುಧಾಕ್ಕೆ, ಸರ್ವಶಾಸ್ತ್ರಾರ್ಥ ನಿರ್ಣಾಯಕವಾದ ಬ್ರಹ್ಮಸೂತ್ರವು ಮಾರ್ಗದರ್ಶಿಯಾಗಿದೆ. ಅರ್ಜುನನ ರಥದ ಪುರೋಗಾಮಿಗಳಾಗಿ ಅಭೇದ್ಯ ಕುದುರೆಗಳು ಇರುವಂತೆ ನ್ಯಾಯಸುಧಾದ ಪ್ರಮೇಯಗಳನ್ನು ಸಾಧಿಸಲಿಕ್ಕೆ ಅಪೌರುಷೇಯಗಳಾಗಿರುವುದರಿಂದ ಅಭೇದ್ಯಗಳಾಗಿರುವ ವೇದಗಳು ಯುಕ್ತಿಗಳಿಗಿಂತ ಪುರೋಗಾಮಿಗಳಾಗಿರುವವು. ಅರ್ಜುನನ ಕೈಯಲ್ಲಿ ಅಭೇದ್ಯ ಗಾಂಡೀವ ಧನುಸ್ಸು ಇದ್ದಂತೆ ನ್ಯಾಯಸುಧಾದಲ್ಲಿ ಅಭೇದ್ಯ ತರ್ಕಗಳಿವೆ. ಅರ್ಜುನನ ಧ್ವಜದಲ್ಲಿದ್ದ ಹನುಮಂತನು ಅರ್ಜುನನ ಶತ್ರುಪರಾಭವಕ್ಕೆ ಸಹಕಾರಿಯಾದಂತೆ ನ್ಯಾಯಸುಧಾಕಾರರ ಮನಸ್ಸಿನಲ್ಲಿ ಸದಾ ಸನ್ನಿಹಿತರಾದ ಶ್ರೀಮಧ್ವಗುರುಗಳು ವಾಕ್ಯಾರ್ಥಸ್ಮರಣವನ್ನು ಕೊಟ್ಟು ಪರಮತಖಂಡನಕ್ಕೆ ಸಹಕರಿಸುತ್ತಾರೆ.

ಅರ್ಜುನನು ಆಕಾಶದಲ್ಲಿ ಹಾರುತ್ತಿರುವ ಪಕ್ಷಿಯ ಕಣ್ಣಿನ ರೆಪ್ಪೆಗೆ ಬಾಣವನ್ನು ಪ್ರಯೋಗಿಸಿ ಆ ರೆಪ್ಪೆಯೊಂದನ್ನೇ ಕೆಳಗೆ ಬೀಳಿಸಿದನು. ಅರ್ಜುನನ ಸೂಕ್ಷ್ಮದೃಷ್ಟಿಯ ಪರಿಚಯವು ಈ ಸಂದರ್ಭದಲ್ಲಿ ಎಲ್ಲರಿಗೂ ಆಯಿತು. ಇದರಂತೆ ಶ್ರೀ ಸುಧಾಕಾರರು ತಮ್ಮ ಸೂಕ್ಷ್ಮದೃಷ್ಟಿಯಿಂದ ಪಂಚಾಖ್ಯಾತಿಘಟ್ಟದಲ್ಲಿ ತಾವು ಹೇಳಿದ ಎಲ್ಲಾ ವಿಷಯಗಳನ್ನು ಶ್ರೀಮದಾಚಾರ್ಯರ ಅನುವ್ಯಾಖ್ಯಾನದ **'ವಿಜ್ಞಾತಸ್ಯಾನ್ಯಥಾ ಸಮ್ಯಗ್ವಿಜ್ಞಾನಂ ಹ್ಯೇವ ತನ್ಮತಮ್'** ಎಂಬ ಶ್ಲೋಕದಲ್ಲಿರುವ ಒಂದೇ ಒಂದು 'ಹಿ' ಶಬ್ದದಿಂದ ತಿಳಿದು ಗ್ರಂಥದಲ್ಲಿ



ಬರೆದಿದ್ದಾರೆ. ಮತ್ತು ಅನುವ್ಯಾಖ್ಯಾನದ ಪ್ರತಿಶ್ಲೋಕಗಳಲ್ಲಿ ಪ್ರಾಯಃ 'ಚ,ತು, ಏವ, ಅಪಿ' ಶಬ್ದಗಳು ತುಂಬಾ ಇವೆ. ಇವುಗಳು ನಿರರ್ಥಕಗಳೇ ಎಂದು ಇತರರು ನೋಡಿದರೆ ಶ್ರೀನ್ಯಾಯಸುಧಾಕಾರರು ತಮ್ಮ ಸೂಕ್ಷ್ಮದೃಷ್ಟಿಯಿಂದ ಬಹು ವಿಶೇಷಾರ್ಥಗಳನ್ನು ಬರೆದು ಅವು ಸಾರ್ಥಕಗಳೇ ನಿರರ್ಥಕಗಳಲ್ಲವೆಂದು ತಿಳಿಸುತ್ತಾರೆ. ಅನುವ್ಯಾಖ್ಯಾನದ ಶ್ಲೋಕಗಳಿಗೆ ಬಹ್ವರ್ಥಗಳಿವೆ ಎಂದು ಅನುವ್ಯಾಖ್ಯಾನದಲ್ಲಿಯೇ **'ಗ್ರಂಥೋಯಮಪಿ ಬಹ್ವರ್ಥಃ'** ಎಂದು ಹೇಳಿರುತ್ತದೆ. ಆದರೆ ಯಾರಿಗೂ ಆ ಬಹ್ವರ್ಥಗಳು ತೋರಲಾರವು. ಸುಧಾಕಾರರು ಮಾತ್ರ ಆ ಶ್ಲೋಕಗಳಿಗೆ ಬಹ್ವರ್ಥಗಳನ್ನು ಹೇಳುತ್ತಾರೆ. ಇತರಮತೀಯ ಭಾಷ್ಯಗಳಿಗೆ ಪ್ರಸಿದ್ಧ ಟೀಕಾಕಾರರಾಗಿರುವವರು ಯಾರೂ ತಮ್ಮ ಮೂಲಗ್ರಂಥಗಳಿಗೆ ಇಷ್ಟು ಬಹ್ವರ್ಥಗಳನ್ನು ಹೇಳಲಿಲ್ಲ. ಶ್ರೀಸುಧಾಕಾರರು ಹೇಳುವ ಬಹ್ವರ್ಥಗಳನ್ನು ಇತರ ಟೀಕಾಕಾರರು ನೋಡಿದರೆ ತಮ್ಮ ಮೂಗಿಗೆ ತಮ್ಮ ಬೆರಳನ್ನಿಟ್ಟುಕೊಂಡು ಆಶ್ಚರ್ಯಪಡದೇ ಇರಲಾರರು.

ಶ್ರೀಮನ್ನ್ಯಾಯಸುಧಾಕಾರರಿಗೆ ಅನುವ್ಯಾಖ್ಯಾನವನ್ನು ರಚಿಸಿದ ಶ್ರೀಮಧ್ವಾಚಾರ್ಯರಲ್ಲಿ ಪರಮಗುರುಭಕ್ತಿಯು ಇದೆ. **'ಪರಂ ಶ್ರೀಮತ್ಪೂರ್ಣಪ್ರಮತಿಗುರುಕಾರುಣ್ಯಸರಣಿಂ ಪ್ರಪನ್ನಾಃ ಮಾನ್ಯಾಃ ಸ್ಮಃ'** ಎಂದು ಅವರು ಹೇಳುವ ಮಾತಿನಿಂದ ಇದು ತಿಳಿಯುತ್ತದೆ. ಇತರ ಮತೀಯ ಯಾವ ಟೀಕಾಕಾರರಿಗೂ ಇವರಿಗೆ ಇರುವಂತೆ ಗುರುಭಕ್ತಿಯು ಇಲ್ಲವೆಂದೇ ಹೇಳಬಹುದು. ಗುರುಗಳಲ್ಲಿ ಪರಮಭಕ್ತಿಯು ಇದ್ದವರಿಗೆ ಗುರುಗಳು ಹೇಳಿದ ವಾಕ್ಯದ ಎಲ್ಲ ಅರ್ಥಗಳೂ ತೋರುತ್ತವೆಯೆಂದು **'ಯಸ್ಯ ದೇವೇ ಪರಾಭಕ್ತಿಃ ಯಥಾ ದೇವೇ ತಥಾ ಗುರೌ । ತಸ್ಯೈತೇ ಕಥಿತಾಹ್ಯರ್ಥಾಃ ಪ್ರಕಾಶಂತೇ ಮಹಾತ್ಮನಃ'** ಎಂಬ ಪ್ರಮಾಣವಾಕ್ಯವು ಹೇಳುತ್ತದೆ. ಈ ಪ್ರಮಾಣವಾಕ್ಯದ ಅರ್ಥಕ್ಕೆ ಶ್ರೀಮನ್ನ್ಯಾಯಸುಧಾಕಾರರೇ ಪ್ರಥಮ ಉದಾಹರಣಭೂತರಾಗಿದ್ದಾರೆ.

ಜನ್ಮಾಧಿಕರಣದ ಅನುವ್ಯಾಖ್ಯಾನದಲ್ಲಿ **'ಸೃಷ್ಟಿಃ ಸ್ಥಿತಿಶ್ಚ ಸಂಹಾರೋ ನಿಯತಿರ್ಜ್ಞಾನ ಮಾವೃತಿಃ । ಬಂಧಮೋಕ್ಷಾವಪಿ ಹ್ಯಾಸು ಶ್ರುತಿಶೂಕ್ತಾ ಹರೇಃ ಸದಾ'** ಎಂಬ ಶ್ಲೋಕವು ಇದೆ. ಈ ಶ್ಲೋಕಕ್ಕೆ ಶ್ರೀನ್ಯಾಯಸುಧಾಕರಾರರು ಹೇಗೆ ಅರ್ಥವಿವರಣೆಯನ್ನು ಮಾಡುತ್ತಾರೆಂಬುದನ್ನು ತಿಳಿಸುವೆವು. ಜಗತ್ ಸೃಷ್ಟ್ಯಾದಿಗಳು ಶ್ರೀಹರಿಯಿಂದ ಆಗುವವೆಂದು ಶ್ರುತಿಗಳಲ್ಲಿ ಹೇಳಲ್ಪಟ್ಟಿದೆಯೆಂದು ಈ ಶ್ಲೋಕದ ಸಾಮಾನ್ಯಾರ್ಥವು. ಇಷ್ಟೇ ಅರ್ಥವು ಈ ಶ್ಲೋಕಕ್ಕಾದರೆ ಈ ಶ್ಲೋಕದಲ್ಲಿ ಅಪೂರ್ವತೆಯು ಇಲ್ಲ.

(ಮುಂದುವರಿಯುವುದು)

# ಶ್ರೀವಿಷ್ಣುಪುರಾಣ

## ಧ್ರುವನಿಗೆ ದೇವತೆಗಳ ಪರೀಕ್ಷೆ

–ಸ್ಫೂರ್ತಿ

*(ಹಿಂದಿನ ಸಂಚಿಕೆಯಿಂದ ಮುಂದುವರಿದುದು..........)*

ಸಪ್ತರ್ಷಿಗಳ ಉಪದೇಶದಂತೆ ಧ್ರುವನು ಮಹಾಪುಣ್ಯಕರವಾದ ಮಧುವನವನ್ನು ಪ್ರವೇಶಿಸಿದನು. ಯಮುನೆಯ ತೀರದಲ್ಲಿರುವ ಈ ಮಧುವನ ಹಿಂದೆ 'ಮಧು' ಎಂಬ ದೈತ್ಯ ವಾಸಿಸುತ್ತಿದ್ದ ಕಾಡು. ರಾಮನ ಅನುಜನಾದ ಶತ್ರುಘ್ನನು ಇವನ ಪುತ್ರನಾದ ಲವಣಾಸುರನನ್ನು ಸಂಹರಿಸಿ 'ಮಧುರಾ' ಪುರಿಯನ್ನು ನಿರ್ಮಿಸಿದ ಸ್ಥಳವೂ ಇದೇ. ಶ್ರೀಹರಿಯ ನಿತ್ಯ ಸನ್ನಿಧಾನವಿರುವ ಸ್ಥಳವಿದು. ಸಕಲ ಪಾಪಗಳನ್ನು ಕಳೆಯುವ ಯಮುನೆಯ ತೀರದಲ್ಲಿರುವ ಮಧುವನದಲ್ಲಿ ಧ್ರುವನು ತಪಸ್ಸಿಗೆ ನಿಂತನು. ಮರೀಚಿ ಮುಂತಾದ ಋಷಿಗಳು ಉಪದೇಶಿಸಿದಂತೆ ಮಧುವನದಲ್ಲಿ ಸಕಲದೇವೋತ್ತಮನಾದ ಶ್ರೀಹರಿಯನ್ನು ತನ್ನೊಳಗೆ ಧ್ಯಾನಿಸಲು ಆರಂಭಿಸಿದನು. ಅನನ್ಯವಾದ ಮನಸ್ಸಿನಿಂದ ಚಿಂತಿಸುತ್ತಿರುವ ಧ್ರುವನಿಗೆ ಸರ್ವಗತನಾದ ಶ್ರೀಹರಿಯು ಸಕಲ ವಸ್ತುವಿನೊಳಗೂ ಗೋಚರಿಸ ತೊಡಗಿದನು. ಹೀಗೆ ಧ್ರುವನ ಮನಸ್ಸಿನಲ್ಲಿ ಭಗವಂತನು ದೃಢವಾಗಿ ನೆಲೆಗೊಳ್ಳಲು ಸಕಲ ಭೂತಗಳನ್ನು ಹೊರುವ ಭೂದೇವಿಗೆ ಈತನ ಭಾರವನ್ನು ಹೊರುವುದು ಅಶಕ್ಯವಾಯಿತು. ಧ್ರುವನು ಎಡಗಾಲನ್ನೂರಿ ತಪಸ್ಸಿಗೆ ನಿಂತಾಗ ಭೂಮಿಯ ಎಡಭಾಗ ಬಾಗಿತು. ಬಲಗಾಲನ್ನೂರಿ ನಿಂತಾಗ ಭೂಮಿಯ ಬಲಭಾಗ ಬಾಗಿತು. ಹೆಬ್ಬೆರಳಿನಿಂದ ತಪಸ್ಸಿಗೆ ನಿಂತಾಗಲಂತೂ ಇಡೀ ಭೂಮಿಯೇ ಕಂಪಿಸಲಾರಂಭಿಸಿತು. ಇದರಿಂದ ದೇವತೆಗಳು ಕ್ಷೋಭೆಗೊಂಡರು. ಧ್ರುವನ ತಪಸ್ಸನ್ನು ಭಂಗಗೊಳಿಸಲು ಪ್ರಯತ್ನಿಸಿದರು. ಧ್ರುವನ ಸಮಾಧಿ ಅವಸ್ಥೆಯನ್ನು ಭಂಗಗೊಳಿಸಲು ದೇವೇಂದ್ರನು ಕೂಷ್ಮಾಂಡವೆಂಬ ಗಣಗಳೊಡನೆ ಬಂದು ನಾನಾ ಬಗೆಯ ಮೋಹಜಾಲವನ್ನು ಬೀಸಲಾರಂಭಿಸಿದನು.

ದೇವತೆಗಳ ಮಾಯೆಯಿಂದ ನಿರ್ಮಿತಳಾದ ಸುನೀತಿಯು ಅಳುತ್ತಾ ಧ್ರುವನ



ಮುಂದೆ ಬಂದು ನಿಂತು ಮರುಗುತ್ತಾ 'ಅಯ್ಯೋ ಮಗನೇ, ದೇಹವನ್ನೇ ನಾಶಗೊಳಿಸಲು ಈ ಕಠಿಣವಾದ ತಪಸ್ಸು ಸಾಕು. ನಾನು ಬಹಳ ಕಠಿಣ ವ್ರತ–ತಪಸ್ಸುಗಳನ್ನಾಚರಿಸಿ ನಿನ್ನನ್ನು ಪಡೆದಿದ್ದೇನೆ. ಅನಾಥಳಾದ ನನ್ನೊಬ್ಬಳನ್ನೇ ನೀನು ಬಿಟ್ಟು ಬಂದರೆ ನನಗೆ ಗತಿಯಾರು? ಐದು ವರ್ಷದ ನೀನೆಲ್ಲಿ, ಅತ್ಯಂತ ಘೋರವಾದ ತಪಸ್ಸೆಲ್ಲಿ? ಅತ್ಯಂತ ಕಷ್ಟಕರವಾದ, ಪ್ರಯೋಜವಿಲ್ಲದ ಈ ತಪಸ್ಸನ್ನು ತೊರೆದು ಬಾ. ಕಾಲದ ಆಟಿಕೆಗಳಾದ ನಾವು ಕಾಲಕಾಲಕ್ಕೆ ಆಚರಿಸಬೇಕಾದುದನ್ನು ಆಚರಿಸುತ್ತಾ ಕಡೆಗೆ ತಪಸ್ಸಿನಲ್ಲಿ ತೊಡಗಬೇಕು. ಮೊದಲು ಉಪನಯನ, ಬಳಿಕ ಅಧ್ಯಯನ, ವಿವಾಹ, ಕಡೆಗೆ ತಪಸ್ಸು. ಹೀಗಿರುವಾಗ ಈ ಚಿಕ್ಕ ವಯಸ್ಸಿನಲ್ಲಿ ಇಂತಹ ಘೋರ ತಪಸ್ಸಿನಲ್ಲಿ ತೊಡಗಿ ಏತಕ್ಕಾಗಿ ನಿನ್ನನೇ ನಾಶ ಮಾಡಿಕೊಳ್ಳುತ್ತಿರುವಿ. ಮಕ್ಕಳಿಗೆ ತಾಯಿಯ ಶುಶ್ರೂಷೆಯೇ ಪರಮ ಮುಖ್ಯವಾದ ಧರ್ಮ. ಆದ್ದರಿಂದ ನನ್ನೊಡನೆ ಬಾ. ಬೇಗನೆ ಮನೆಗೆ ಹೋಗೋಣ. ಒಂದೊಮ್ಮೆ ನೀನು ಈ ತಪಸ್ಸನ್ನು ಬಿಡದಿದ್ದರೆ ನಾನು ನೀನು ನೋಡುತ್ತಿರುವಂತೆಯೇ ಪ್ರಾಣವನ್ನು ಕಳೆದುಕೊಳ್ಳುತ್ತೇನೆ.

ಹೀಗೆ ಅಳುತ್ತಿರುವ ಮಾಯಾಸುನೀತಿಯನ್ನು ಭಗವಂತನಲ್ಲಿ ಸಂಪೂರ್ಣವಾಗಿ ಮನಸ್ಸನ್ನು ನೆಲಗೊಳಿಸಿದ್ದ ಧ್ರುವನು ಕಂಡೂ ಕಾಣದವನಂತೆ ನಿಂತನು. ಆಕೆ ಮತ್ತೆ ' ಓ ಮಗೂ, ನೋಡು ಭಯಂಕರವಾದ ರಾಕ್ಷಸರು ಘೋರ ಆಯುಧಗಳನ್ನು ಹಿಡಿದು ನಿನ್ನನ್ನು ನುಂಗಲು ಬರುತ್ತಿದ್ದಾರೆ. ಆದ್ದರಿಂದ ಬೇಗ ಇಲ್ಲಿಂದ ಹೊರಡು. ಇಲ್ಲವಾದರೆ ಆ ರಾಕ್ಷಸಗಣ ಕೂಡಲೆ ನಿನ್ನನ್ನು ಮುಗಿಸಿಬಿಡುತ್ತದೆ. ಎಂದು ಹೇಳಿ ಓಡಲಾರಂಭಿಸಿದಳು. ಇತ್ತ ಕೂಡಲೆ ಭಯಂಕರವಾದ ರಾಕ್ಷಸಗಣ ಘೋರನಾದವನ್ನು ಮಾಡುತ್ತಾ ನಾನಾ ವಿಧವಾದ ಶಸ್ತ್ರಗಳನ್ನು ಪ್ರಯೋಗಿಸುತ್ತ ಧ್ರುವನ ಬಳಿ ಬಂದು 'ಕೊಲ್ಲಿರಿ, ಹೊಡೆಯಿರಿ, ತಿನ್ನಿರಿ' ಹೀಗೆ ಗರ್ಜಿಸಲಾರಂಭಿಸಿತು. ಬಳಿಕ ಸಿಂಹ, ಹುಲಿ, ವಿಷಜಂತುಗಳು ಧ್ರುವನ ಬಳಿ ಬಂದು ಗರ್ಜಿಸಿದವು. ನಾನಾ ವಿಧವಾದ ಪೀಡೆಯನ್ನು ಉಂಟುಮಾಡಲು ಪ್ರಯತ್ನಿದವು. ಆದರೆ ಭಗವಂತನಾದ ಶ್ರೀಹರಿಯಲ್ಲಿಯೇ ಸಂಪೂರ್ಣವಾಗಿ ಆಸಕ್ತನಾದ ಧ್ರುವನಿಗೆ ಇದ್ಯಾವುದೂ ಇಂದ್ರಿಯಗಳಿಗೆ ಗೋಚರಿಸಲೇ ಇಲ್ಲ. ಏಕಾಗ್ರ ಚಿತ್ತನಾಗಿ ತನಗೆ ಆಶ್ರಯನಾದ ವಿಷ್ಣುವನ್ನೇ ಎಲ್ಲ ಕಡೆಯೂ ಕಂಡು ಸ್ತುತಿಸಿದನು.

**(ಮುಂದುವರಿಯುವುದು)**

ಧಾರ್ಮಿಕ ಚರ್ಚೆ

# ಋಕ್ ಶಾಖಿಗಳ ಅರ್ಘ್ಯಪ್ರದಾನ ಹೇಗೆ?

ಬೆ.ನಾ ವಿಜಯೀಂದ್ರಾಚಾರ್ಯ, ಮೈಸೂರು

**ಯಾವಂತೋಸ್ಯಾಂ ವಿಕರ್ಮಸ್ಥಾಃ ಪೃಥಿವ್ಯಾಂ ಬಾಲಿಶಾ ದ್ವಿಜಾಃ ।**
**ತೇಷಾಂ ಪಾವಿತ್ರ್ಯ ಸಿದ್ಧ್ಯರ್ಥಂ ಸಂಧ್ಯಾ ಸೃಷ್ಟಾ ಸ್ವಯಂಭುವಾ ॥**

ಬ್ರಾಹ್ಮಣನಾದವನು ವೇದಾಧ್ಯಯನ, ಯಾಜನ, ದಾನಗಳಲ್ಲಿಯೇ ನಿರತನಾಗಿ ತನ್ನ ಹುಟ್ಟನ್ನು ಸಾರ್ಥಕಗೊಳಿಸಿಕೊಳ್ಳಬೇಕೆಂಬುದು ಶಾಸ್ತ್ರದ ಗುಟ್ಟು.

ದ್ವಿಜನಾಗಿ ಜನಿಸಿದವನಾಗಿಯೂ ಇವುಗಳಲ್ಲಿ ನಿರತನಾಗದಿದ್ದಲ್ಲಿ ದ್ವಿಜತ್ವ ಸಿದ್ಧಿಯಾಗದು. ಇವನಲ್ಲಿ ಬ್ರಾಹ್ಮಣ್ಯವು ಸಿದ್ಧವಾಗಬೇಕಾದರೆ ಕನಿಷ್ಠ ಮೂರು ಸಂಧ್ಯಾಕಾಲದಲ್ಲಿಯಾದರೂ ತನ್ನ ವಿಹಿತ ಶಾಖೆಯಂತೆ ಸಂಧ್ಯಾವಂದನೆಯನ್ನಾಚರಿಸಬೇಕು.

ನಿರಂತರವೂ ಷಟ್ಕರ್ಮಗಳಲ್ಲಿ ನಿರತರಾಗದಿದ್ದ ಬಾಲಿಶಬ್ರಾಹ್ಮಣರಿಗೂ ಪಾವಿತ್ರ್ಯ ಬರಲೆಂದು ಬ್ರಹ್ಮದೇವರು ಸಂಧ್ಯೆಯನ್ನು ಸೃಷ್ಟಿಸಿದ್ದಾರೆ. ಈ ಸಂಧ್ಯೆಯು ಪ್ರಾತಃ ಕಾಲದಲ್ಲಿ ನಕ್ಷತ್ರವಿರುವಾಗ, ಮಧ್ಯಾಹ್ನ ಸೂರ್ಯ ನಡುನೆತ್ತಿಯಲ್ಲಿದ್ದಾಗ, ಸಾಯಂ ಸೂರ್ಯಾಸ್ತಮಾನವಾಗುವ ಮುನ್ನ ಎಂದು ವಿಹಿತವಾಗಿದೆ.

ಮೂರು ಕಾಲದಲ್ಲಿಯೂ ನಿಂತು ಬೊಗಸೆಯಿಂದ ಅರ್ಘ್ಯವನ್ನು ನೀಡಬೇಕೆಂಬುದು ಸಾಮಾನ್ಯವಾದರೂ ಶಂಖರೆಂಬ ಮಾತು ವಿಶೇಷ ಹೇಳುತ್ತದೆ.

**ಸೂರ್ಯಾಯೈವ ತು ಗಾಯತ್ರ್ಯಾ**
**ತ್ರಿಸಂಧ್ಯಾಸ್ವಂಜಲಿಂ ಕ್ಷಿಪೇತ್ ।**
**ಪ್ರಾತರ್ಮಧ್ಯಾಹ್ನಯೋಸ್ತಿಷ್ಠನ್**
**ಸಾಯಮಾಸೀನ ಏವ ಚ** ॥ ಎಂದು

ಬೆಳಿಗ್ಗೆ ಮಧ್ಯಾಹ್ನ ನಿಂತು ಅರ್ಘ್ಯಪ್ರದಾನ, ಸಾಯಂಕಾಲ ಕುಳಿತೇ ಅರ್ಘ್ಯಪ್ರದಾನ ಎಂದಿದೆ. ಇದರಿಂದ ಮೂರುಕಾಲದಲ್ಲಿಯೂ ನಿಂತು ಅರ್ಘ್ಯಪ್ರದಾನ ಮಾಡುವ ಋಗ್ವೇದಿಗಳಿಗೆ ಸಂಶಯ ಬರುತ್ತದೆ.

ಶ್ರೀಮದಾಚಾರ್ಯರು ಸದಾಚಾರ ಸ್ಮೃತಿಯಲ್ಲಿ **'ಗಾಯತ್ರ್ಯಾಚಾಂಜಲಿಂ ದತ್ವಾ ಧ್ಯಾತ್ವಾ**

ಇಂದ್ರಿಯಗಳೆಂಬ ಕುದುರೆಗಳನ್ನು ಹಿಡಿತದಲ್ಲಿಟ್ಟುಕೊಳ್ಳಲು ಪ್ರಯತ್ನಿಸಿ.



**ಸೂರ್ಯಗತಂ ಹರಿಂ'** ಎಂದು ಸೂರ್ಯಾಂತರ್ಗತ ಹರಿಯನ್ನು ಸ್ಮರಿಸಿ ಅಂಜಲಿಯಿಂದ ಗಾಯತ್ರಿಯನ್ನು ಉಚ್ಚರಿಸಿ ಅರ್ಘ್ಯಪ್ರದಾನ ಮಾಡಿ ಎಂದಿಷ್ಟೇ ಹೇಳಿದ್ದಾರೆ. ನಿಂತು ಕುಳಿತು ಎಂಬುದರ ಬಗ್ಗೆ ನಮಗೆ ತಿಳಿಯದು.

ಆದರೆ ಋಕ್ ಸಂಧ್ಯಾಭಾಷ್ಯದಲ್ಲಿ ಇದರ ಬಗ್ಗೆ ಚರ್ಚಿಸಿದ್ದಾರೆ.

**ಪ್ರಾತರ್ಮಾಧ್ಯಾಹ್ನಯೋಸ್ತಿಷ್ಠನ್ 'ಸಾಯಮಾಸೀನ ಏವತು ಇತಿ ಶಂಖ ಆಹ ।**
**'ತಿಷ್ಠನ್ನರ್ಘ್ಯತ್ರಯಂ ದದ್ಯಾತ್ ತ್ರಿಷು ಕಾಲೇಷು ಬಹ್ವೃಚಃ ॥' ಇತ್ಯುಕ್ತತ್ವಾತ್ ಬಹ್ವೃಚಃ ತಿಷ್ಠನ್ನೇವಾರ್ಘ್ಯತ್ರಯಂ ತ್ರಿಷು ಕಾಲೇಷು ದದ್ಯಾತ್** । ಎಂದು ನಿರ್ಣಯಿಸಿದ್ದಾರೆ.

ಶಂಖರ ಮಾತು ಕುಳಿತೇ ಸಾಯಂ ಅರ್ಘ್ಯಪ್ರದಾನ ಎಂದಿದೆ. ಆದರೆ ಋಗ್ವೇದಿಗಳು ಮೂರು ಕಾಲಗಳಲ್ಲಿಯೂ ನಿಂತೇ ಅರ್ಘ್ಯಪ್ರದಾನ ಮಾಡಬೇಕು ಎಂಬ ಪ್ರಮಾಣದಿಂದ ಋಗ್ವೇದಿಗಳು ಮೂರು ಕಾಲದಲ್ಲಿಯೂ ನಿಂತೇ ಅರ್ಘ್ಯಪ್ರದಾನವನ್ನು ಮಾಡಬೇಕು ಎಂದು ನಿರ್ಣಯಿಸಿದ್ದಾರೆ.

ಹೀಗೆ ಹೇಳಿದ್ದರೂ ಶ್ರೀಮದಾಚಾರ್ಯರು ಸದಾಚಾರ ಸ್ಮೃತಿಯಲ್ಲಿ

**ಆ ಸೂರ್ಯದರ್ಶನಾತ್** ....................................................

....................................................................................

**ಉತ್ತರಮುಪವಿಶ್ಯೈವ ವಾಗ್ಯತಃ ಸರ್ವದಾ ಜಪೇತ್** ॥

ಎಂದು ಹೇಳಿದ ವಚನದಿಂದ ಹೀಗೆ ಸಂಶಯ ಬರಬಹುದು.

ಇಲ್ಲಿ ಶ್ರೀಮದಾಚಾರ್ಯರು, ಜಪವನ್ನು ಸಂಜೆ ಕುಳಿತೇ ಮಾಡಬೇಕು ಎಂದು ಹೇಳಿದ್ದರಿಂದ ಜಪಾಂಗವಾದ ಅರ್ಘ್ಯಪ್ರದಾನವೂ ಕುಳಿತೇ ಮಾಡಬೇಕೆಂದು ಸಿದ್ಧಿಸುವುದಲ್ಲವೇ ಎಂದರೆ ಇಲ್ಲಿ ಆಚಾರ್ಯರ ಭಾವವನ್ನು ನಾವು ಸರಿಯಾಗಿ ಅರ್ಥೈಸಿಕೊಳ್ಳಬೇಕು. ಆಚಾರ್ಯರು ಹಿಂದೆ 'ಗಾಯತ್ರ್ಯಾಚಾಂಜಲಿಂ ದತ್ವಾ' ಎಂದು ಅರ್ಘ್ಯಪ್ರಕರಣವನ್ನು ಹೇಳಿಯಾಗಿದೆ. ಆದ್ದರಿಂದ ಪುನಃ ಇಲ್ಲಿ ಸಂಧ್ಯಾ–ಜಪಶಬ್ದ–ಗಳನ್ನು ಸಾವಕಾಶಮಾಡಿ ಅರ್ಘ್ಯವೆಂದೂ ಅರ್ಥೈಸಲು ಬರದು. ಇಷ್ಟೇ ಅಲ್ಲದೆ ಇಲ್ಲಿ ಪೂರ್ವಾಂ ಸಂಧ್ಯಾಂ ಎಂಬಲ್ಲಿನ ಸಂಧ್ಯಾ ಶಬ್ದಕ್ಕೆ ಗಾಯತ್ರೀ ಎಂದೇ ವ್ಯಾಖ್ಯಾನ ಮಾಡಿದ್ದಾರೆ.

ಸಂಧ್ಯಾಂ –ಸಂಧ್ಯಾಶಬ್ದವಾಚ್ಯಾಂ ಗಾಯತ್ರೀಂ ವಾಗ್ಯತೋ ಜಪೇತ್ ಎಂದು ಸದಾಚಾರ

(46ನೇ ಪುಟದಲ್ಲಿ....)

ಸತ್ಯ, ಪ್ರಿಯ ಮತ್ತು ಹಿತ ನುಡಿಗಳು ನಿಮ್ಮ ಜೀವನದಲ್ಲಿ ಹಾಸುಹೊಕ್ಕಾಗಿರಲಿ.

# ಮೂರರಿಂದ ಸಂಸಾರವನ್ನು ದಾಟು

–ಡಾ। ಎನ್. ವೆಂಕಟೇಶ ಆಚಾರ್ಯ, ಬೆಂಗಳೂರು

ಪಾಠ ಒಪ್ಪ ಓರಣವಾಗಿ ಹೇಳುವುದು ಎಷ್ಟು ದೊಡ್ಡದೋ ಅದನ್ನು ಶಿಷ್ಯನಿಂದ ಒಪ್ಪಿಸಿಕೊಳ್ಳುವುದೂ ಸಹ ಅಷ್ಟೇ ಹಿರಿದು. ತಪ್ಪು ತಿಳಿದು ತೆಪ್ಪಗಿದ್ದು ಮುಂದೆ ಗುರುವಾಗಿ ತಪ್ಪು ಪಾಠ ಹೇಳಿದ ವಿದ್ಯಾರ್ಥಿ ತನ್ನನ್ನೂ ಗುರುವನ್ನೂ ಸಹ ನರಕಕ್ಕೆ ನೂಕಬಲ್ಲ. ಇಂತಹ ಎಷ್ಟೋ ಜೋಡಿಗಳನ್ನು ಯಮ ತನ್ನ ನರಕದಲ್ಲಿ ನೂರಾರು ನೋಡಿರಲಿಕ್ಕೂ ಸಾಕು. ಹಾಗಾಗದ ಈ ಶಿಷ್ಯನನ್ನು ಕಂಡು ಮತ್ತೆರಡು ಕೊಡುಗೆಗಳನ್ನು ನೀಡಿದ ಎಂದು ತಿಳಿಯಬೇಕು.

ಒಬ್ಬ ಮೆಕ್ಯಾನಿಕ್ ತಪ್ಪು ಮಾಡಿದರೆ ಜನರೇಟರ್ ಮಾತ್ರ ಹಾಳಾಗುತ್ತದೆ. ಒಬ್ಬ ತಪ್ಪು ವಿದ್ಯಾರ್ಥಿ ಗುರುವಾದರೆ ಜನರೇಷನ್‌ಗಳು ಹಾಳಾಗುತ್ತವೆ. ಹೀಗಾಗಿ ಅಧ್ಯಾಪಕ ಎಂದರೆ ಸಾರ್ಥಕ ಕಾಲಪ್ರಾಪಕ ಎಂದೇ ಅರ್ಥ. ಇದು ಸಂಸ್ಕೃತದ ಹೂರಣ.

ಭಗವಂತ ಭಕ್ತವತ್ಸಲ. ದೇವತೆಗಳು ಶಿಷ್ಯವತ್ಸಲರು. ಆ ಅಗ್ನಿಗೆ ಶಿಷ್ಯನ ಹೆಸರನ್ನೇ ಇಟ್ಟನು ಎಂದ ಮೇಲೆ ಯಮನ ಔದಾರ್ಯ ಮಿಗಿಲಾದುದು. ತಾನೇ ಜ್ಞಾನಾಗ್ನಿಯನ್ನು ಹೊತ್ತಿಸಿ ಅ ಅಗ್ನಿಯನ್ನು ಶಿಷ್ಯನಲ್ಲಿ ಸ್ಥಾಪಿಸಿ ಕಡೆಗೆ ಅದಕ್ಕೆ ಶಿಷ್ಯನ ಹೆಸರನ್ನು ಇಡುವುದು ಎಂದರೆ ಕಲಿಕೆ–ಒಲಿಕೆಗಳು ಶ್ರೇಷ್ಠ ಅಲ್ಲವೆ.

**ತ್ರಿನಾಚಿಕೇತಃ ತ್ರಿಭಿರೇತ್ಯ ಸಂಧಿಂ**
**ತ್ರಿಕರ್ಮಕೃತ್ ತರತಿ ಜನ್ಮಮೃತ್ಯೂ ।**
**ಬ್ರಹ್ಮಜಜ್ಞಂ ದೇವಮೀಡ್ಯಂ ವಿದಿತ್ವಾ**
**ನಿಚಾಯ್ಯೇಮಾಂ ಶಾಂತಿಮತ್ಯಂತಮೇತಿ ॥**

ಎಲ್ಲೈ ನಚಿಕೇತನೇ, ಮೂರು ಭಾರಿ ನಾಚಿಕೇತಾಗ್ನಿ ಚಯನಮಾಡಿದ. ಯಾವನು ಮೂರು ವೇದಗಳಿಂದ ವಿರೋಧಬಾರದಂತೆ ಸರಿಯಾಗಿ ಅರ್ಥಾನು



ಸಂಧಾನಮಾಡಿಕೊಂಡು ಭಗವಂತನನ್ನು ತಿಳಿಯುತ್ತಾನೋ, ತಿಳಿಯುತ್ತಲೇ ಯಜ್ಞದಾನ ತಪಸ್ಸುಗಳನ್ನು ತಪ್ಪದೇ ಆಚರಿಸುವನೋ ಅವನು ಜನ್ಮ ಮೃತ್ಯುಗಳನ್ನು ದಾಟುತ್ತಾನೆ. ಕೇವಲ ಕರ್ಮವನ್ನಲ್ಲ.

ಭಗವಂತನನ್ನು ಬ್ರಹ್ಮಜ ಎಂದೆ ಒಳಬಗೆಯಲ್ಲಿ ತಿಳಿಯಬೇಕು. ಬ್ರಹ್ಮ ಎನಿಸಿದ ವೇದದಿಂದ ಜ= ತಿಳಿಯಲ್ಪಡುತ್ತಾನೆ. ಹಾಗೆಯೇ ಜ್ಞ ಎಂದರೆ ಎಲ್ಲವನ್ನೂ ತಿಳಿದವನು. ಜೊತೆಗೆ ದೇವ=ಕ್ರೀಡಾದಿ ಗುಣವಿಶಿಷ್ಟನಾದವ, ಇಷ್ಟೇ ಅಲ್ಲದೇ ಈಡ್ಯ= ದೇವತೆಗಳಿಂದ ಸ್ತುತ್ಯನಾದವ ಎಂದು ಚರ್ಚಿಸಿ ತಿಳಿದು, ವೇದ ಹೇಳಿದಂತೆ ಜನನ ಮರಣ ದಾಟುವಿಕೆ ರೂಪವಾದ ಶಾಂತಿಯನ್ನು ಅತ್ಯಂತವಾಗಿ ಹೊಂದುವವನು.

ನಾಚಿಕೇತಾಗ್ನಿಯನ್ನು ಮೂರುಭಾರಿ ಚಯನ ಮಾಡಿದವನು ಎಂದೆನ್ನುತ್ತಾನೆ ಯಮನು. ಮೂರು ಭಾರಿಗೆ ಮುಕ್ತಾಯ ಹೂಡಬೇಕೆ? ಹಾಗಾದಲ್ಲಿ ಮೊದಲಿಗೆ ಮುಕ್ತಾಯ ಹೂಡಬಹುದಲ್ಲವೇ? ಸಂಸ್ಕೃತದ ಶಬ್ದ ಮೂರು ಮುಷ್ಟಿಯಲ್ಲಿ ಸಿಗುವಷ್ಟು ಸಣ್ಣದು. ಬಿಟ್ಟರೆ ಬ್ರಹ್ಮಾಂಡವನ್ನು ಮುಟ್ಟುವಂತಹುದು. ಹದಿನಾಲ್ಕು ಲೋಕಗಳನ್ನು ಮೂರು ಲೋಕ ಎನ್ನುವುದಿಲ್ಲವೇ? ಮೇಲಿನ ಲೋಕ ಕೆಳಗಿನ ಲೋಕ ಮಧ್ಯದ ಲೋಕ ಎಂದಾಗ ಎಲ್ಲವೂ ಅಡಗಿತು. ಹೀಗೆ ಬದುಕಿನ ಪ್ರಾತಃಸವನ ಮಾಧ್ಯಂದಿನಸವನ ಸಾಯಂಸವನಗಳಲ್ಲೂ ಯಜ್ಞ ನಡೆಸುತ್ತಾ ಹರಿಯ ಹಿರಿಮೆಯನ್ನು ಹಾಡಿ ಹೊಗಳಬೇಕು. ಚಯನ ಎಂದರೆ ಮಥನ. ಕಷ್ಟ ಬಂದಾಗ ಕೆಳಮುಖರಾಗಿ ಸುಖ ಬಂದಾಗ ಮೇಲ್ಮುಖರಾಗಿ ನಡೆವ ಈ ಬದುಕು ಮಥನವೇ ಆಗಿದೆ. ಈ ಚಯನ ಅನುಭವಗಳ ಸಂಚಯನ ಅನುಸಂಧಾನದ ಸಂಕಲನ.

ಮೂರರೊಡನೆ ಹೊಂದಿಕೊಂಡು ಎಂಬ ಈ ಗೂಢಮಾತು ಅನೇಕ ಅರ್ಥದಲ್ಲಿ ತೆರೆದುಕೊಳ್ಳಬಲ್ಲದು.

ಜನ್ಮ ನೀಡಿದ ತಾಯಿ, ಪೋಷಣೆ ನಡೆಸಿದ ತಂದೆ, ಮಾರ್ಗ ತೋರುವ ಗುರುಗಳನ್ನು ಹೊಂದುಕೊಂಡು ನಡೆವ ಬದುಕು ಐಹಿಕ–ಪಾರತ್ರಿಕಗಳ ಸುಮಧುರ ಸಮ್ಮೇಳನವಾಗಿ ಋಣ ತೀರಿಸುತ್ತಲೇ ದೈವಾನುಗ್ರಹ ಪರರಾಗಿ ಬದುಕುವ ಕಲೆ ಸಾಧಕನಿಗೆ ಇರಬೇಕು.

ಮೊದಲು ಹೇಳಿದ ಆ ಅರ್ಥ ಸಾಧಕನ ಮೊದಲ ಮೆಟ್ಟಿಲನ್ನು ತಿಳಿಸುವಂತಹುದೇ. ಅದನ್ನು ತಿಳಿಸಲು ಯಮದೇವನೇ ಬರಬೇಕಾಗಿಲ್ಲ. ಆದ್ದರಿಂದ ಸಾಧನೆಯತ್ತ ಮುಖ ಮಾಡುವವನ ಬೌದ್ಧಿಕ ಸಮತೋಲನ ಇಲ್ಲಿಗೆ ಮೂರು ಎಂದರೆ ಮೂರು ವೇದಗಳು.

ಮೂರು ವೇದಗಳಿಗೂ ವಿರೋಧ ಬಾರದಂತೆ ಅವು ಹೇಳುವ ಅರ್ಥ. ಬ್ರಹ್ಮಪರ ಎಂದು ಯುಕ್ತಿ ಪೂರ್ವಕವಾಗಿ ನಿರ್ಧರಿಸಿಕೊಳ್ಳುವ ಮೇಧಾಶಕ್ತಿ.

ಹೀಗೆ ಮೂರು ವೇದಗಳ ಏಕಾಭಿಪ್ರಾಯ ಅರಿತು ತ್ರಿಕರ್ಮಕೃತ್ ಎಂದರೆ ಯಜ್ಞ-ದಾನ-ತಪಸ್ಸು ಇವುಗಳನ್ನು ಆಚರಿಸುತ್ತಾ ಜನ್ಮ-ಮೃತ್ಯುಗಳನ್ನು ದಾಟಬೇಕು.

ಮೂರರೊಂದಿಗೆ ಹೊಂದಿಕೊಂಡು ಎಂದರೆ ಶೃತಿ-ಸ್ಮೃತಿ-ಸಂಪ್ರದಾಯ ಇವುಗಳೊಂದಿಗೆ ಸರಿಸಮನಾಗಿ ಹೊಂದಿಕೊಂಡು ತ್ರಿಕರ್ಮಕೃತ್ ನಿತ್ಯ ನೈಮಿತ್ತಿಕ ಸಮಾಜಧರ್ಮಗಳನ್ನು ನಡೆಸುತ್ತಾ ಜನನ ಮರಣಗಳನ್ನು ದಾಟು.

ಸೂತ್ರಪ್ರಸ್ಥಾನ, ಪುರಾಣಪ್ರಸ್ಥಾನ, ಇತಿಹಾಸಪ್ರಸ್ಥಾನ ಈ ಮೂರರೊಂದಿಗೆ ಹೊಂದಿಕೊಂಡು ತ್ರಿಕರ್ಮಕೃತ್ ಶ್ರವಣ, ಮನನ, ನಿಧಿಧ್ಯಾಸನಗಳನ್ನು ಮಾಡುತ್ತಾ ಜನ್ಮ ಮರಣಗಳನ್ನು ದಾಟು.

ಮೂರಾದ ಜೀವ-ಜಡ-ಪರಮಾತ್ಮ ಇವುಗಳಲ್ಲಿ ಯಾವುದನ್ನೂ ಸುಳ್ಳೆಂದು ಅಪಲಾಪ ಮಾಡದೆ ಇವನ್ನು ಒಪ್ಪಿ ತ್ರಿಕರ್ಮಕೃತ್ ಶ್ರವಣ-ಮನನ ನಿಧಿಧ್ಯಾಸನಗಳನ್ನು ನಡೆಸುತ್ತಾ ಜನನ ಮರಣಗಳನ್ನು ದಾಟು.

ಮೂರಾದ ಹನುಮ-ಭೀಮ-ಮಧ್ವ ಈ ರೂಪಗಳಿಂದ ಸಂಧಿಂ=ಅವಿರೋಧವನ್ನು ಕಾಣುತ್ತಾ ತ್ರಿಕರ್ಮಕೃತ್. ಬ್ರಹ್ಮಚಾರಿ, ಗೃಹಸ್ಥ ಸಂನ್ಯಾಸ ಕರ್ಮಗಳನ್ನು ಮಾಡುವವನು ಜನನ ಮರಣಗಳನ್ನು ದಾಟುತ್ತಾನೆ.

ತ್ರಿಭಿಃ ಮೂರು ಪಾದಗಳುಳ್ಳ ಗಾಯತ್ರಿಯಿಂದ ಸಂಧಿಂ ಏತ್ಯ= ಸಂಧ್ಯಾ ವಂದನೆಯನ್ನು ತ್ರಿಕಾಲದಲ್ಲಿ ಮಾಡಿ ತ್ರಿಕರ್ಮಕೃತ್= ಯಜ್ಞ-ದಾನ ತಪಸ್ಸುಗಳನ್ನು ಮಾಡಿದವನು ಜನನ ಮರಣಗಳನ್ನು ದಾಟುತ್ತಾನೆ. ಅಂದರೆ ಸಂಧ್ಯಾದಿ ಕರ್ಮಗಳನ್ನು ಮಾಡದಿದ್ದರೆ ವೇದೋಕ್ತ ಕರ್ಮ ಮಾಡಿಯೂ ಉಪಯೋಗವಿಲ್ಲ.

ತ್ರಿಕರ್ಮಕೃತ್ ಎಂದರೆ ಕೆಲವರು ಯಜ್ಞ-ಅಧ್ಯಯನ ದಾನ ಎನ್ನುತ್ತಾರೆ. ಯಜ್ಞದಲ್ಲೇ ಜ್ಞಾನಯಜ್ಞನಾದ ಅಧ್ಯಯನವೂ ಅಡಗಿಲ್ಲವೇ? ಆದ್ದರಿಂದ ಅಧ್ಯಯನವನ್ನು ಪ್ರತ್ಯೇಕ ಪರಿಗಣಿಸಿದ್ದು ಸರಿಯಲ್ಲ. ಮಿಗಿಲಾಗಿ ತಪಸಾ ಬ್ರಹ್ಮ ವಿಜಿಜ್ಞಾಸಸ್ವ ಎಂಬ ಶೃತಿ ತಪಸ್ಸಿನಿಂದಲೇ ಬ್ರಹ್ಮನನ್ನು ತಿಳಿ ಎಂದು ಆದೇಶಿಸಿರುವಾಗ ಅದನ್ನು ಕೈಬಿಡುವುದು ತರವೇ?

**(ಮುಂದುವರಿಯುವುದು)**

**ಗಳಿಸಿದ ಹಣವನ್ನು ಕೇವಲ ವಿಲಾಸ ಜೀವನಕ್ಕಾಗಿಯೇ ಪೋಲು ಮಾಡದಿರಿ,**



# ಅಧ್ಯಾತ್ಮ ಪ್ರವೇಶ

## I ಭಗವದ್ಗೀತೆ ನಿಮಗೆಷ್ಟು ಗೊತ್ತು?

**1. 'ಸುಖ'ವೆಂದರೆ**

ಅ) ಆರಾಮ ಬ) ಆನಂದ ಕ) ನಿರಂತರ ದುಃಖನಾಶ ಡ) ಶ್ರೀಮಂತಿಕೆ

**2. ಬಹಳ ಕಾಲ ಅಭ್ಯಾಸ ಮಾಡುವುದರಿಂದ ಮತ್ತೆ ಮತ್ತೆ ಆನಂದ ದೊರಕುವುದಕ್ಕೆ ------ ಎನ್ನುತ್ತಾರೆ.**

ಅ) ಸುಖ ಬ) ಆನಂದ ಕ) ಯೋಗ ಡ) ಹಠ

**3. ಮೊದಲು ವಿಷದಂತೆ ಕಷ್ಟಕರವಾಗಿದ್ದರೂ ಕ್ರಮೇಣ ಅಮೃತದಂತಾಗುವ ಸುಖವು**

ಅ) ಸಾತ್ವಿಕ ಸುಖ ಬ) ರಾಜಸ ಸುಖ ಕ) ತಾಮಸ ಸುಖ ಡ) ಸುಖವೇ ಅಲ್ಲ.

**4) ವಿಷ್ಣುವಿನ ಅನುಗ್ರಹದಿಂದ ಪ್ರಾಪ್ತವಾದ ಸುಖ**

ಅ) ಸಾತ್ವಿಕ ಸುಖ ಬ) ರಾಜಸ ಸುಖ ಕ) ತಾಮಸ ಸುಖ ಡ) ನಿರ್ಗುಣ ಸುಖ

**5) ವಿಷಯ ಪದಾರ್ಥಗಳಲ್ಲಿ ವಿರಕ್ತಿಯಿಂದ ಉಂಟಾದ ಸುಖ**

ಅ) ಸಾತ್ವಿಕ ಸುಖ ಬ) ರಾಜಸ ಸುಖ ಕ) ತಾಮಸ ಸುಖ ಡ) ನಿರ್ಗುಣ ಸುಖ

**6) ಜಗತ್ತಿನಲ್ಲಿ ಸಾಮಾನ್ಯರು ಬಯಸುವ ಸುಖ**

ಅ) ಸಾತ್ವಿಕ ಸುಖ ಬ) ರಾಜಸ ಸುಖ ಕ) ತಾಮಸ ಸುಖ ಡ) ನಿರ್ಗುಣ ಸುಖ

**7)ಮೊದಲು ಅಮೃತದಂತೆ ಖುಶಿಕೊಡುತ್ತ ಕಡೆಗೆ ವಿಷದಂತೆ ದುಃಖವನ್ನುಂಟುಮಾಡುವ ಸುಖ**

ಅ) ಸಾತ್ವಿಕ ಸುಖ ಬ) ರಾಜಸ ಸುಖ ಕ) ತಾಮಸ ಸುಖ ಡ) ನಿರ್ಗುಣ ಸುಖ

**8) ಸುಖವಲ್ಲದಿದ್ದರೂ ಸುಖದಂತೆ ಭ್ರಮಿಸಲ್ಪಡುವ ಸುಖ**

ಅ) ಸಾತ್ವಿಕ ಸುಖ ಬ) ರಾಜಸ ಸುಖ ಕ) ತಾಮಸ ಸುಖ ಡ) ನಿರ್ಗುಣ ಸುಖ

**9) ನಿದ್ರೆಯಲ್ಲಿ ಉಂಟಾಗುವ ಸುಖ**

ಅ) ಸಾತ್ವಿಕ ಸುಖ ಬ) ರಾಜಸ ಸುಖ ಕ) ತಾಮಸ ಸುಖ ಡ) ನಿರ್ಗುಣ ಸುಖ

**10) ಆಲಸ್ಯದಿಂದ ಬರುವ ಸುಖ**

ಅ) ಸಾತ್ವಿಕ ಸುಖ ಬ) ರಾಜಸ ಸುಖ ಕ) ತಾಮಸ ಸುಖ ಡ) ನಿರ್ಗುಣ ಸುಖ

## II ಹರಿಕಥಾಮೃತಸಾರ-ನಿಮಗೆಷ್ಟು ಗೊತ್ತು?

1. ಮಳೆಯಲ್ಲಿ ಭಗವಂತನ ಪಂಚರೂಪದ ಉಪಾಸನೆ ಹೇಗೆ ನಡೆಸುವುದು?

## III ಯೋಚಿಸಿ ಉತ್ತರಿಸಿ:

ಹಲವರು ಇಂದು ಯಾವುದೋ ಕಾಮನೆಯನ್ನು ಮನಸ್ಸಿನಲ್ಲಿ ಹೊತ್ತು ದೇವರಿಗೆ ಪೂಜೆ,

**ಬಂದ ಹಣದಲ್ಲಿ ಸ್ವಲ್ಪ ಭಾಗವನ್ನು ಧಾರ್ಮಿಕ ಕಾರ್ಯಕ್ಕಾಗಿ, ಬಡಬಗ್ಗರಿಗಾಗಿ ವಿನಿಯೋಗಿಸಿ.**

ಪ್ರಾರ್ಥನೆ ಮುಂತಾದುವುಗಳನ್ನು ಸಲ್ಲಿಸುತ್ತಾರೆ. ಅವರ ಮನಸ್ಸಿನ ಕಾಮನೆ ಈಡೇರಬೇಕೆಂದು ಬಗೆ ಬಗೆಯಾಗಿ ಪ್ರಾರ್ಥಿಸುತ್ತಾರೆ. ಆದರೆ ಕಡೆಗೂ ಇವರ ಕಾಮನೆ ಈಡೇರಲೇ ಇಲ್ಲ. ಆಗ ಇವರಲ್ಲಿ ಹಲವಾರು ಪ್ರಶ್ನೆಗಳು ಏಳಲಾರಂಭಿಸುತ್ತದೆ. 'ನಾನು ಇಷ್ಟೆಲ್ಲ ಮಾಡಿಯೂ ದೇವರು ಏನೂ ಮಾಡಲಿಲ್ಲ ಹಾಗಿದ್ದರೆ ದೇವರೆ ಇಲ್ಲವೆ? ಅಥವಾ ಕಲಿಯುಗದಲ್ಲಿ ಈ ಪೂಜೆ ಪ್ರಾರ್ಥನೆಗಳೆಲ್ಲ ವ್ಯರ್ಥವೆ?' ಯೋಜಿಸಿ.

**–ಉತ್ತರ ಮುಂದಿನ ತಿಂಗಳು–**

**ಕಳೆದ ಸಂಚಿಕೆಯ ಉತ್ತರಗಳು**

**I** 1) ಕ 2) ಕ 3) ಅ 4) ಬ 5) ಡ 6) ಕ 7) ಅ 8) ಬ 9) ಬ 10) ಬ

**II** ಶಾಸ್ತ್ರಾಧ್ಯಯನವನ್ನು ನಡೆಸುವುದು ಕೇವಲ ಬದುಕುವ ಉದ್ದೇಶಕ್ಕಾಗಿ ಅಲ್ಲ. ಭಗವಂತನ ಅನುಗ್ರಹಕ್ಕಾಗಿ. ಆದ್ದರಿಂದ ಈ ಆಧುನಿಕ ಯುಗದಲ್ಲಿ ಶಾಸ್ತ್ರಾಧ್ಯಯನದಿಂದ ಯಾವ ಪ್ರಯೋಜನವಿಲ್ಲವೆಂದು ಹೇಳುವಂತಿಲ್ಲ. ಭಗವಂತನ ಪರಮಾನುಗ್ರಹ ಪ್ರಾಪ್ತಿಯಾಗುವುದೇ ಶಾಸ್ತ್ರಾಧ್ಯಯನದ ಮುಖ್ಯ ಪ್ರಯೋಜನ.

ಇಂದು ಪ್ರತಿಯೊಬ್ಬರಿಗೂ ಲಾಭದ ದೃಷ್ಟಿಯೇ ಮುಖ್ಯವಾಗಿದೆ. ಲೌಕಿಕ ಬದುಕೇ ಸರ್ವಸ್ವವಾಗಿದೆ. ಆದ್ದರಿಂದ ಎಲ್ಲವನ್ನೂ ಆ ದೃಷ್ಟಿಯಿಂದಲೇ ಕಾಣುತ್ತಿರುವುದು ವಿಪರ್ಯಾಸ. ಶಾಸ್ತ್ರಾಧ್ಯಯನವಿರಲಿ, ಪೂಜೆ–ಜಪಾದಿಗಳೂ ಇಂದು ಹೊಟ್ಟೆ ತುಂಬಿಸುವ ವೃತ್ತಿಯಾಗಿ ಬಿಟ್ಟಿವೆ. ಇದೇ ಬಹಳ ದುಃಖದ ಸಂಗತಿ. ಹೀಗೆ ಕೇವಲ ಹೊಟ್ಟೆ ತುಂಬಿಸುವ ದೃಷ್ಟಿಯಿಂದ ಶಾಸ್ತ್ರಾಧ್ಯಯನ, ಪೂಜೆ–ಜಪಾದಿಗಳನ್ನು ನಡೆಸುತ್ತಿರುವುದರಿಂದ ಯಾವುದರಿಂದಲೂ ಏನೇನೂ ಪ್ರಯೋಜನವಾಗುತ್ತಿಲ್ಲ. ಕಷ್ಟಪರಿಹಾರವಾಗುತ್ತಿಲ್ಲ. ಇಷ್ಟ ಪ್ರಾಪ್ತಿಯಾಗುತ್ತಿಲ್ಲ.

ಇಂದಿಗೂ ನಿಷ್ಕಾಮವಾಗಿ ಕೇವಲ ಭಗವಂತನ ಪರಮಾನುಗ್ರಹ ಪಡೆಯುವ ಉದ್ದೇಶದಿಂದ ಶಾಸ್ತ್ರಾಧ್ಯಯನವನ್ನು ನಡೆಸಿ, ಅದರಂತೆ ಸಾಧನೆಯನ್ನು ನಡೆಸಿದರೆ ಖಂಡಿತವಾಗಿಯೂ ಕಷ್ಟ ನಿವೃತ್ತಿಯಾಗಿ ಇಷ್ಟಪ್ರಾಪ್ತಿಯಾಗುವುದರಲ್ಲಿ ಸಂದೇಹವೇ ಇಲ್ಲ. ಶ್ರದ್ಧಾ–ಭಕ್ತಿಯಿಂದ ಶಾಸ್ತ್ರಾಧ್ಯಯನವನ್ನು ನಡೆಸಿ ಸಾಧಿಸಲು ತೊಡಗುವುದರಿಂದ ಜೀವನ ನಿರ್ವಹಣೆ ನಿರಾಯಾಸವಾಗಿ ಆಗುತ್ತದೆ. ಆದರೆ ಜೀವನ ನಿರ್ವಹಣೆಗಾಗಿಯೇ ಶಾಸ್ತ್ರಾಧ್ಯಯನ ನಡೆಸುವುದರಿಂದ ಆಗುವ ಪ್ರಯೋಜನ ಅತ್ಯಲ್ಪ.

ಇಂದಿನ ಶಾಸ್ತ್ರಾಧ್ಯಯನದ ಪದ್ಧತಿಯೂ ಸರಿಯಿಲ್ಲವೆಂದು ತೋರುತ್ತದೆ. ಏಕೆಂದರೆ ಒಂದೊಂದು ದಿನದ ಶಾಸ್ತ್ರಾಧ್ಯಯನದಿಂದಲೂ ಜ್ಞಾನ–ಭಕ್ತಿ–ವೈರಾಗ್ಯಗಳು ಹೆಚ್ಚುತ್ತಾ ವ್ಯಕ್ತಿ ವಿನಯಶೀಲನಾಗಬೇಕು, ಸಾಧಕನಾಗಬೇಕು. ಆದರೆ ಇಂದಿನ ಶಾಸ್ತ್ರಾಧ್ಯಯನದ ಪದ್ಧತಿಯಿಂದ ದಿನದಿಂದ ದಿನಕ್ಕೆ 'ನಾನೊಬ್ಬ ಪಂಡಿತ, ಬುದ್ಧಿವಂತ, ಉಳಿದವರಿಗೇನು ಗೊತ್ತು' – ಹೀಗೆ ಮದವೇ ಹೆಚ್ಚುತ್ತಿರುವುದು ದೋಷಪೂರಿತವಾದ ಅಧ್ಯಯನ ಎಂಬುದನ್ನು ಸ್ಪಷ್ಟಪಡಿಸುತ್ತದೆ.

**ಹೆಂಡತಿ ಮಕ್ಕಳಿಗೆ ಹಿತೋಪದೇಶವನ್ನು ಮಾಡುತ್ತಾ ಕುಟುಂಬವನ್ನು ಸಾಗಿಸುತ್ತಿರಿ.**



**ಜ್ಯೋತಿಷ ಮಿಮಾಂಸಾ**

# ಚಂದ್ರ

–ವಿ. ಕೆ. ಶ್ರೀಪತಿ ಉಪಾಧ್ಯಾಯ, ಕುಂಭಾಸಿ

**ಚಾಂದ್ರಂಬಲಂ ನಿಖಿಲ ವೀರ್ಯಬೀಜಮ್** ಎನ್ನುವಂತೆ ಜಾತಕದಲ್ಲಿ ಲಗ್ನದಷ್ಟೇ ಪ್ರಬಲ ಚಂದ್ರ.. **ತಾರಾಬಲಂ ಚಂದ್ರಬಲಂ ತದೇವ** ಎನ್ನುವ ಮಾತು ಇದಕ್ಕೆ ಪುಷ್ಟಿ ನೀಡುತ್ತದೆ.

ಲಗ್ನ, ಚಂದ್ರರಲ್ಲಿ ಯಾರು ಬಲಿಷ್ಠರೆಂದು ನೋಡಿ ಅಲ್ಲಿಂದ ಗ್ರಹರನ್ನು ಗಣನೆಗೆ ತೆಗೆದುಕೊಳ್ಳುವ ಕ್ರಮವಿದೆ.

30 ವರ್ಷಗಳ ನಂತರ ಚಂದ್ರನಿಂದ ಭಾವಬಲ ಪರೀಕ್ಷೆ ಮಾಡುವ ಪದ್ಧತಿಯೂ ಇದೆ.

ರವಿ ಆತ್ಮಕಾರಕ, ಚಂದ್ರ ಮನಃಕಾರಕ, **'ಆತ್ಮಾ ಮನಸಾ ಸಂಯುಜ್ಯತೇ ಮನ ಇಂದ್ರಿಯೇಣ',** ಎನ್ನುವಂತೆ ಆತ್ಮನಿಗೂ ಮನಸ್ಸಿಗೂ ಸಂಯೋಗವಾಗದೆ ಬಾಹ್ಯಪದಾರ್ಥದ ಜ್ಞಾನಬಾರದು ಈ ದೃಷ್ಟಿಯಿಂದಲೂ ಚಂದ್ರನ ಸ್ಥಾನ ಮಹತ್ತ್ವದ್ದು.

ವೈಜ್ಞಾನಿಕವಾಗಿ ಚಂದ್ರ ಭೂಮಿಯ ಉಪಗ್ರಹ, ಕಂದಕ, ಪರ್ವತ, ಮೈದಾನಗಳಿಂದ ಇದರ ಮೇಲ್ಮೈ ಕೂಡಿದೆ. ನೀರು, ಗಾಳಿಗಳಿಲ್ಲದ ನಿರ್ಜೀವಕಾಯ, ಪರಿಭ್ರಮಣೆಯ ಅವಧಿ ಒಂದೇ ಆಗಿರುವುದರಿಂದ (27 ದಿನಗಳಿಗೊಮ್ಮೆ ಭೂಮಿಗೆ ಒಂದು ಸುತ್ತು ಹಾಕುವುದು) ಭೂಮಿಯ ಯಾವುದೇ ಸ್ಥಳದಿಂದ ನೋಡಿದರೂ ಒಂದು ಮುಖ ಗೋಚರಿಸುವುದು.

ಪ್ರಾಚೀನ ಜ್ಯೋತಿಷ ಶಾಸ್ತ್ರದಂತೆ ಚಂದ್ರನು ಒಬ್ಬ ಗ್ರಹ. ಇವನ ಮಧ್ಯಮಗತಿ 790 ಡಿಗ್ರಿ. 35 ಮಿನಿಟು. ಇವನಿರುವ ನಕ್ಷತ್ರಕ್ಕೆ ನಿತ್ಯನಕ್ಷತ್ರವೆಂದು ಹೆಸರು. ಸಾಮಾನ್ಯವಾಗಿ ಪ್ರತಿನಿತ್ಯವೂ ಒಂದು ನಕ್ಷತ್ರಕಲೆಗಳಷ್ಟು ಸಂಚರಿಸುವುದರಿಂದ ಇವನ ನಕ್ಷತ್ರಕ್ಕೆ ನಿತ್ಯ ನಕ್ಷತ್ರವೆಂಬ ಹೆಸರು. ಅಮಾತಿಥ್ಯಂತದಲ್ಲಿ ಚಂದ್ರ ಸೂರ್ಯರು ಒಟ್ಟಾಗಿರುತ್ತಾರೆ. (ಒಂದೇ ಸರಳರೇಖೆಯಲ್ಲಿ) ಹುಣ್ಣಿಮೆಯ ದಿವಸ ಸರಿಯಾಗಿ 180 ಡಿಗ್ರಿ ಅಂತರದಲ್ಲಿ ಒಂದೇ ಸರಳ ರೇಖೆಯಲ್ಲಿರುತ್ತಾರೆ. ಈ ರವಿ–ಚಂದ್ರರ ಅಂತರಕ್ಕೆ ತಿಥಿ ಎಂದು ಹೆಸರು. ಒಂದು ಅಮಾಂತ್ಯದಿಂದ ಇನ್ನೊಂದು ಅಮಾಂತ್ಯದ ನಡುವಿನ ಕಾಲಕ್ಕೆ ಚಾಂದ್ರಮಾಸ ಎಂದು

**ಭಾರತೀಯ ಸಂಸ್ಕೃತಿ–ವಿದ್ಯೆಗಳನ್ನು ಕಲಿಯಲು ತೊಡಗಿರಿ.**

ಹೆಸರು. ಒಂದು ಚಾಂದ್ರಮಾಸದಲ್ಲಿ 30 ತಿಥಿಗಳು. ಇಂತಹ 12 ಚಾಂದ್ರಮಾಸಗಳಿಂದ ಒಂದು ಚಾಂದ್ರವರ್ಷ. ಮೇಷ ಸಂಕ್ರಾಂತಿಯಿಂದ ಮೇಷಸಂಕ್ರಾಂತಿಗೆ ಹೇಗೆ ಒಂದು ಸೌರವರ್ಷವೋ ಹಾಗೆಯೇ ಚೈತ್ರಾದಿಯಿಂದ ಚೈತ್ರಾದಿಗೆ ಒಂದು ಚಾಂದ್ರವರ್ಷ. ಒಂದು ಚಾಂದ್ರವರ್ಷದಲ್ಲಿ 371 ಸೌರದಿನಗಳಿರುತ್ತವೆ. ಈ ಅಂತರವನ್ನು ಮೂರುವರ್ಷಗಳಿಗೊಮ್ಮೆ 'ಅಧಿಕಮಾಸ' ಎನ್ನುವುದಾಗಿ ಪರಿಗಣಿಸಿ ಚಾಂದ್ರಸೌರಾಂತರವನ್ನು ಸರಿಪಡಿಸುತ್ತಾರೆ. (ಚಾಂದ್ರಮಾಸ–ಸೌರಮಾಸ= ಅಧಿಕಮಾಸ)

ಈ ಚಂದ್ರನಿಗೆ ಕರ್ಕಾಟಕ ಸ್ವಕ್ಷೇತ್ರ. ವೃಷಭ ಉಚ್ಚರಾಶಿ. ವೃಶ್ಚಿಕ ನೀಚಸ್ಥಾನ. ವೃಷಭದ 10ನೇ ಅಂಶ ಪರಮೋಚ್ಚಾಂಶ. ವೃಶ್ಚಿಕದ 10ನೇ ಅಂಶ ಪರಮ ನೀಚಾಂಶ. ವೃಷಭದ ಮೊದಲ ಮೂರಂಶ ಉಚ್ಚ. ಉಳಿದ ಅಂಶಗಳು ಮೂಲ ತ್ರಿಕೋಣಾಂಶಗಳು.

ಈತನು ಪ್ರಕಾಶಗ್ರಹ. ಜಲಗೋಲವಾಗಿದ್ದು ಸೂರ್ಯ ರಶ್ಮಿ ಪ್ರತಿಫಲನದಿಂದ ಈತನ ಪ್ರಕಾಶ. ಬುಧ–ರವಿಗಳು ಮಿತ್ರರು. ಉಳಿದೆಲ್ಲರೂ ಇವನಿಗೆ ಸಮರು. ಚತುರ್ಥದಲ್ಲಿ ದಿಗ್ಬಲವಿದೆ.

ಕೃಷ್ಣಪಕ್ಷದ ಅಷ್ಟಮಿ ಪಿತೃಗಳಿಗೆ ಸೂರ್ಯೋದಯ. ಅಮಾವಾಸ್ಯೆ ಪಿತೃಗಳಿಗೆ ಮಧ್ಯಾಹ್ನ. ಶುಕ್ಲಪಕ್ಷದ ಅಷ್ಟಮಿ ಪಿತೃಗಳಿಗೆ ಸೂರ್ಯಾಸ್ತ. ಪೂರ್ಣಿಮಾ ಮಧ್ಯರಾತ್ರಿ. ಆದುದರಿಂದ ಅಮಾವಾಸ್ಯೆ ಮಧ್ಯಾಹ್ನವಾದ ಪ್ರಯುಕ್ತ ಆ ಕಾಲದ ಶ್ರಾದ್ಧ ದಾನಾದಿಗಳಿಂದ ಬಲು ಪುಣ್ಯಪ್ರಾಪ್ತಿ.

ಜಾತಕದಲ್ಲಿ ಲಗ್ನದಿಂದ 2,5,7,9,10,11ನೇ ಸಾನದಲ್ಲಿದ್ದರೆ ಶುಭ. ಚತುರ್ಥದಲ್ಲಿದ್ದರೆ ಮಾತೃಕ್ಲೇಶ. ಉಳಿದೆಲ್ಲವೂ ಅಶುಭ. 3,6,8,12 ಅತ್ಯಂತ ಅಶುಭಸ್ಥಾನ. ಈತನ ಸ್ಥಾನದಿಂದ ಗ್ರಹರಿರುವ ಸ್ಥಿತಿಯಿಂದ ಕೆಲವು ಪ್ರಮುಖ ಚಂದ್ರರಾಜಯೋಗಗಳು ಉಂಟಾಗುತ್ತವೆ. ಗಜಕೇಸರಿ, ಶಶಿಮಂಗಳಯೋಗ, ಅಧಿಯೋಗ, ಸುನಫಾ, ಅನಫಾ, ಅಮಲಾಯೋಗ, ವಸುಮಾನ್ ಯೋಗ ಇವುಗಳಲ್ಲಿ ಪ್ರಮುಖವಾದುವುಗಳು. ಹಾಗೆಯೇ ಕೇಮದ್ರುಮ, ಶಕಟ ಮೊದಲಾದ ಅರಿಷ್ಠ ಯೋಗಗಳೂ ಉಂಟಾಗುತ್ತವೆ.

ಈತನು ಶುಕ್ಲಪಕ್ಷದಲ್ಲಿ ಶುಭ, ಅರ್ಥಾತ್ ಶುಕ್ಲಪಕ್ಷದ ಪಂಚಮಿಯಿಂದ ಕೃಷ್ಣಪಕ್ಷದ ಪಂಚಮಿಯ ತನಕ ಶುಭ. ನಂತರ ಪಾಪಿಗ್ರಹನು. ಸೂರ್ಯನಿಂದ 11ಡಿಗ್ರಿ ಅಂತರದಲ್ಲಿರುವಾಗ ಅಸ್ತನಾಗುವನು. (ಕೃಷ್ಣಪಕ್ಷದ ಅಷ್ಟಮಿಯಿಂದ ಶುಕ್ಲಪಕ್ಷದ ಅಷ್ಟಮಿಯ ತನಕ ಅಶುಭ. ನಂತರ ಶುಭ ಎನ್ನುವ ಪಕ್ಷವೂ ಇದೆ) ಮುಹೂರ್ತದಲ್ಲಿ

ಹಸಿದವರಿಗೆ ಅನ್ನವನ್ನು ನೀಡಿ.



ಲಗ್ನದಲ್ಲಿ, ದಶಮ, ಏಕಾದಶದಲ್ಲಿದ್ದರೆ ಬಹುಶುಭ. ಚಂದ್ರಾಷ್ಟಮ ಬಹು ಅಶುಭ. ವಿವಾಹದ ಸಂಘಟನೆ ವಿಷಯದಲ್ಲೂ ವಧೂವರರ ಜಾತಕದ ಚಂದ್ರರು ದ್ವಿರ್ದ್ವಾದಶ ಷಷ್ಟಾಷ್ಟಮ, ನವಮ ಪಂಚಮದಲ್ಲಿರಬಾರದು. ಆಶ್ಲೇಷಾ, ಜ್ಯೇಷ್ಠಾ, ಮೂಲನಕ್ಷತ್ರದಲ್ಲಿರುವಾಗ ರಾಶಿ ಸಂಧಿಯಲ್ಲಿರುವಾಗ ಅನಿಷ್ಟಪ್ರದ,

ಈತನಿಗೆ ಸೋಮ, ಶೀತರಶ್ಮಿ, ಉಡುಪತಿ, ಮೃಗಾಂಗ, ಚಂದ್ರ , ಚಂದ್ರಮಾ, ಗ್ಲೌ, ನಿಶಾನಾಥ ಮೊದಲಾದ ಹೆಸರುಗಳಿವೆ. ಈತನು ರಾಜಗ್ರಹ, ರವಿರಾಜನಾದರೆ ಈತ ರಾಣಿ, ಈತನು ಯುವಕನೂ, ಸಿತಾಂಗನೂ ಆಗಿರುವನು. (ಬಿಳಿಯಾದ ಶರೀರ) ಶಿರಸ್ಸು ಮೊದಲಾಗಿ ಉದಯಿಸುವುದು. ಸರೀಸೃಪದ ಆಕಾರ. ಮೂಲಪದಾರ್ಥಗಳಿಗೆ ಕಾರಕನು. 70 ವರ್ಷ ವಯಸ್ಸು.

ಮಣಿ, ಮುತ್ತು, ಹಾಲು, ಶಂಖ, ಸಮುದ್ರವಸ್ತುಗಳು, ಬಟ್ಟೆ, ಕೊಂಬುಳ್ಳ ಪ್ರಾಣಿ, ಔಷಧಿ ಸಸ್ಯಗಳು, ಬಿಳಿ ಹೂ, ಬೆಲ್ಲ, ಪಲಾಶ ಸಮಿಧೆ, ಶೀತಜ್ವರ, ಮಂಜು, ತಂಪಾದನೀರು ಬೆಸ್ತರು, ಮೀನು, ಮೇಘ, ಹಾಲುಳ್ಳ ಮರಗಳು, (ಹಲಸು ಇತ್ಯಾದಿ) ದನ, ಮದ್ಯ, ಎಣ್ಣೆ, ಅನ್ನ, ಅಸವಗಳು, ಮಜ್ಜಿಗೆ ಇವನ ಕಾರಕತ್ವಕ್ಕೆ ಸಂಬಂಧಿಸಿದೆ.

ಲಕ್ಷ್ಮೀ, ದುರ್ಗೆ, ಮೊದಲಾದವರು ದೇವತೆಗಳು. ಚಾಮುಂಡಿ, ಯಕ್ಷಿ , ಮೊದಲಾದ ಸ್ತ್ರೀಶಕ್ತಿಗಳು ಈತನಿಂದ ಚಿಂತಿಸಲ್ಪಡುವ ಧರ್ಮದೈವಗಳು. ಬತ್ತ ಸೋಮಪಾನಿಗಳು, ವೈಶ್ಯರು, ಸುಂದರಸ್ತ್ರೀ, ಬಾಳೆ, ಇವನಿಗೆ ಸಂಬಂಧಿಸಿವೆ.

ಸಮುದ್ರ ಪ್ರದೇಶ, ನದಿಗಳು, ಸರೋವರಗಳು, ರೋಮಕ ಪ್ರದೇಶಗಳು. ಕಚ್ ಮರುಭೂಮಿ, ಹಿಮವತ್ ಪರ್ವತ, ಹಿಮಪ್ರದೇಶ, ದ್ವೀಪಗಳು, ಈತನ ಸಂಚಾರಪ್ರದೇಶಗಳು. ಸಮುದ್ರದ ಉಬ್ಬರ ಇಳಿತದಂತೆ ವೃದ್ಧಿಕ್ಷಯ ಈತನ ಸ್ವಭಾವ.

ಅಷ್ಟಮಿಯ ದಿವಸದ ಚಂದ್ರಬಿಂಬದ ಶೃಂಗೋನ್ನತಿಯಿಂದ ಮಾಸಿಕ 'ತೇಜಿಬಂಧಿ' (ಅರ್ಘ್ಯವೃದ್ಧಿ ಅರ್ಥಾತ್ ಪದಾರ್ಥಗಳ ಧಾರಣೆಯನ್ನು ಹೇಳುವರು.)

ಗೋಚರಫಲದಲ್ಲಿ ಚಂದ್ರಸ್ಥಾನವೇ ಮುಖ್ಯ. ಚಂದ್ರನಿಂದ ಗ್ರಹಸ್ಥಿತಿಯನ್ನು ನೋಡಿ ವಾರ್ಷಿಕರಾಶಿ ಫಲವನ್ನು ಹೇಳುವರು. ಗೋಚರದಲ್ಲಿ ರಾಶಿಯ ಅಂತ್ಯದ ಮೂರು ಘಳಿಗೆ ಫಲಕೊಡುವನು. 1,3,7, 11, ಗೋಚರದ ಶುಭಸ್ಥಾನಗಳು. ಸೋಮವಾರ ಶ್ರವಣನಕ್ಷತ್ರ ಅಮೃತಸಿದ್ಧಿಯೋಗ. ಸೋಮವಾರ ಉತ್ತರಾಭಾದ್ರಾ ನಕ್ಷತ್ರ ಮೃತ್ಯುಯೋಗ.

(45ನೇ ಪುಟದಲ್ಲಿ...)

ಬಾಯಾರಿದವರನ್ನು ನೀರಿನಿಂದ ತೃಪ್ತಿಗೊಳಿಸಿ.

ಪುಸ್ತಕ ಪರಿಚಯ

# ಅಣುಸುಧಾಸಾರ

-ಸಗ್ರಿ ರಾಘವೇಂದ್ರ ಉಪಾಧ್ಯಾಯ

ಶಾಸ್ತ್ರಗ್ರಂಥಗಳ ಅನುವಾದ, ಸಂಪಾದನ ರೂಪದ ವಾಙ್ಮಯ ಪ್ರಪಂಚವಷ್ಟೇ ಬೆಳೆಯುತ್ತಿರುವ ಇಂದಿನ ದಿನಗಳಲ್ಲಿ ಹೊಸ ಹೊಸ ಶಾಸ್ತ್ರೀಯ ಕೃತಿಗಳ ರಚನೆ ವಿರಳ. ಶ್ಲೋಕರೂಪದ ಕೃತಿಯ ರಚನೆಯಂತೂ ಇನ್ನೂ ವಿರಳ. ಇಂತಹ ಸಂದರ್ಭದಲ್ಲಿ ನೂತನವಾಗಿ ರೂಪುಗೊಂಡ 'ಅಣುಸುಧಾಸಾರ' ಶ್ಲೋಕರೂಪದ ಶಾಸ್ತ್ರೀಯ ಕೃತಿಯಾಗಿ ದ್ವೈತವಾಙ್ಮಯ ಪ್ರಪಂಚದಲ್ಲಿ ಉಲ್ಲೇಖಾರ್ಹ ಎನಿಸಬಲ್ಲದು.

ಮಧ್ವಗುರುಗಳ ಅನುವ್ಯಾಖ್ಯಾನಕ್ಕೆ ಟೀಕೆಯಾಗಿ ಹೊರಟ ಶ್ರೀಜಯತೀರ್ಥರ ಶ್ರೀಮನ್ನ್ಯಾಯಸುಧಾದ ಶೈಲಿಯನ್ನೂ ಅದರ ಹೆಚ್ಚಿನ ಪ್ರಮೇಯಗಳನ್ನೂ ತನ್ನಲ್ಲಿ ಅರಗಿಸಿಕೊಂಡು ಮೂಡಿ ಬಂದಿರುವ 'ವಿಷ್ಣುತತ್ತ್ವವಿನಿರ್ಣಯ'ವು ಅನ್ವರ್ಥಕವಾಗಿ ಅಣುಸುಧಾ ಎನಿಸಿದರೆ ಅಂತಹ ಅಣುಸುಧಾದ ಪ್ರಮೇಯಗಳನ್ನು ಟೀಕಾಟಿಪ್ಪಣಿಗಳ ಆಶಯದಿಂದ ಕೂಡಿಕೊಂಡು ಅನುಷ್ಟುಪ್ ಛಂದಸ್ಸಿನ ಶ್ಲೋಕಗಳಲ್ಲಿ ಸರಳವಾಗಿ ಪ್ರಸ್ತುತಪಡಿಸುತ್ತಿರುವ ಕೃತಿ 'ಅಣುಸುಧಾಸಾರ'.

ಸುಮಾರು ಏಳ್ನೂರು ಶ್ಲೋಕಗಳಲ್ಲಿ ಮೈತಳೆದು ಬಂದಿರುವ 'ಅಣುಸುಧಾಸಾರ' ದಲ್ಲಿ ಅನುಕ್ರಮವಾಗಿ ವಿಷ್ಣುತತ್ತ್ವವಿನಿರ್ಣಯದ ಪ್ರಮೇಯಗಳ ಸಂಗ್ರಹ ಅಲ್ಲಲ್ಲಿ ಉಪಶೀರ್ಷಿಕೆಯೊಂದಿಗೆ ನಡೆದಿರುವುದಲ್ಲದೆ, ಕೊನೆಯಲ್ಲಿ 'ಅಣುಸುಧಾಸಾರ ವಿಷಯ ಸಂಗ್ರಹ' ಎಂಬ ಶೀರ್ಷಿಕೆಯೊಂದಿಗೆ 53 ಶ್ಲೋಕಗಳ ವ್ಯಾಪ್ತಿಯಲ್ಲಿ ಸಮಗ್ರ ವಿಷ್ಣುತತ್ತ್ವವಿನಿರ್ಣಯದ ಅಣುಸುಧಾಸಾರದಲ್ಲಿ ಸಂಗ್ರಹಿಸಲ್ಪಟ್ಟಂತೆ ಅನುಕ್ರಮವಾಗಿ ವಿಷಯಗಳ ಯಾದಿಯನ್ನು ನೀಡಲಾಗಿದೆ.

## ಮೂರು ಮುಖಗಳ ಅಧ್ಯಯನ

ಹೀಗೆ 'ಅಣುಸುಧಾಸಾರ' ದ ಪ್ರಭಾವಳಿಯಲ್ಲಿ ವಿಷ್ಣುತತ್ತ್ವವಿನಿರ್ಣಯವನ್ನು ಮೆರೆಯಿಸಿದ ಡಾ । ಪಾರ್ಥಸಾರಥಿ ಪಂಚಮುಖಿ ಇವರು ಆಂಗ್ಲಭಾಷೆಯಲ್ಲಿ ಟೀಕಾ

ಭಗವದ್ಗೀತೆ-ವಿಷ್ಣುಸಹಸ್ರನಾಮ-ಕೃಷ್ಣಾಷ್ಟೋತ್ತರವನ್ನು ಎಂದಿಗೂ ಬಿಡಬೇಡಿ.



ಹಾಗೂ ರಾಘವೇಂದ್ರ ಗುರುಗಳ ಭಾವದೀಪ ಟಿಪ್ಪಣಿಗಳಿಂದ ಸಹಿತವಾದ ವಿಷ್ಣುತತ್ತ್ವವಿನಿರ್ಣಯದ ತಾತ್ಪರ್ಯವನ್ನು ಕ್ರೋಢೀಕರಿಸಿ ಅದರ ಮತ್ತೊಂದು ಬಗೆಯ ಅಧ್ಯಯನಕ್ಕೆ ಅನುಕೂಲತೆಯನ್ನು ಒದಗಿಸಿರುವರು. 160 ಪುಟಗಳ ವ್ಯಾಪ್ತಿಯಲ್ಲಿ ಈ ಅನುವಾದ ಕಾರ್ಯ ನಡೆದಿದೆ. ಮುಂದೆ 500 ಪುಟಗಳ ವ್ಯಾಪ್ತಿಯಲ್ಲಿ ವಿಷ್ಣುತತ್ತ್ವವಿನಿರ್ಣಯದ ಮೂಲ, ಟೀಕಾ ಹಾಗೂ ರಾಘವೇಂದ್ರ ಗುರುಗಳ ಭಾವದೀಪ ಟಿಪ್ಪಣಿ ಇವುಗಳು ಶುದ್ಧಪಾಠ ದೇವನಾಗರೀ ಲಿಪಿಯಲ್ಲಿ ನೀಡಲಾಗಿದೆ. ಪರಿಶಿಷ್ಟದಲ್ಲಿ ವಿಷ್ಣುತತ್ತ್ವವಿನಿರ್ಣಯ, ಟೀಕೆ ಹಾಗೂ ಭಾವದೀಪಗಳಲ್ಲಿ ಉದಾಹರಿಸಲ್ಪಟ್ಟ ಪ್ರಮಾಣಗಳನ್ನು ಅಕ್ಷರಾನುಕ್ರಮಕ್ಕನುಗುಣವಾಗಿ ಸಂಗ್ರಹಿಸಲಾಗಿದೆ. ವ್ಯಾಕರಣದ ಸೂತ್ರಗಳನ್ನು, ಲಕ್ಷಣ ಸೂಕ್ತಗಳನ್ನು ಕ್ರೋಡೀಕರಿಸಲಾಗಿದೆ. ಕೊನೆಯಲ್ಲಿ ಶಬ್ದಾನುಕ್ರಮಣಿಕೆಯನ್ನೂ ನೀಡಲಾಗಿದೆ. ಈ ರೀತಿಯಾಗಿ ವಿಷ್ಣುತತ್ತ್ವನಿರ್ಣಯವನ್ನು ಶ್ಲೋಕರೂಪದ ವಿವರಣೆಯ ಮೂಲಕ, ಆಂಗ್ಲಭಾಷೆಯ ತರ್ಜುಮೆಯ ಮೂಲಕ ಹಾಗೂ ಅಲ್ಲಿ ಬಂದ ಪ್ರಮಾಣಾದಿಗಳ ಸಂಗ್ರಹಣೆಯ ಮೂಲಕ ಹೀಗೆ ಮೂರು ಮುಖಗಳ ಅಧ್ಯಯನ ನಡೆಸಲು ಅನುಕೂಲವಾಗುವಂತೆ ವಿಷ್ಣುತತ್ತ್ವನಿರ್ಣಯದ ಮೇಲೆ ಸರ್ವತೋಮುಖವಾದ ಬೆಳಕು ಚೆಲ್ಲುವಂತೆ ಡಾ । ಪಾರ್ಥಸಾರಥಿ ಪಂಚಮುಖಿ ಇವರು ವಿದ್ವತ್ಪೂರ್ಣವಾಗಿ ಸಂಪಾದಿಸಿರುವ ಈ ಕೃತಿಯನ್ನು 180 ರೂ ಮೌಲ್ಯಕ್ಕೆ ಡಾ । ಪಿ.ಆರ್ ಪಂಚಮುಖೀ ಗುರುಕೃಪಾ ಗೌಳೀಗಲ್ಲೀ, ಮಾಳಮಡ್ಡಿ ಧಾರವಾಡ-2. ಈ ವಿಳಾಸದಿಂದ ಜಿಜ್ಞಾಸುಗಳು ಪಡೆದುಕೊಳ್ಳಬಹುದಾಗಿದೆ. ★

---

(5ನೇ ಪುಟದಿಂದ,...)

ಕರೆಯುತ್ತಾರೆ. ಈ ಅರ್ಥದಲ್ಲಿಯೂ ಆಚಾರ್ಯ ಎಂಬ ಬಿರುದು ಸಂಪೂರ್ಣವಾಗಿ ಶ್ರೀಮಧ್ವರಿಗೆ ಅನ್ವಯವಾಗುತ್ತದೆ.

ಅಂತಹ ಆಚಾರ್ಯ ಶ್ರೀಮಧ್ವರು ನನಗೆ ಪ್ರತಿ ಜನ್ಮದಲ್ಲಿಯೂ ಗುರುಗಳಾಗಿ ದೊರಕಲಿ ಎಂಬ ಪ್ರಾರ್ಥನೆಯೇ 'ಸಂತು ಮೇ ಜನ್ಮ ಜನ್ಮನಿ' ಎಂದು. ಸಕಲ ಜೀವರಾಶಿಗಳೊಳಗಿದ್ದು ಭಗವಂತನ ಅಣತಿಯಂತೆ ಸಕಲರನ್ನೂ ಪ್ರೇರೇಪಿಸುತ್ತಿರುವ 'ಗುರುಗಳು' ವಾಯುದೇವರೆಂಬುದು ಶಾಸ್ತ್ರಗಳ ಅಭಿಪ್ರಾಯ. ಆದರೆ ಈ ಎಚ್ಚರ ನಮಗೆ ಎಂದೆಂದಿಗೂ ಇರಲಿ ಎಂಬುದೇ ಈ ಪ್ರಾರ್ಥನೆಯೇ ರಹಸ್ಯ. ★

ಪ್ರಾಣಿಗಳಲ್ಲಿ ದಯೆವುಳ್ಳವರಾಗಿರಿ.

# ಉತ್ತರಗರ್ಭಿತ ಪ್ರಶ್ನೆ

– ವಿ ॥ ತಿರುಮಲ ಕುಲಕರ್ಣಿ, ಬೆಂಗಳೂರು

**ಪ್ರಹ್ಲಾದ–ಹಿರಣ್ಯಕಶಿಪು ಸಂವಾದ**

ಭಾಗವತದ ಅತ್ಯಂತ ರೋಚಕಘಟ್ಟಗಳಲ್ಲಿ ಸಪ್ತಮಸ್ಕಂಧದ ನರಸಿಂಹ–ಪ್ರಾದುರ್ಭಾವವೂ ಒಂದು. ತಂದೆ ಹಿರಣ್ಯಕಶಿಪು ಮಹಾಧರ್ಮದ್ವೇಷಿ ಭಗವದ್ವಿರೋಧಿ. ಮಗ ಪ್ರಹ್ಲಾದ ಪರಮ ಧರ್ಮನಿಷ್ಠ, ಭಕ್ತಾಗ್ರಣಿ. ಮಗನನ್ನು ತನ್ನ ದಾರಿಗೆ ತರಲು ಹಿರಣ್ಯಕಶಿಪು ಪ್ರಯೋಗಿಸಿದ ಸಾಮ–ದಾನ–ದಂಡ–ಬೇಧಗಳೆಲ್ಲವೂ ವಿಫಲವಾದ ಸಂದರ್ಭ. ತನ್ನ ಭೃತ್ಯರಿಂದ ಕೊಲ್ಲಿಸಲು ನಡೆಸಿದ ಎಲ್ಲ ಪ್ರಯತ್ನಗಳೂ ವ್ಯರ್ಥವಾದ ಹಿನ್ನೆಲೆಯಲ್ಲಿ ತಂದೆ ಮತ್ತು ಮಗನಿಗೆ ನಿರ್ಣಾಯಕವಾದ ಕೊನೆಯ ಸಂವಾದ ನಡೆಯುತ್ತದೆ.

ಈ ಘಟನೆಯಲ್ಲಿ ಹಿರಣ್ಯಕಶಿಪುವಿನ ಕೊನೆಯ ಮಾತುಗಳನ್ನು ಭಾಗವತ ಹೀಗೆ ಹೇಳಿದೆ.

**ಯಸ್ತ್ವಯಾ ಮಂದಭಾಗ್ಯೋಕ್ತೋ ಮದನ್ಯೋ ಜಗದೀಶ್ವರಃ ।**
**ಕ್ವಾಸೌ? ಯದಿ ಸ ಸರ್ವತ್ರ ಕಸ್ಮಾತ್ ಸ್ತಂಭೇ ನ ದೃಶ್ಯತೇ ॥** (ಭಾ. 7–8–13)

ಇದರ ಅರ್ಥ– ಹೇ ಭಾಗ್ಯಹೀನ ಪ್ರಹ್ಲಾದ, ನನ್ನ ಹೊರತಾಗಿ ಮತ್ತೊಬ್ಬ ಜಗದೊಡೆಯ ಇರುವ ಎಂದೆ ಅಲ್ಲವೆ. ಅವನೆಲ್ಲಿದ್ದಾನೆ? ಎಲ್ಲೆಡೆ ಇರುವುದಾದರೆ ಕಂಭದಲ್ಲೇಕೆ ಕಾಣುವುದಿಲ್ಲ?

ಈ ಶ್ಲೋಕದ ಉತ್ತರಾರ್ಧದಲ್ಲಿ ಎರಡು ಮೂರು ಪ್ರಶ್ನೆಗಳು ಮಧ್ಯದಲ್ಲಿ ಪ್ರಹ್ಲಾದನ ಮಾತಿಲ್ಲದೆ ಹಿರಣ್ಯಕಶಿಪುವಿನ ಮುಖದಿಂದ ಬಂದಂತೆ ಕಾಣುತ್ತವೆ. ಆದರೆ ಸ್ವಲ್ಪ ಸೂಕ್ಷ್ಮವಾಗಿ ಗಮನಿಸಿದರೆ ಇಲ್ಲಿ ಒಂದು ಅನುಪಪತ್ತಿ ಕಂಡೀತು. 'ಅವನೆಲ್ಲಿ?' ಎಂದು ಹಿರಣ್ಯಕಶಿಪುವಿನ ಪ್ರಶ್ನೆಗೆ ಉತ್ತರವೇ ಇಲ್ಲ. 'ಎಲ್ಲೆಡೆ ಇರುವುದಾದರೆ ಕಂಭದಲ್ಲೇಕೆ ಕಾಣುವುದಿಲ್ಲ?'ಎಂಬ ಪ್ರಶ್ನೆಗಂತೂ ಅವಕಾಶವೇ ಇಲ್ಲ. ಏಕೆಂದರೆ ಈ ಪ್ರಶ್ನೆ ಹುಟ್ಟುವಂಥ



ಯಾವ ಮಾತನ್ನೂ ಪ್ರಹ್ಲಾದ ಆಡಿಲ್ಲ. ಸ್ವಾರಸ್ಯವೆಂದರೆ ಈ ಯಾವ ಪ್ರಶ್ನೆಗೂ ಪ್ರಹ್ಲಾದ ಉತ್ತರ ನೀಡಿಯೇ ಇಲ್ಲ.

ಈ ಸಮಸ್ಯೆಯನ್ನು ಶ್ರೀಸತ್ಯಧರ್ಮತೀರ್ಥರು ತಮ್ಮ ಟಿಪ್ಪಣಿಯಲ್ಲಿ ಹೀಗೆ ಪರಿಹರಿಸಿದ್ದಾರೆ. ಈ ಶ್ಲೋಕ ಬರಿಯ ಹಿರಣ್ಯಕಶಿಪುವಿನ ಮಾತನ್ನು ದಾಖಲಿಸುತ್ತಿಲ್ಲ. ಮಧ್ಯದಲ್ಲಿ ಪ್ರಹ್ಲಾದನಾಡಿದ ಮಾತುಗಳನ್ನು ಇಟ್ಟುಕೊಂಡಿದೆ. ಆದ್ದರಿಂದ, ಈ ಶ್ಲೋಕದಲ್ಲಿ ಮಧ್ಯ ಮಧ್ಯದಲ್ಲಿ ಪ್ರಹ್ಲಾದನ ಮಾತುಗಳನ್ನು ಸೇರಿಸಿದಾಗ ಅವರ ಸಂಭಾಷಣೆ ಹೀಗಾಗುತ್ತದೆ.

ಹಿರಣ್ಯಕಶಿಪು– **ಕ್ವಾಸೌ?** (ನೀನು ಹೇಳುವ ಆ ಜಗದೀಶ್ವರನು ಎಲ್ಲಿ?)
ಪ್ರಹ್ಲಾದ– **ಸಃ ಸರ್ವತ್ರ** (ಅವನು ಎಲ್ಲೆಡೆ ಇದ್ದಾನೆ.)
ಹಿರಣ್ಯಕಶಿಪು– **ಯದಿ ಸರ್ವತ್ರ ತರ್ಹಿ ಕಸ್ಮಾತ್ ಸ್ತಂಭೇ ನ?** (ಎಲ್ಲೆಡೆ ಇರುವುದಾದರೆ ಕಂಭದಲ್ಲಿ ಏಕಿಲ್ಲ?)
ಪ್ರಹ್ಲಾದ– **ದೃಶ್ಯತೇ** (ಇದ್ದಾನೆ, ಕಾಣುತ್ತಾನೆ.)

ಹೀಗೆ ಹೇಳಿದ್ದಕ್ಕೆ ಪ್ರತಿಯಾಗಿ ಮುಂದಿನ ಶ್ಲೋಕದಲ್ಲಿ ಹಿರಣ್ಯಕಶಿಪುವು ಹೇಳುವುದು **'ಗೋಪಾಯೇತ ಹರಿಸ್ತ್ವಾದ್ಯ ಯಸ್ತೇ ಶರಣಮೀಪ್ಸಿತಃ'** (ಎಲ್ಲೆಡೆ, ಕಂಭದಲ್ಲಿ ಇದ್ದಾನೆಂದು ಹೇಳಿದ) ರಕ್ಷಕ ಎಂದು ನೀನು ಬಯಸಿದ ಆ ಹರಿ ನಿನ್ನನ್ನು ರಕ್ಷಿಸಲಿ ನೋಡೋಣ ಎನ್ನುತ್ತಾ ಖಡ್ಗ ಎತ್ತಿ ಹೋದ ಎಂದು ಭಾಗವತ ಕಥೆಯನ್ನು ಮುಂದುವರಿಸುತ್ತದೆ.

ಹೀಗೆ, ಶಾಸ್ತ್ರಗಳಲ್ಲಿ ಒಬ್ಬನ ಮಾತು ಎಂದು ಕಂಡ ವಾಕ್ಯಗಳನ್ನು ಯಥೋಚಿತವಾಗಿ ವಿಭಾಗ ಮಾಡಿ, ಪದಗಳನ್ನು ಆವೃತ್ತಿ ಮಾಡಿಕೊಂಡಾಗ ಅರ್ಥ ಸ್ವಾರಸ್ಯವಾಗುತ್ತದೆ ಎಂದು ಶ್ರೀಸತ್ಯಧರ್ಮರು ತಿಳಿಸುತ್ತಾರೆ.

## ಉಪನಿಷತ್ತಿನ ದೃಷ್ಟಾಂತ

ಈ ಕ್ರಮದಲ್ಲಿ ವ್ಯಾಖ್ಯಾನ ಮಾಡಿದ ಅನೇಕ ದೃಷ್ಟಾಂತಗಳಿವೆ ಎನ್ನುತ್ತಾ ಅವರು ಛಾಂದೋಗ್ಯದ 'ತತ್ತ್ವಮಸಿ' ಶ್ರುತಿ ಭಾಗದ ಉದಾಹರಣೆ ನೀಡುತ್ತಾರೆ. ಅಲ್ಲಿ ತಂದೆ ಮಗನಿಗೆ 'ಭಗವತ್ತತ್ತ್ವ ನಮಗೆ ತಿಳಿಯದಂತೆ ಎಲ್ಲೆಡೆ ವ್ಯಾಪಿಸಿದೆ' ಎಂದು ತಿಳಿಸಲು ನೀರಿನಲ್ಲಿ ಉಪ್ಪನ್ನು ಹಾಕಿಡು ಎಂದು ರಾತ್ರಿ ಹೇಳಿದರು. ಬೆಳಿಗ್ಗೆ ಉಪ್ಪೆಲ್ಲಿ ಎಂದರು. ನೋಡಿದ ಮಗ ತಿಳಿಯದಾದ , ಆಗ ತಂದೆ ಅದರ ಒಂದು ಭಾಗವನ್ನು ಕುಡಿ ಎಂದರು. ಹೇಗಿದೆ ಎಂದು

ಕೇಳಿದರು. ಉಪ್ಪಾಗಿದೆ ಎಂದು ಮಗ ಅಂದ. ಹೀಗೆ ಅವರ ಸಂವಾದ ಸಾಗುತ್ತದೆ..

ಇಲ್ಲಿ ಉಪನಿಷತ್ತಿನ ವಾಕ್ಯಗಳು ಹೀಗಿವೆ.

**ಯದ್ ದೋಷಾ ಲವಣಮೇತದುದಕೇಽವಧಾ ಅಂಗ ತದಾಹರೇತಿ । ತದ್ಧಾವಮೃಶ್ಯ ನ ವಿವೇದ । ಯಥಾ ವಿಲೀನಮೇವಾಂಗಾಸ್ಯಾಂತಾದಾಚಾಮೇತಿ । ಕಥಮಿತಿ । ಲವಣಮಿತಿ ।...’** ಈ ಭಾಗವನ್ನು ವ್ಯಾಖ್ಯಾನಿಸುವಾಗ ತತ್ವನಿರ್ಣಯಗಳಲ್ಲಿ **ಕಥಮಿತಿ ಪಿತಾ । ಲವಣಮಿತಿ ಪುತ್ರಃ’** ಎಂದೆಲ್ಲ ಸಂಬಂಧಪಟ್ಟವರ ಮಾತುಗಳಿವು ಎಂದು ಸ್ಪಷ್ಟ ಮಾಡಿಸುವಂತೆ ವ್ಯಾಖ್ಯಾನಿಸಿದ್ದಾರೆ. ಇದು ಇಂಥ ವ್ಯಾಖ್ಯಾನಕ್ಕೆ ಗಮಕ ಎಂದು ಶ್ರೀಸತ್ಯಧರ್ಮತೀರ್ಥರು ತಿಳಿಸುತ್ತಾರೆ.

## ಇತರೆಡೆ ಅನ್ವಯ

ಶಾಸ್ತ್ರಗಳಲ್ಲಿ ಈ ಕ್ರಮ ಇದೆ ಎಂದು ಒಂದೆಡೆ ತೋರಿಸಿದ ಮೇಲೆ ಬೇರೆ ಸ್ಥಳಗಳಲ್ಲಿ ಅವಕಾಶ ಇದ್ದಾಗ ಬಳಸಬಹುದು ಎಂದು ತಿಳಿಯಬಹುದು. ಉದಾಹರಣೆಗೆ, ಭಾಗವತದ ಆರಂಭದಲ್ಲಿ ಶೌನಕರು ಸೂತರನ್ನು ಕುರಿತು ಕೇಳುವ ಪ್ರಶ್ನೆಗಳಲ್ಲಿ ಈ ಪ್ರಶ್ನೆಗಳಿವೆ (ಮಧ್ಯದಲ್ಲಿನ ಕೆಲವು ಪ್ರಶ್ನೆಗಳನ್ನು ಬಿಟ್ಟಿದೆ)

ಶುಕಾಚಾರ್ಯರು ಹೇಳಿದ ಪುಣ್ಯಪ್ರದ ಭಾಗವತ ಕಥೆಯನ್ನು ನಮಗೆ ಹೇಳಿ. ಈ ಕಥೆ ಯಾವ ಯುಗದಲ್ಲಿ ಯಾವ ಸ್ಥಳದಲ್ಲಿ ಯಾವ ಕಾರಣದಿಂದ ಪ್ರವೃತ್ತಿವಾಯಿತು?...ನಿಗೂಢಪ್ರವೃತ್ತಿಯ ಮೂಢರಂತೆ ಕಾಣುವ ಶುಕಾಚಾರ್ಯರು ಕುರು–ಜಾಂಗಲಕ್ಕೆ ಬಂದಾಗ ಅವರನ್ನು ಪಟ್ಟಣಿಗರು ಹೇಗೆ ಗುರುತಿಸಿದರು? ......ಅವರಿಗೂ ರಾಜರ್ಷಿ ಪರೀಕ್ಷಿತನಿಗೂ ಸಂವಾದ ಹೇಗೆ ನಡೆಯಿತು? ಈ ಸಂವಾದದಲ್ಲಿ ತಾನೆ ಭಾಗವತ (ಸಾತ್ವತಶ್ರುತಿ) ಮೂಡಿ ಬಂದದ್ದು

ಈ ಪ್ರಶ್ನಾವಲಿಯಲ್ಲೂ ವಿರೋಧ ಕಾಣುವ ಪ್ರಶ್ನೆಗಳನ್ನು ಕಾಣಬಹುದು. ಯಾವ ಯುಗದಲ್ಲಿ? ಎಂದು ಮೊದಲು ಕೇಳಿ ಶುಕ–ಪರೀಕ್ಷಿತರ ಕಾಲದಲ್ಲಿ ಮೂಡಿ ಬಂದದ್ದಾಗಿ ಅನಂತರ ಹೇಳಿದೆ. ‘ಯಾವ ಕಾರಣದಿಂದ ಪ್ರವೃತ್ತಿವಾಯಿತು?’ ಎಂದು ಆರಂಭದಲ್ಲಿ ಕೇಳಿ ಶುಕ–ಪರೀಕ್ಷಿತರ ಸಂವಾದ ರೂಪದಲ್ಲಿ ರೂಪುಗೊಂಡಿತು ಎಂದು ಹೇಳಲಾಗಿದೆ. ಆದ್ದರಿಂದ, ಇಂಥಲ್ಲೂ ಮಧ್ಯದಲ್ಲಿ ಸಂಕ್ಷಿಪ್ತವಾದ ಉತ್ತರಗಳನ್ನು ಇಟ್ಟುಕೊಂಡು ಈ ಪ್ರಶ್ನಾವಲಿಯನ್ನು ಹೊಂದಿಸಬೇಕು ಎಂದು ಕಾಣುತ್ತದೆ. ★

**ನಿಜವಾದ ಮರ್ಮವನ್ನರಿಯದ ಮೂರ್ಖರನ್ನು ಎಂದಿಗೂ ಗುರುವೆಂದು ನಂಬದಿರಿ.**



# ಯತಿಗಳ ವಿದೇಶಗಮನ ಹೇಗೆ ತಾನೇ ಅಭಿನಂದನಾರ್ಹ?

–ಸಗ್ರಿ ರಾಘವೇಂದ್ರ ಉಪಾಧ್ಯಾಯ

ವಿದೇಶಗಮನ ನಡೆಸಿದ ಯತಿಗಳಿಗೆ ಸರ್ವಜ್ಞಪೀಠಾರೋಹಣ ಹಾಗೂ ಶ್ರೀಕೃಷ್ಣಪೂಜಾ–ಇವುಗಳಲ್ಲಿ ಅಧಿಕಾರ ಇದೆಯೋ ಇಲ್ಲವೋ ಎಂಬ ಚರ್ಚೆ ನಡೆಯುತ್ತಿರುವಾಗ, ವಿದೇಶಕ್ಕೆ ಹೋಗಿ ಅಲ್ಲಿ ಹಿಂದೂಮತದ ಮಾಧ್ವಸಿದ್ಧಾಂತದ ಪ್ರಚಾರ ನಡೆಸಿರುವುದರ ಬಗ್ಗೆ ನಮಗೆ ಸಂತೋಷ ಇದ್ದೇ ಇದೆ ಎಂಬ ಮಾತನ್ನು ಸೇರಿಸಲಾಗುವುದು. ಆದರೆ ಈ ಮಾತಿನ ಹಿನ್ನೆಲೆಯಲ್ಲೂ ವಿಚಾರಮಾಡಬೇಕಾದದ್ದು ಬಹಳಷ್ಟಿದೆ. ವಿದೇಶಕ್ಕೆ ಹೋಗಿ ಅಲ್ಲಿ ಹಿಂದೂ ಮತವನ್ನು, ಮಾಧ್ವಸಿದ್ಧಾಂತವನ್ನು ಎಷ್ಟು ಪ್ರಚಾರ ಮಾಡಲಾಗಿದೆ? ಎಂಬುದು ಒಂದು ಅಂಶವಾದರೆ, ಅಂತಹ ಪ್ರಚಾರಕ್ಕಾಗಿ ಯತಿಧರ್ಮದ ಮೂಲಭೂತಗಳಾದ ಎಷ್ಟು ಅಂಶಗಳನ್ನು ಗಾಳಿಗೆ ತೂರಲಾಗಿದೆ? ಎಂಬುದು ಮತ್ತೊಂದು ಅಂಶ. ವಿದೇಶಕ್ಕೆ ಹೋಗಿ ಅಲ್ಲಿಯ ಯಾವುದೋ ಒಂದು ಸಮಾರಂಭದಲ್ಲಿ ಪಾಲ್ಗೊಂಡಾಕ್ಷಣ ಹಿಂದೂಮತದ ಭಾರೀ ಉದ್ಧಾರ ನಡೆಯುವುದೇ? ಅಲ್ಲಿ ನೆಲೆಸಿರುವ ಮಾಧ್ವರ ಸಂಘಟನೆಯ ಯಾವುದೋ ಚಟುವಟಿಕೆಯಲ್ಲಿ ಭಾಗವಹಿಸಿದ್ದರಿಂದ ಅಲ್ಲಿಯ ಮಾಧ್ವರಲ್ಲಿ ಮಾಧ್ವಪ್ರಜ್ಞೆಯಾಗಲೀ ಮಾಧ್ವಶ್ರದ್ಧೆಯಾಗಲೀ ಅಧಿಕವಾಗಲು ಸಾಧ್ಯವೇ? ಹಾಗೇನಾದರೂ ಅಧಿಕ ವಿಶ್ವಾಸ ಮೂಡುವುದೆಂದು ಇಟ್ಟುಕೊಂಡರೂ ಅದನ್ನು ಇಲ್ಲಿ ಇದ್ದುಕೊಂಡೇ ಅವರಿಗೆ ಸಂದೇಶಾದಿಗಳನ್ನು ಕಳುಹಿಸಿಕೊಡುವ ಮೂಲಕ ಅವರ ಬಗ್ಗೆ ಆತ್ಮೀಯತೆಯನ್ನು ತೋರಿಸಲಾಗದೇ? ಕಂಪ್ಯೂಟರ್ ಯುಗದ ಇಂದಿನ ದಿನಗಳಲ್ಲಿ ಯಂತ್ರದ ಮೂಲಕ ಇಲ್ಲಿದ್ದುಕೊಂಡೇ ವಿದೇಶಗಳಿಗೆ ಸಂಬಂಧಿಸಿದಂತೆ ಬೇರೆ ಬೇರೆ ಚಟುವಟಿಕೆಗಳನ್ನೂ ನಡೆಸಲಾಗದೇ? ತಮ್ಮ ಪ್ರತಿನಿಧಿಯನ್ನು ಕಳುಹಿಸುವ ಮೂಲಕವೂ ಆ ಸಾಧನೆಯನ್ನು ನಿರ್ವಹಿಸಬಹುದು ತಾನೆ?

ಅಲ್ಲದೆ ಹಿಂದೂ ಮತದ, ಮಾಧ್ವಸಿದ್ಧಾಂತದ ಪ್ರಚಾರ ಅಂತಾರಾಷ್ಟ್ರೀಯ ಮಟ್ಟದಲ್ಲಿ ನಡೆಸಬೇಕೆನ್ನುವಾಗ, ಅದು ರಾಷ್ಟ್ರೀಯಮಟ್ಟದಲ್ಲಿ ಎಷ್ಟರಮಟ್ಟಿಗೆ ನಡೆದಿದೆ

**ಜೀವನವೇ ಭಗವಂತನ ಪೂಜಾರೂಪವಾದ ಯಜ್ಞವಾಗಲಿ.**

ಎಂಬುದನ್ನು ಯೋಚಿಸಬೇಕಾದದ್ದು. ನಮ್ಮ ದೇಶದಲ್ಲೇ ಹಳ್ಳಿ ಹಳ್ಳಿಗಳಲ್ಲಿ ಮತಾಂತರ ಇತ್ಯಾದಿ ಪಿಡುಗುಗಳಿಂದ ಬಳಲುತ್ತಿರುವ ಹಿಂದೂಮತದ ಚೇತರಿಕೆ ನಡೆಯಬೇಕಾದಾಗ, ಮಧ್ವಾಚಾರ್ಯ ಎಂಬ ಹೆಸರೇ ಕೇಳದ ಉತ್ತರಭಾರತ ಮುಂತಾದ ಕಡೆಗಳಲ್ಲಿ ಮಾಧ್ವಸಿದ್ಧಾಂತದ ಸೌರಭವನ್ನು ಹರಡಿಸುವ ಅವಶ್ಯಕತೆ ಇರುವಾಗ ಇದನ್ನು ಬಿಟ್ಟು ಅಂತಾರಾಷ್ಟ್ರೀಯ ಮಟ್ಟದ ಪ್ರಚಾರಕ್ಕಾಗಿ ದೌಡಾಯಿಸುವುದು ಅದೆಷ್ಟು ಸಮಂಜಸ?

ಬೇಡ, ಉತ್ತರಭಾರತದ ಸುದ್ದಿ ಬಿಟ್ಟು ಬಿಡೋಣ. ಇಲ್ಲಿಯ ತಮ್ಮ ಕ್ಷೇತ್ರಕ್ಕೆ ಸಂಬಂಧಿಸಿದಂತೆಯೇ ತತ್ವಪ್ರಚಾರಾದಿಗಳಿಗೆ ಎಷ್ಟು ಗಮನ ಹರಿಸಲಾಗಿದೆ? ಶ್ರೀಪುತ್ತಿಗೆ ಶ್ರೀಗಳವರಿಗೆ ಸಂಬಂಧಿಸಿಯೇ ಹೇಳುವುದಾದರೆ ಅವರ ಕಳೆದ ಪರ್ಯಾಯಾವಧಿಯಲ್ಲಿ ಅಂತಾರಾಷ್ಟ್ರೀಯ ಮಟ್ಟದ 'ಗೀತಾಕೇಂದ್ರ'ವಾಗಿ ವಿರಾಜಿಸುವಂತಾಗಬೇಕೆಂದು ನಿರ್ಮಾಣ ಮಾಡಿರುವ 'ಗೀತಾಮಂದಿರ' ಯಾವ ದುಃಸ್ಥಿತಿಯಲ್ಲಿದೆ? ಅವರ ನೇತೃತ್ವದ ಪುತ್ತಿಗೆ ವಿದ್ಯಾಪೀಠಕ್ಕೆ ವಿಶ್ವವಿದ್ಯಾಲಯದ ವರ್ಚಸ್ಸನ್ನು ತುಂಬಬಹುದು ತಾನೇ? ಉತ್ತಮ ಬರವಣಿಗೆ ಶೈಲಿಯನ್ನೊಳಗೊಂಡ ಅವರಿಂದ ಸಿದ್ಧಾಂತದ ಬಗ್ಗೆ ಕೃತಿಗಳ ರಚನೆ ನಡೆಯಬಹುದು ತಾನೆ?

ಹೀಗೆ ಯತಿಗಳಿಗೆ ಅನಿವಾರ್ಯ ಎನಿಸದ ಪ್ರಚಾರಕಾರ್ಯದ ಹೆಸರಲ್ಲಿ ನಡೆಯಬಹುದಾದ ಯತಿಧರ್ಮದ ಸ್ಖಾಲಿತ್ಯದ ಬಗ್ಗೆ ಗಮನ ಹರಿಸಬೇಕು.

ಶಾಸ್ತ್ರದಲ್ಲಿ ವ್ಯಾಪಕವಾಗಿ ನಡೆಸಲಾದ ವಿದೇಶಗಮನವಿಷಯಕವಾದ ನಿಷೇಧದ ಉಲ್ಲಂಘನೆಯ ಜೊತೆಗೆ ಯತಿಗಳ ದೈನಂದಿನ ಚಟುವಟಿಕೆಗಳಲ್ಲಿ ವಿಹಿತಗಳಾದ ಸೂಕ್ಷ್ಮವಿಧಿನಿಷೇಧಗಳ ಅತಿಕ್ರಮಣ ಅದೆಷ್ಟು ನಡೆಯಲಿಕ್ಕಿಲ್ಲ?
ಉದಾಹರಣೆಗೆ ದೀರ್ಘಾವಧಿಯ ವಿಮಾನಯಾತ್ರೆಯಲ್ಲಿ ಮಲಮೂತ್ರವಿಸರ್ಜನೆಗೆ ಸಂಬಂಧಿಸಿದ ಮೃತ್ತಿಕಾಶೌಚಾದಿಗಳಿಗೆ ಎಡೆ ಇದ್ದೀತೇ? ಅಧಾರ್ಮಿಕವಾದ, ಅಶುದ್ಧವಾದ ರೀತಿಯಿಂದ ಮಲಮೂತ್ರ ವಿಸರ್ಜನೆ, ಶುದ್ಧೀಕರಣದ ವ್ಯವಸ್ಥೆಯನ್ನು ಗಮನಿಸಿದಾಗ ಉಳಿದ ವ್ಯವಸ್ಥೆಯನ್ನು ನಿರೀಕ್ಷಿಸಲಾದೀತೆ? ವಿದೇಶಕ್ಕೆ ಹೋದ ಮೇಲೂ ವರ್ಣಾಶ್ರಮಧರ್ಮ, ರಜಸ್ವಲಾಧರ್ಮ, ಮಡಿಮೈಲಿಗೆ ವ್ಯವಸ್ಥೇ ಇತ್ಯಾದಿಗಳಿಗೆ ಅಷ್ಟೊಂದು ಪ್ರಾಶಸ್ತ್ಯ ಇಲ್ಲದ ಅಲ್ಲಿ ಯತಿಗಳ ಧರ್ಮಾಚರಣೆಗೆ ಎಷ್ಟು ಸೌಲಭ್ಯ ದೊರಕೀತು?

**ಎಲ್ಲ ಕಷ್ಟಗಳಿಗೆ ದಿವ್ಯೌಷಧವಾದ ಶ್ರೀಕೃಷ್ಣಾಯ ನಮಃ ಎಂಬ ನಾಮವನ್ನು ಪ್ರತಿದಿನ ನೆನೆಯಿರಿ**



ಇದಕ್ಕೆ ವಿರುದ್ಧವಾಗಿ, ಆಧುನಿಕತೆಯಲ್ಲಿ ತುತ್ತತುದಿಗೆ ಏರಿರುವ ಅಲ್ಲಿಯ ನಾಗರಿಕತೆಯ ವಾತಾವರಣ ಯತಿಗಳ ಇಂದ್ರಿಯನಿಗ್ರಹಕ್ಕೆ ಮಾರಕವಾಗದೇ? **'ಬಲವಾನ್ ಇಂದ್ರಿಯಗ್ರಾಮೋ ವಿದ್ವಾಂಸಮಪಿ ಕರ್ಷತಿ'** ಅಲ್ಲವೆ? ಆಧ್ಯಾತ್ಮಿಕ, ಧಾರ್ಮಿಕ ವಾತಾವರಣವುಳ್ಳ ನಮ್ಮ ದೇಶಕ್ಕಿಂತ ಅಲ್ಲಿ ಮಾನಸಿಕವಾಗಿ ಕೆಡುವುದಕ್ಕೆ ಹೆಚ್ಚು ಅವಕಾಶ ತಾನೆ?

ಇನ್ನೂ ಗಮನಾರ್ಹಸಂಗತಿ ಎಂದರೆ ಮಾಧ್ವಸಂಪ್ರದಾಯದ ಯತಿಗಳಿಗೆ ದೊಡ್ಡ ಆಸ್ತಿ ಎಂದರೆ ಆಯಾಮಠದ ಪರಂಪರೆಯಿಂದ ಬಂದ ಶ್ರೀಮಧ್ವಕರಾರ್ಚಿತ ಪ್ರತಿಮೆ. ಯತಿಗಳು ಆ ಪ್ರತಿಮೆಯ ಆರಾಧನೆಯನ್ನು ತಮ್ಮ ಎಲ್ಲ ಆಧ್ಯಾತ್ಮಿಕ, ಧಾರ್ಮಿಕ ಚಟುವಟಿಕೆಗಳ ಕೇಂದ್ರ ಬಿಂದುವನ್ನಾಗಿ ಇಟ್ಟುಕೊಂಡು ಅದರ ಸ್ಫೂರ್ತಿಯನ್ನು ಉಳಿದ ಚಟುವಟಿಕೆಯ ನಿರ್ವಹಣೆಗೆ ಅಳವಡಿಸಿಕೊಳ್ಳಬೇಕಾದದ್ದು. ಆದರೆ ವಿದೇಶಗಮನದ ಸಂದರ್ಭದಲ್ಲಿ ಆ ಪ್ರತಿಮೆಯನ್ನು ಬೇರೆ ಎಲ್ಲೋ ಇಟ್ಟುಹೋಗಬೇಕಾದ ದುಃಸ್ಥಿತಿ ಒದಗುವುದು. ಮಧ್ವಕರಾರ್ಚಿತ ಪ್ರತಿಮೆಯ ಒಂದೊಂದು ದಿನದ ಆರಾಧನೆಯೂ ಮಹಾಸೌಭಾಗ್ಯ ಎಂದು ಪರಿಗಣಿಸಬೇಕಾಗಿರುವಾಗ ಅಂತಹ ಮಹಾಸೌಭಾಗ್ಯದಿಂದ ತಿಂಗಳುಗಟ್ಟಲೆ ವಂಚಿತರಾಗಬೇಕಾದ ದೌರ್ಭಾಗ್ಯವನ್ನು ಅನುಭವಿಸಬೇಕಾಗುವುದು. ಈ ಪ್ರತಿಮಯ ಪ್ರತಿನಿಧಿಯಾಗಿ ಕೊಂಡೊಯ್ಯಲಾಗುವ ಪ್ರತಿಮೆಯನ್ನೋ ಸಾಲಿಗ್ರಾಮವನ್ನೋ ವಿಮಾನದ ಸರಕು ತುಂಬಿಸುವ ಗೋಡೌನಲ್ಲಿ ತುರುಕಿಸುವ ಅನಿವಾರ್ಯತೆ !

ಹೀಗೆ ಯತಿಗಳ ವಿದೇಶಗಮನದಿಂದ ಮತಪ್ರಚಾರದ, ಸಿದ್ಧಾಂತ ಪ್ರಚಾರದ ಒಳ್ಳೆಯ ಕೆಲಸ ನಡೆಯುವುದೆಂದು ಇಟ್ಟುಕೊಂಡರೂ ಅದಕ್ಕಾಗಿ ಯತಿಗಳ ಮೂಲವ್ಯಕ್ತಿತ್ವಕ್ಕೆ ಧಕ್ಕೆ ತರುವ ಹತ್ತಾರು ಅಶಾಸ್ತ್ರೀಯ ಚಟುವಟಿಕೆಗಳ ಅನಿವಾರ್ಯತೆ ಇರುವುದರಿಂದ ವೈದಿಕ ಸಂಸ್ಕೃತಿಯ ಯತಿಗಳ ಪಾಲಿಗೆ ವಿದೇಶಗಮನವನ್ನು ಸರ್ವಜ್ಞಪೀಠಾರೋಹಣ ಹಾಗೂ ಶ್ರೀಕೃಷ್ಣ ಪೂಜೆ ಇವುಗಳಿಗಷ್ಟೆ ಸಂಬಂಧಿಸಿ ನಿಷೇಧಿಸುವುದಲ್ಲದೆ, ವೈದಿಕಸಂಸ್ಕೃತಿಯ, ಮಾಧ್ವಸಂಪ್ರದಾಯದ ಯತಿಗಳೇನಿಸಬೇಕಾದರೆ ಅವರು ವಿದೇಶಗಮನ ನಡೆಸಬಾರದೆಂದೇ ನಿಷೇಧಿಸಬೇಕಾಗಿ ಕಳಕಳಿಯ ವಿನಂತಿ.

★

**ಮಧ್ವಮತದ ಸಿದ್ಧಾಂತದ ಪದ್ಧತಿ ಬಿಡಬೇಡಿ.**

(36ನೇ ಪುಟದಿಂದ.....)

ನೂತನ ವಸ್ತ್ರಕ್ಕೆ ಈತನು ಕಾರಕನು. ವರ್ಷಋತು ಇವನಿಗೆ ಸಂಬಂಧಿಸಿದೆ. ಕೈಯಲ್ಲಿ ಮಣಿಗಂಟಿನ ಮೇಲ್ಭಾಗದಲ್ಲಿ ಕನಿಷ್ಠಿಕಾ ಬೆರಳಿನ ಕೆಳಗೆ ಚಂದ್ರಪರ್ವವಿದೆ.

ಕ್ಷಯ, ಅತಿಸಾರ, ವಾಂತಿ, ಉನ್ಮಾದ, ರಾಜಯಕ್ಷ್ಮ, ಶೀತಜ್ವರ, ನ್ಯುಮೋನಿಯಾ, ಮೂತ್ರಪೀಡೆ, ಸ್ತ್ರೀಯರಿಂದ ವಿರೋಧ, ಕೋಡುಗಳಿರುವ ಪ್ರಾಣಿಗಳಿಂದ, ಜಲಜಂತುಗಳಿಂದ ಉಪದ್ರವ. ಜಲ ಪತನಭೀತಿ, ಮನಃಶಾಂತಿ ಇಲ್ಲದಿರುವಿಕೆ, ಅತಿನಿದ್ರೆ ಅಥವಾ ನಿದ್ರಾಹೀನತೆ, ಹುಚ್ಚು (ಬಲವಶದಿಂದ) ದುರ್ಗಾ ಕೋಪ, ಮಾತೃಶಾಪ, ಯಕ್ಷಿಭಾಧೆ, ಧರ್ಮದೈವಗಳ ಪೀಡೆ, ದೇವತಾಗಣಗಳ ಉಪದ್ರವಗಳನ್ನು ಜಾತಕ ಯಾ ಪ್ರಶ್ನೆಯಲ್ಲಿ ಚಿಂತಿಸಬೇಕು.

ಪರಿಹಾರಕ್ಕಾಗಿ 11 ಸಾವಿರ ಚಂದ್ರಮಂತ್ರ ಜಪ, ಅಕ್ಕಿ, ಶಂಖ, ಮುತ್ತು, ಬಿಳಿ ವೃಷಭ, ಹಾಲು, ತುಪ್ಪ, ಗಜದಾನ. ಚಂದ್ರಮಂತ್ರದಿಂದ ಹೋಮ, ನವಗ್ರಹಹೋಮ, ಶ್ರೀಸೂಕ್ತ, ದುರ್ಗಾಸೂಕ್ತ, ಪುನಶ್ಚರಣೆ ಹೋಮ, ಸಪ್ತಶತೀ ಪಾರಾಯಣ, ಲಕ್ಷ್ಮೀ ಹೃದಯ ಪಾರಾಯಣ, ಚಂಡಿಕಾ ಹೋಮ, ಲಕ್ಷ್ಮೀಹೃದಯ ಹೋಮ, ದುರ್ಗಾಹೋಮ, ತ್ರಿಮಧ್ವಕ್ತದೂರ್ವಾದಿಂದ ಚಂದ್ರಮಂತ್ರ ಹೋಮ, ವಿಶೇಷವಾದ ದೇವಿಯ ಆರಾಧನೆ.

ಮುಹೂರ್ತಕ್ಕೆ ಇವನು ಅಧಿಪತಿಯು. (ಒಂದು ಮುಹೂರ್ತ ಎಂದರೆ ಎರಡು ಘಳಿಗೆ) ವೇದಗಳಲ್ಲಿ ಇವನು ವನಸ್ಪತಿಗಳ, ಸೋಮರಸದ ಅಧಿಪತಿಯೆಂದು ವರ್ಣಿತನಾಗಿದ್ದಾನೆ.

ಸಂಹಿತಾ ಗ್ರಂಥದಲ್ಲಿ ಚಂದ್ರನ ಆಕಾರ ವಿಶೇಷದಿಂದ ಹ್ರಸ್ವ, ಮಹಾನ್, ಮಧ್ಯತನುರೂಪ, ವಿಶಾಲಮೂರ್ತಿ, ಸ್ಥೂಲ, ಕೃಶಮೂರ್ತಿ ಎನ್ನುವ ಸಪ್ತರೂಪ ವಿಶೇಷಗಳು ಹೇಳಲ್ಪಟ್ಟಿದೆ. ಚಂದ್ರನ ಶೃಂಗವು ಕುಜಾದಿ ಗ್ರಹರಿಂದ ಭಿನ್ನವಾದಾಗ ಪ್ರತ್ಯೇಕ ಫಲವೂ ಹೇಳಲ್ಪಟ್ಟಿದೆ. ಶುಕ್ಲಪಕ್ಷ ವೃದ್ಧಿಯಾದರೆ ಶುಭವೂ ಹೀನವಾದರೆ ಅಶುಭವೂ ಕೃಷ್ಣಪಕ್ಷ ವೃದ್ಧಿಯಾದರೆ ಅಶುಭವೂ ಕ್ಷಯವಾದರೆ ಶುಭವೂ ಹೇಳಲ್ಪಟ್ಟಿದೆ. ತ್ರಯೋದಶ ದಿನ ಪಕ್ಷವೂ ಅಶುಭ ಎಂದು ಪರಿಗಣಿಸಲ್ಪಟ್ಟಿದೆ.

ಪುರಾಣಗಳಲ್ಲಿ ಕ್ಷೀರಸಮುದ್ರಸಂಜಾತನೆಂದೂ, ಅತ್ರಿನೇತ್ರೋದ್ಭವನೆಂದೂ ವರ್ಣಿತನಾಗಿರುತ್ತಾನೆ. ಈತನು ವಿಷಮರಾಶಿಯಲ್ಲಿ ಮೊದಲನೆ ಹೋರೆಗೂ ಸಮರಾಶಿಯಲ್ಲಿ ಎರಡನೇ ಹೋರೆಗೂ ಅಧಿಪತಿ. ದ್ರೇಕಾಣಾಧಿಪತ್ಯವಿಲ್ಲ.

**ಶ್ರೀ ಮಾಧ್ವಗ್ರಂಥಗಳ ಅಧ್ಯಯನ ನಿಮ್ಮ ಯೋಗ್ಯತೆಗೆ ಸರಿಯಾಗಿ ಮಾಡಿರಿ.**



ಚಂದ್ರನು ಹುಣ್ಣಿಮೆಯ ದಿನ ಇರುವ ನಕ್ಷತ್ರದಿಂದಾಗಿ ಮಾಸಕ್ಕೆ ಚೈತ್ರಾದಿ ನಾಮಗಳು ಪ್ರಾಪ್ತವಾಗಿದೆ. ಉದಾ:– ಚೈತ್ರಮಾಸದ ಹುಣ್ಣಿಮೆಯಂದು ಚಿತ್ರಾ ನಕ್ಷತ್ರದಲ್ಲಿ ಚಂದ್ರನಿರುವ ಪ್ರಯುಕ್ತ ಅದು ಚೈತ್ರ ಮಾಸವಾಯಿತು. ವಿಶಾಖಾ ನಕ್ಷತ್ರದಲ್ಲಿ ವೈಶಾಖ ಮಾಸದ ಹುಣ್ಣಿಮೆಯಂದು ಚಂದ್ರನಿರುವ ಪ್ರಯುಕ್ತ ಅದು ವೈಶಾಖವಾಯಿತು. (ವಿ.ಸೂ. ಚಿತ್ರಾ.ಸ್ವಾತೀ, ಚೈತ್ರ, ವಿಶಾಖಾ ಅನುರಾಧದಿಂದ ವೈಶಾಖ ಹೀಗೆ ಎರಡೆರಡು ನಕ್ಷತ್ರಗಳು ಕೆಲವೊಮ್ಮೆ ಮೂರು ನಕ್ಷತ್ರಗಳ ಸಂಭವ. ಆದರೆ ಚತುರ್ಯುಗದ ಆದಿಯಲ್ಲಿ ಹುಣ್ಣಿಮೆಯಂದು ಆಯಾ ನಕ್ಷತ್ರಗಳಲೇ ಚಂದ್ರನ ಸ್ಥಿತಿ ಇತ್ತು). ★

---

(28ನೇ ಪುಟದಿಂದ............)

ಸ್ಮೃತಿ ವ್ಯಾಖ್ಯಾನ ನರಹರೀಯದಲ್ಲಿ ಹೀಗೆ ಹೇಳಿದ್ದಾರೆ. ಉಳಿದ ವ್ಯಾಖ್ಯಾನಕಾರರ ಅಭಿಪ್ರಾಯವೂ ಹೀಗೆಯೇ ಇದೆ. ಇದಕ್ಕೆ ಪ್ರಮಾಣವೂ ಇದೆ.

**ಉಪಾಸ್ತಿ ಸಂಧೌ ಸೂರ್ಯಸ್ಯ**
**ನಿಶಾಯಾಂ ದಿವಸಸ್ಯ ಚ ।**
**ತಾಮೇವ ಸಂಧ್ಯಾ ತಸ್ಮಾತ್ತು**
**ಪ್ರವದಂತಿ ಮಹರ್ಷಯಃ ॥**

**ಏವಂಚ ಸೂರ್ಯಾಂತರ್ಗತ ಭಗವದ್ಧ್ಯಾನಮೇವ ಸಂಧ್ಯೇತ್ಯುಕ್ತಂ ಭವತಿ.** (ಸಂಧ್ಯಾಭಾಷ್ಯ) ಸಂಧ್ಯಾ ಎಂದರೆ ಸೂರ್ಯಾಂತರ್ಗತ ಭಗವಂತನ ಧ್ಯಾನ ಎಂದರ್ಥ. ಆದ್ದರಿಂದ ಪೂರ್ವಾಂ ಸಂಧ್ಯಾಂ ಎಂಬಲ್ಲಿ ಸಂಧ್ಯಾ ಶಬ್ದಕ್ಕೆ ಗಾಯತ್ರೀ ಎಂದೇ ಅರ್ಥ ಸಿದ್ಧವಾಗಿದೆ. ಆದ್ದರಿಂದ ಉತ್ತರಾಂ ಉಪವಿಶ್ಯೇವ ಎಂಬ ಶ್ರೀಮದಾಚಾರ್ಯರ ವಚನ ಗಾಯತ್ರೀ ಜಪಕ್ಕೆ ಮಾತ್ರ ಸೀಮಿತವಾದದ್ದು ಎಂದು ಅರ್ಥೈಸಿಕೊಂಡು ಋಗ್ವೇದಿಗಳು ಮೂರು ಕಾಲಗಳಲ್ಲಿಯೂ ನಿಂತೇ ಅರ್ಘ್ಯಪ್ರದಾನ ಮಾಡಬೇಕು. ಸಾಯಂಕಾಲ ಕುಳಿತು ಜಪ.

ಸಾಯಂಕಾಲ ನಿಂತು ಅರ್ಘ್ಯಪ್ರದಾನ ಮಾಡುವುದು ಋಕ್ ಶಾಖಿಗಳನ್ನು ಬಿಟ್ಟು ಬೇರೆ ಶಾಖೆಯವರಿಗೆ ಎಂದು ತಿಳಿಯಬಹುದು. ★

**('ಮುಂದಿನ ಸಂಚಿಕೆಯಲ್ಲಿ ಸಾಯಂ ಸಂಧ್ಯೆಯಲ್ಲಿಯೂ ಕುಳಿತೇ ಅರ್ಘ್ಯಪ್ರದಾನ' ಎಂಬ ವಿಷಯದ ಬಗ್ಗೆ ಲೇಖನವನ್ನು ನಿರೀಕ್ಷಿಸಿ.)**

**ಎಷ್ಟೋ ಜನುಮದ ಸುಕೃತದಿಂದ ಪ್ರಾಪ್ತನಾದ ಈ ಮನುಷ್ಯ ಜನ್ಮವನ್ನು ಸಾರ್ಥಕಪಡಿಸಿಕೊಳ್ಳಿ.**

ಸರ್ವಮೂಲ ಜನವರಿ 2008

ಸ್ಪಂದನಕ್ಕೊಂದು ಪ್ರತಿಕ್ರಿಯೆ

# ಅನಂತಪದ್ಮನಾಭನೆಂದೇ ಪ್ರಾಜ್ಞರು ಪೂಜಿಸಿದರು

ಶ್ರೀಯುತ ಅನಂತೇಶ್ವರ ದೇವಸ್ಥಾನದಲ್ಲಿ ಹಿಂದಿನಿಂದಲೂ ರುದ್ರನ ಸನ್ನಿಧಿ ಇದೆ ಎಂಬ ನಂಬಿಕೆಯನ್ನು ದೃಢ ಪಡಿಸಲು ಶ್ರೀಮಹಾಭಾರತತಾತ್ಪರ್ಯನಿರ್ಣಯದ ಅಶ್ವಮೇಧ ಯಾಗಕ್ಕೆ ಸಂಬಂಧಿಸಿದ ಪ್ರಕರಣವನ್ನು ಅನಂತೇಶ್ವರ ದೇವಾಲಯಕ್ಕೆ ಸಂಬಂಧ ಹಚ್ಚುವ ಪ್ರಯತ್ನವನ್ನು ನಡೆಸಿದ್ದಾರೆ. ವಸ್ತುತಃ ಇಂತಹ ಚಿಂತನೆಗೆ ಆಧಾರವಾದ ಮೂಲ ವಿಷಯವೆ ದೋಷಪೂರಿತವಾಗಿದೆ. ಏಕೆಂದರೆ ಉಡುಪಿಯ ಅನಂತೇಶ್ವರ ಲಿಂಗದಲ್ಲಿ ರುದ್ರನ ಸನ್ನಿಧಾನ ಇದೆ ಎಂಬುದು ಹಿಂದಿನಿಂದ ಬಂದ ಪ್ರಾಜ್ಞರ ನಂಬಿಕೆಯಲ್ಲ. ಕೇವಲ ಅಜ್ಞರ ನಂಬಿಕೆಯಷ್ಟೆ. ಹಿಂದಿನಿಂದ ಇಂದಿನವರೆಗೂ ಪ್ರಾಜ್ಞರು ಅನಂತೇಶ್ವರನನ್ನು ಲಿಂಗರೂಪಿಯಾದ ಅನಂತಪದ್ಮನಾಭನೆಂದೇ ಆರಾಧಿಸುತ್ತಾ ಬಂದಿದ್ದಾರೆಯೆ ಹೊರತು ಶಂಕರನಾರಾಯಣ ಎಂದಾಗಲಿ, ಶಿವಾಂತರ್ಗತ ಪರಶುರಾಮ ಎಂದಾಗಲಿ, ಶಿವಾಂತರ್ಗತ ಅನಂತಪದ್ಮನಾಭ ಎಂದಾಗಲಿ ಆರಾಧಿಸುತ್ತಿಲ್ಲ. ಇದಕ್ಕೆ ಸಂಬಂಧಿಸಿದಂತೆ ಸರ್ವಮೂಲ ಪತ್ರಿಕೆಯಲ್ಲಿ ಈಗಾಗಲೆ ಪುರಾಣಗಳ, ಮಧ್ವವಿಜಯ, ತೀರ್ಥಪ್ರಬಂಧ ಮುಂತಾದ ಗ್ರಂಥಗಳ ಅಭಿಪ್ರಾಯಗಳು ಪ್ರಕಟವಾಗಿವೆ. ಸಾವಿರಾರು ವರ್ಷಗಳ ಹಿಂದಿನ ಪುರಾಣಗಳಲ್ಲಿ, 800 ವರ್ಷಗಳ ಹಿಂದಿನ ಮಧ್ವವಿಜಯದಲ್ಲಿ, 400 ವರ್ಷದ ಹಿಂದಿನ ತೀರ್ಥಪ್ರಬಂಧದಲ್ಲಿ ಸ್ಪಷ್ಟವಾಗಿ ಅನಂತಪದ್ಮನಾಭನೆಂದೇ ಉಲ್ಲೇಖವಿದೆ. ಆದ್ದರಿಂದ 'ಹಿಂದಿನಿಂದ ರುದ್ರನ ಸನ್ನಿಧಾನವಿದೆ ಎಂಬ ನಂಬಿಕೆ ಇತ್ತು' ಎಂಬುದು ತಪ್ಪು ಕಲ್ಪನೆ ಎಂದು ಸ್ಪಷ್ಟವಾಗುತ್ತದೆ.

ಇದಲ್ಲದೆ ಇಂದಿಗೂ ಪ್ರಾಜ್ಞರ ರೂಢಿಯನ್ನು ಗಮನಿಸಿದಾಗ ಹಿಂದಿನಿಂದಲೂ ಕೇವಲ ಅನಂತಪದ್ಮನಾಭನೆಂದೇ ಆರಾಧಿಸುತ್ತಿದ್ದರು ಹೊರತು ಬೇರೆ ವಿಧದಿಂದಲ್ಲವೆಂಬುದು ಬಹಳ ಸ್ಪಷ್ಟವಾಗುತ್ತದೆ.

ಅಷ್ಟಮಠಾಧೀಶರು ಹಿಂದಿನಿಂದ ಇಂದಿನವರೆಗೆ ಪ್ರತಿದಿನವೂ ಅನಂತೇಶ್ವರ ದೇಗುಲಕ್ಕೆ ಭೇಟಿ ನೀಡುತ್ತಾರೆ. ವಿಶೇಷ ಸಂದರ್ಭಗಳಲ್ಲಿ ಪ್ರಾರ್ಥನೆಯನ್ನು ಸಲ್ಲಿಸುತ್ತಾರೆ. ಆ



ಎಲ್ಲ ಸಂದರ್ಭದಲ್ಲಿಯೂ ಪ್ರಾರ್ಥನೆ, ಪೂಜೆ, ನಮಸ್ಕಾರಗಳನ್ನು ಸಲ್ಲಿಸುವಾಗ ಮೊದಲು ಅನಂತೇಶ್ವರನಿಗೆ ಸಲ್ಲಿಸಿ ಮತ್ತೆ ಅಲ್ಲಿಯೆ ಅದೃಶ್ಯರಾಗಿರುವ ಶ್ರೀಮಧ್ವರ ಸನ್ನಿಧಾನಕ್ಕೆ ಸಲ್ಲಿಸುತ್ತಾರೆ. ಒಂದೊಮ್ಮೆ ಶಿವಾಂತರ್ಗತ ಅನಂತಪದ್ಮನಾಭ ಅಥವಾ ಪರಶುರಾಮ ಎಂಬ ನಂಬಿಕೆ ಇದ್ದರೆ ಈ ರೀತಿ ಆರಾಧಿಸಲು ಸಾಧ್ಯವಿಲ್ಲ. ಏಕೆಂದರೆ ಶಾಸ್ತ್ರಗಳ ಪ್ರಕಾರ ಮೊದಲು ಶಿವನಿಗೆ ಪೂಜೆ ಸಲ್ಲಿಸಿ ಬಳಿಕ ವಾಯುದೇವರಿಗೆ ಪೂಜೆ ಸಲ್ಲಿಸಲಾಗದು. ಶಿವನ ಅಂತರ್ಯಾಮಿಯಾದ ಅನಂತಪದ್ಮನಾಭನಿಗೆ ಪೂಜೆ ಸಲ್ಲಿಸುವುದರಿಂದ ಬಳಿಕ ಶ್ರೀಮಧ್ವರಿಗೆ ಪೂಜೆ ಸಲ್ಲಿಸುವುದು ತಪ್ಪಾಗುವುದಿಲ್ಲ ಎಂದು ತಿಳಿಯುವಂತಿಲ್ಲ. ಏಕೆಂದರೆ ಶ್ರೀಮಧ್ವರ ಪೂಜೆ ಎಂದರೆ ಮಧ್ವರ ಅಂತರ್ಗತನಾದ ಭಗವಂತನ ಪೂಜೆ ಎಂದೇ ಅರ್ಥ. 'ತತ್ರ ತತ್ರ ಸ್ಥಿತೋ ವಿಷ್ಣುಃ ತತ್ತಚ್ಛಕ್ತೀಃ ಪ್ರಬೋದಯನ್ । ಏಕೇವ ಮಹಾನ್ ಶಕ್ತಿಃ ಕುರುತೇ ಸರ್ವಮಂಜಸಾ' ಎಂದು ಶ್ರೀಮಧ್ವರು ಅದೇಶಿಸಿರುವಂತೆ ಎಲ್ಲ ದೇವತೆಗಳ ಪೂಜೆಯೂ ಅಂತರ್ಗತನಾದ ನಾರಾಯಣನ ಪೂಜೆಯೇ ಆಗುತ್ತದೆ. ಅದರಲ್ಲಿಯೂ ಉಪನಿಷತ್ತು ವಿಶೇಷವಾಗಿ ನಮಸ್ತೇ ವಾಯೋ । ತ್ವಮೇವ ಪ್ರತ್ಯಕ್ಷಂ ಬ್ರಹ್ಮಾಸಿ । ಎಂದು ವಾಯುದೇವರು ಭಗವಂತನ ಸಾಕ್ಷಾತ್ ಪ್ರತೀಕವೆಂದು ತಿಳಿಸಿದ್ದರಿಂದ ವಾಯುದೇವರ (ಮಧ್ವರ) ಪೂಜೆಯಂತೂ ಅಂತರ್ಗತನಾದ ನಾರಾಯಣನ ಪೂಜೆಯೇ ಆಗುತ್ತದೆ. ಆದ್ದರಿಂದ ಮೊದಲು ಶಿವನ ಅಂತರ್ಯಾಮಿಯಾದ ಅನಂತಪದ್ಮನಾಭನಿಗೆ ಪೂಜೆ ಸಲ್ಲಿಸಿ ಬಳಿಕ ಮಧ್ವರ ಅಂತರ್ಯಾಮಿಯಾದ ನಾರಾಯಣನಿಗೆ ಪೂಜೆ ಸಲ್ಲಿಸಿದರೆ ಮೊದಲು ನೀಚಾಧಿಷ್ಠಾನಕ್ಕೆ ಪೂಜೆ ಸಲ್ಲಿಸಿ ಬಳಿಕ ಉಚ್ಚಾಧಿಷ್ಠಾನಕ್ಕೆ ಪೂಜೆ ಸಲ್ಲಿಸಿದಂತಾಗಿ ಶಾಸ್ತ್ರದ ನಿಯಮಕ್ಕೆ ವಿರುದ್ಧವಾಗುತ್ತದೆ. ತತ್ವಜ್ಞಾನದ ತಲಸ್ಪರ್ಶಿ ಪಾಂಡಿತ್ಯವುಳ್ಳ, ತಪಸ್ವಿಗಳಾದ ಅಷ್ಟಮಠಾಧೀಶರು ಹಿಂದಿನಿಂದಲೂ ಎಂದಿಗೂ ಹೀಗೆ ಶಾಸ್ತ್ರಕ್ಕೆ ವಿರುದ್ಧವಾಗಿ ಉಪಾಸನೆ ನಡೆಸುವವರಲ್ಲ. ಅವರು ಮೊದಲು ಅನಂತೇಶ್ವರನಿಗೆ ಪೂಜೆ ಸಲ್ಲಿಸುತ್ತಾರೆಂದೇ ತಿಳಿಯಬೇಕು. ಆದ್ದರಿಂದಲೆ ಬಳಿಕ ಶ್ರೀಮಧ್ವರಿಗೆ ಪೂಜೆ ಸಲ್ಲಿಸುತ್ತಾರೆ. ಅಷ್ಟಮಠಾಧೀಶರು ಇಂದಿಗೂ ಪ್ರದೋಷಕಾಲದಲ್ಲಿ ಅನಂತೇಶ್ವರ ದೇವಾಲಯಕ್ಕೆ ಭೇಟಿಕೊಟ್ಟರೂ ಅದು ವಿಶೇಷವಾಗಿ ಶಿವನಿದ್ದಾನೆಂಬ ಅನುಸಂಧಾನದಿಂದಲ್ಲ. ಪ್ರದೋಷಕಾಲದಲ್ಲಿ ಶಿವನ ಸಂದರ್ಶನ ಮಹಾಪುಣ್ಯಪ್ರದ. ಅದಕ್ಕಾಗಿ ಚಂದ್ರಮೌಳೀಶ್ವರನನ್ನು ನಮಸ್ಕರಿಸಿ ಬಳಿಕ ಅನಂತೇಶ್ವರಕ್ಕೆ ಬರುತ್ತಾರಷ್ಟೆ. ಏಕೆಂದರೆ ಉಡುಪಿಯಲ್ಲಿ ಕೇವಲ ಚಂದ್ರಮೌಳೀಶ್ವರನನ್ನಾಗಲಿ, ಅನಂತೇಶ್ವರನನ್ನಾಗಲಿ ಸಂದರ್ಶಿಸವು

ಕ್ರಮವಿಲ್ಲ. ಚಂದ್ರಮೌಳೀಶ್ವರನನ್ನು ಕಂಡು ಬಳಿಕ ಅನಂತೇಶ್ವರ ದರ್ಶನದಿಂದಲೆ ಪೂರ್ಣಫಲವೆಂದು ಶಿಷ್ಟ ಸಂಪ್ರದಾಯ. ಅದಕ್ಕಾಗಿ ಅಷ್ಟಮಠಾಧೀಶರು ಮೊದಲು ಶಿವನನ್ನು ಕಂಡು ಬಳಿಕ ಶಿವನ ಒಡೆಯನಾದ ಭಗವಂತನನ್ನು ಕಾಣಲು ಬರುತ್ತಾರೆ. ಹೀಗೆ ಅಷ್ಟಾಮಠಾಧೀಶರು ಹಿಂದಿನಿಂದಲೂ ಅನಂತೇಶ್ವರನನ್ನು ಅನಂತಪದ್ಮನಾಭನೆಂದೇ ಆರಾಧಿಸುತ್ತಿದ್ದಾರೆಯೇ ಹೊರತು ಬೇರೆ ವಿಧದಿಂದಲ್ಲವೆಂಬುದು ಸ್ಪಷ್ಟವಾಗುತ್ತದೆ.

ತೌಳವ ಮಾಧ್ವ ಬ್ರಾಹ್ಮಣರಲ್ಲಿ ಹಿಂದಿನಿಂದಲೂ ಯಾವುದೇ ಶುಭಸಮಾರಂಭವನ್ನು ನಡೆಸುವಾಗ ದೇವತಾಪ್ರಾರ್ಥನೆಯನ್ನು ಸಲ್ಲಿಸುವುದಿದೆ. ಆ ಸಂದರ್ಭದಲ್ಲಿ ಕ್ಷೇತ್ರಾಧಿಪತಿಯಾದ ಅನಂತೇಶ್ವರನನ್ನು ಪ್ರಾರ್ಥಿಸುವಾಗ ಎಲ್ಲ ಕಡೆಯೂ 'ಪೂರ್ವೇಪಿ ಕರ್ದಮ ಪರಾಶರ ಪಾಂಡುಮುಖ್ಯಾಃ ........ ನಾರಾಯಣಂ ಕುಲಪತಿಂ ಶರಣಂ ವ್ರಜೇಮ' ಎಂಬ ಶ್ಲೋಕವನ್ನೇ ಪಠಿಸುತ್ತಾರೆ ಹೊರತು ಬೇರೆ ಶ್ಲೋಕವನ್ನಲ್ಲ. ಈ ಶ್ಲೋಕವು ನಾರಾಯಣನ ಪರವಾಗಿದೆ ಹೊರತು ಇಲ್ಲಿ ಸ್ವಲ್ಪವೂ ಶಿವನಿದ್ದಾನೆಂಬ ಸುಳಿವೂ ಇಲ್ಲ. ಈ ಪ್ರಾಚೀನವಾದ ಪ್ರಾಜ್ಞರ ರೂಢಿಯಿಂದಲೂ ಅನಂತೇಶ್ವರ ಲಿಂಗದಲ್ಲಿ ಅನಂತಪದ್ಮನಾಭನೇ ನೆಲೆಲಸಿರುವುದು ಸ್ಪಷ್ಟವಾಗುತ್ತದೆ.

ಅನಂತೇಶ್ವರನನ್ನು ನಾರಾಯಣ, ಅನಂತಪದ್ಮನಾಭ ಎಂದು ಸ್ತುತಿಸುವ ಶ್ಲೋಕಗಳು, ಸ್ತೋತ್ರಗಳು ದೊರೆಯುತ್ತವೆ ಹೊರತು ಶಿವ, ಶಂಕರ-ನಾರಾಯಣ ಎಂದು ಪ್ರಾಜ್ಞರು ಹೊಗಳಿರುವ ಒಂದೇ ಒಂದು ಸ್ತೋತ್ರವಾಗಲಿ, ಶ್ಲೋಕವಾಗಲಿ ದೊರೆಯುವುದಿಲ್ಲ (ಅಜ್ಞರು ಇತ್ತೀಚೆಗೆ ರಚಿಸಿರುವ ಕೆಲವು ಕನ್ನಡ ಪದ್ಯಗಳಿರಬಹುದು) ಇದರಿಂದಲೂ ಹಿಂದಿನಿಂದ ಅನಂತಪದ್ಮನಾಭನೆಂದೇ ಪ್ರಾಜ್ಞರು ಪೂಜಿಸುತ್ತಿದ್ದರೆಂಬುದು ಸ್ಪಷ್ಟವಾಗುತ್ತದೆ.

ಹೀಗೆ ಅನೇಕ ವಿಧದಿಂದ ಚಿಂತಿಸಿದಾಗ ಪ್ರಾಜ್ಞರು ಹಿಂದಿನಿಂದಲೂ ಅನಂತಪದ್ಮನಾಭನೆಂದೇ ಪೂಜಿಸುತ್ತಿರುವುದು ದೃಢವಾಗುತ್ತದೆ. ಕೇವಲ ಪುರಾಣಗಳ-ಸಂಪ್ರದಾಯದ ಅರಿವಿಲ್ಲದ ಅಜ್ಞರು ಮಾತ್ರ ಶಿವ, ಶಂಕರನಾರಾಯಣ ಎಂದೆಲ್ಲ ಆರಾಧಿಸುತ್ತಾರೆ. ಇದು ಶಾಸ್ತ್ರೋಕ್ತವಾದ ಮಾರ್ಗವಲ್ಲ. ಕೇವಲ ಪೂರ್ವಾಗ್ರಹದಿಂದ ಅಥವಾ ಎಲ್ಲರನ್ನು ಒಲೈಸುವ ಬುದ್ಧಿವಂತಿಕೆಯಿಂದ ಬಂದ ಮಾತುಗಳಷ್ಟೆ ಆಗಿದೆ. ಆದ್ದರಿಂದ ನಿಜವಾದ ಜಿಜ್ಞಾಸುಗಳು ಪುರಾಣಗಳ-ಪ್ರಾಜ್ಞರ ಸಂಪ್ರದಾಯವನ್ನೇ ಅನುಸರಿಸುವುದು ಅನಂತೇಶ್ವರನ ಅನುಗ್ರಹಕ್ಕೆ ಕಾರಣವಾಗುವ ಸೂಕ್ತ ಮಾರ್ಗವೆಂದು ಅಭಿಪ್ರಾಯ.



ಪರಶುರಾಮ ದೇವರು ಲಿಂಗಾಕಾರವಾಗಿಯೇ ಏಕೆ ಆವಿರ್ಭವಿಸಿದರು ಎಂಬ ಸಂಶಯವಿತ್ತು. ಆದರೆ ಇತ್ತೀಚೆಗೆ ಆಚಾರ್ಯರ ಮಹಾಭಾರತ ತಾತ್ಪರ್ಯ ನಿರ್ಣಯ ಪುನಃ ನೋಡುವಾಗ ಒಂದು ಸಮಾಧಾನ ಸಿಕ್ಕಿತು.

ಅಧ್ಯಾಯ 30-ಶ್ಲೋಕ 78 ತಚ್ಛಂಕರ ಶರೀರಸ್ಥಂ ಜಾಮದಗ್ನ್ಯಂ ಹರಿಂ ಪರಮ್ ।
ಇಷ್ಟ್ವೈವಾನುಜ್ಞಯಾ ತಸ್ಯ ಸ್ವೀಕೃತ್ಯಂ ಯಜ ತೇನ ಚ ॥
ಅಧ್ಯಾಯ 30 - ಶ್ಲೋಕ 80 ಧನಸ್ಯ ದೇವತಾ ವಿಷ್ಣುರ್ಜಾಮದಗ್ನ್ಯಃಖಿಲೇಶ್ವರಃ
ಸ ಶಂಕರ ಶರೀರಸ್ಥೋ ಯಜ್ಞೋಚ್ಛಿಷ್ಟಧನಾದಿಪಃ ॥

ಕನ್ನಡಕ್ಕೆ ಅನುವಾದದ ಪ್ರಕಾರ - ಶಿವ ಶರೀರಾಂತರ್ಗತನಾದ ಪರಶುರಾಮರೂಪೀ ನಾರಾಯಣನನ್ನು ಯಜ್ಞದಿಂದ ಆರಾಧಿಸಿ ಯಾಗಕ್ಕೆ ಧನವನ್ನು ಸ್ವೀಕರಿಸು

ಧನಕ್ಕೆ ದೇವತೆಯಾದ ವಿಷ್ಣುವೆ ಪರಶುರಾಮರೂಪದಿಂದ ಶಿವಶರೀರಾಂತರ್ಗತನಾಗಿ ಯಜ್ಞಶೇಷವಾದ ಧನಕ್ಕೆ ಒಡೆಯನಾಗಿರುತ್ತಾನೆ.

ಈ ಎರಡೂ ಶ್ಲೋಕದ ಒಟ್ಟಾರೆ ತಾತ್ಪರ್ಯದಲ್ಲಿ ಯಜ್ಞ ಮಾಡುವಾಗ (ಧನಕ್ಕೆ) ಪರಶುರಾಮ ದೇವರೇ ರುದ್ರನ ಶರೀರಾಂತರ್ಗತನಾಗಿ ಇರುತ್ತಾರೆ.

ರುದ್ರನಿಗೆ ಪ್ರಮಾರೂಪ ಪೂಜೆ ಇಲ್ಲದಿರುವುದರಿಂದ ಇಲ್ಲಿ ಶರೀರ ಎನ್ನುವುದನ್ನು ಲಿಂಗವೆಂದು ಭಾವಿಸಿದರೂ, ಆ ಲಿಂಗರೂಪದಲ್ಲಿ ಪರಶುರಾಮನ ಸನ್ನಿಧಿ ಎಂದು ತಿಳಿಯಬಹುದು.

ಹಾಗಾಗಿ ಲಿಂಗರೂಪದಲ್ಲಿ ಶಂಕರನ (ರುದ್ರನ) ಶರೀರ ಇದೆ ಎಂದೇ ಭಾವಿಸಿ, ಅನಂತೇಶ್ವರದಲ್ಲಿ ಲಿಂಗರೂಪದಲ್ಲಿ ಶಂಕರನ ಶರೀರ (ದೇಹ) ಮತ್ತು ಅದರೊಳಗೆ ಪರಶುರಾಮರೂಪೀ ನಾರಾಯಣನ ಸನ್ನಿಧಿ ಎಂದು ತಿಳಿಯುವುದು ರಜತಪೀಠ ಮಹಾತ್ಮ್ಯೆ. ಮಧ್ವಾಚಾರ್ಯರ ತಾತ್ಪರ್ಯ, ವಾದಿರಾಜರ ತೀರ್ಥಪ್ರಬಂಧಕ್ಕೆ ಅನುಗುಣವಾಗಿದೆ ಎಂದು ಭಾವಿಸಿದರೆ, ಅನಂತೇಶ್ವರ ದೇವಸ್ಥಾನದಲ್ಲಿ ಹಿಂದಿನಿಂದಲೂ ರುದ್ರನ ಸನ್ನಿಧಿ ಇದೆ ಎಂದು ನಡೆದುಕೊಂಡು ಬಂದ ನಂಬಿಕೆಗೂ ಅಪಚಾರವಾಗುವುದಿಲ್ಲ.